TEXT FLY WITHIN THE BOOK ONLY

UNIVERSAL LIBRARY
OU_200300
UNIVERSAL LIBRARY

ಪ್ರತಿಭಾ ಗ್ರಂಥಮಾಲೆ, ಧಾರವಾಡ. ವರ್ಷ ೫— ಕಿರಣ ೨

# ಕೊಲ್ಗಂಬ

ವಿಕ್ಟರ್ ಹ್ಯೂಗೋರವರ 'ಮರಣದಂಡ[illegible]ಬ ಪುಸ್ತಕದ ಅನುವಾದ

•

ಅನುವಾದಕ:

ಶ್ರೀ. ಹೊಸಮನಿ ಗುಡ್ಡಪ್ಪ, ವಿದ್ವಾನ್.

•

(ಹಕ್ಕು ಪ್ರಕಾಶಕರ ಸ್ವಾಧೀನದಲ್ಲಿದೆ)

೧೯೪೮ ಜನವರಿ • ಬೆಲೆ: ೦–೧೪–೦

ಪ್ರಕಾಶಕರು. ಭಾಲಚಂದ್ರ ಘಾಣೇಕರ,
ಸಮಾಜ ಪುಸ್ತಕಾಲಯ, ಧಾರವಾಡ

## ಪ್ರತಿಭಾ ಗ್ರಂಥಮಾಲೆ, ಧಾರವಾಡ.

ಸಂಪಾದಕರು: ಭಾಲಚಂದ್ರ ಘಾಣೇಕರ.

(ವರ್ಷದಲ್ಲಿ ಸುಮಾರು ೧೨-೧೩ರೂ. ಬೆಲೆಯ ಪುಸ್ತಕಗಳು)
ವಾ. ಚಂದಾ ಅಂಚೆ-ರಜಿಸ್ಟರ್ ಸೇರಿ ೯ರೂ. ಮಾತ್ರ

**೫ನೆಯ ವರುಷದ ಪ್ರಕಟನೆಗಳು—**

೧ ಮುಗಿಲ ಮಲ್ಲಿಗೆ (ಕೆ. ಟಿ. ಪುರಾಣಿಕರ ಕಾದಂಬರಿ)
೨. ಕೊಲ್ಲಂಬ (ಹೊಸಮನಿ ಗುಡ್ಡಪ್ಪ)

**ಅಚ್ಚಿನಲ್ಲಿ**

೩. ಬಾಯಬಂಡಾಯ ಬೇಂದ್ರೆ (ನಾಟಕ)
೪. ಸರೋಜಾ (ಮಿರ್ಜಿ ಅಣ್ಣಾರಾಯರ ಕಾದಂಬರಿ)
ಜೈನೇಂದ್ರ ಕುಮಾರರ ಎರಡು ಕಾದಂಬರಿಗಳು
ಶ್ರೀ. ವಾಡೇದರವರ 'ಪುನರ್ಮಿಲನ' ಇತ್ಯಾದಿ ಬರಲಿವೆ.

★

ಮುದ್ರಕರು: ಎಸ್. ಎಲ್. ಜೋಶಿ,
ಮೋಹನ ಮುದ್ರಣಾಲಯ, ಧಾರವಾಡ.

# ಕೊಲ್ಗಂಬ

## ೧

ಮರಣದಂಡನೆ!

ಅಯ್ದು ವಾರಗಳಿಂದ ಇದನ್ನೇ ಕುರಿತು ವಿಚಾರ ಮಾಡುತ್ತಿದ್ದೇನೆ! ಹಗಲಿರುಳು ನಾನೊಬ್ಬನೇ ಇರುತ್ತೇನೆ. ಮೃತ್ಯುವಿನ ತಣ್ಣಗಿನ ಕರಸ್ಪರ್ಶದ ಅನುಭವವಾಗುತ್ತಿದೆ. ಒಮ್ಮೊಮ್ಮೆ ನನ್ನ ಕುತ್ತಿಗೆಗೆ ಯಾರೋ ಹಗ್ಗದಿಂದ ಉರುಲು ಹಾಕಿದಂತೆ ಭಾಸವಾಗುತ್ತಿದೆ!

ಹೀಗೆ ನನಗೆ ಹಿಂದೆಂದೂ ಆಗಿರಲಿಲ್ಲ; ತುಸುವೇ ದಿನಗಳ ಹಿಂದೆ, ನಾನೂ ಎಲ್ಲರಂತೆ ಸ್ವತಂತ್ರನಾಗಿದ್ದೆ. ಪ್ರತಿದಿನ, ಪ್ರತಿ ಘಂಟೆಯಂತೆ, ಪ್ರತಿ ಕ್ಷಣವೂ ಸ್ವತಂತ್ರನಿರುತ್ತಿದ್ದೆ. ನನ್ನ ಮನಸ್ಸಾದರೂ ನಿರಾತಂಕವಾಗಿತ್ತು. ಹರಯದಿಂದ ಹುರಿಗೊಂಡು ಒಂದು ಬಗೆಯ ಮದದಿಂದ ಮತ್ತವಾಗಿ ಓಲಾಡುತ್ತಿತ್ತು. ಕಟ್ಟುನಿಟ್ಟುಗಳಿಲ್ಲದ, ಅಡ್ಡಿ-ಆತಂಕಗಳಿಲ್ಲದ, ಅಡೆ-ತಡೆಗಳಿಲ್ಲದ ಜೀವನದ ಕಲ್ಪನೆಯೊಂದು ನನ್ನನ್ನು ಹುಚ್ಚನನ್ನಾಗಿ ಮಾಡುತ್ತಿತ್ತು.

ಚೆಲುವೆಯರಾದ ಬಾಲಿಕೆಯರು, ಸೋಲು-ಗೆಲುವು, ಆನಂದ ಮತ್ತು ಕಾಂತಿಯುಕ್ತವಾದ ಕ್ರೀಡಾಂಗಣಗಳು, ಮುಚ್ಚಂಜೆಯ ನಸುಗತ್ತಲೆಯಲ್ಲಿ ಸುಕುಮಾರಿಯರ ಬಾಹುಬಂಧನದೊಳಗೆ ಸ್ವಪ್ನಮಯವಾದ ತಿರುಗಾಟ— ಇವೇ ಮೊದಲಾದ ಸುಖದಲ್ಲಿಯೇ ಬೆಳೆದವನು ನಾನು. ಆಗ ಚಿಂತೆ ನನ್ನ ತೊತ್ತಾಗಿದ್ದಿತು; ಎಷ್ಟೆಂದರೂ ನಾನು ಸ್ವತಂತ್ರನಾಗಿಯೇ ಇದ್ದೆನಲ್ಲವೇ?

ಆದರೆ ಇಂದು? ಇಂದು ನಾನು ಕೈದಿ! ಸಂಕೋಲೆಗಳಿಂದ ಬಂಧಿಸಲ್ಪಟ್ಟು ಸೆರೆಮನೆಯಲ್ಲಿರುವ ಕೈದಿ ನಾನು. ನನ್ನ ಮನಸ್ಸಿನೊಳಗೂ ಈ ಸೆರೆಮನೆಯ ಕತ್ತಲೆಯೇ ಕವಿದಿದೆ. ಭಯಂಕರವಾದುದೊಂದು ಕೊಲೆಯ ಕಲಂಕವು ನನ್ನನ್ನಾವರಿಸಿದೆ.

ಚಿಂತೆಗೆ ನನ್ನ ಮನಸ್ಸಿನಲ್ಲಿ ಎಡೆಯಿಲ್ಲ, ಆದರೆ ಒಂದು ಚಿಂತೆ ಮಾತ್ರ ಹಗಲಿರುಳು ನನ್ನ ಮನಸ್ಸಿನಲ್ಲಿ ಏಳುತ್ತಿದೆ—ಕೊಲ್ಗಂಬದಿಂದ ನನಗೆ ಮರಣ ದಂಡನೆ!

ನೆರಳಿನಂತೆ ಈ ಚಿಂತೆಯೊಂದೇ ನನ್ನನ್ನಾಶ್ರಯಿಸಿದೆ. ಇದನ್ನು ಬಿಟ್ಟು ಬೇರೆ ಸಂಗತಿಯನ್ನು ವಿಚಾರ ಮಾಡಲು ನನಗೆ ಅವಕಾಶವೆಲ್ಲಿ? ಮರೆಯ ಬೇಕೆಂದು ನಾನೆಷ್ಟೋ ಪ್ರಯತ್ನಿಸುತ್ತಿರುವೆ, ಆದರೆ ಅಯ್ಯೋ, ಅದೆಲ್ಲ ವ್ಯರ್ಥ. ಆ ಮೃತ್ಯುವಿನ ಕರಾಳ ಕರಸ್ಪರ್ಶವು ಒಂದು ನಿಮಿಷವಾದರೂ ತಪ್ಪುವುದಿಲ್ಲ ವಲ್ಲ!

ಅದು ಕೆಂಗಣ್ಣು ಕಿಸಿದು ಹಗಲಿರುಳು ನನ್ನನ್ನೇ ನಿಟ್ಟಿಸುತ್ತಿರುವಂತೆ ಭಾಸವಾಗುತ್ತಿದೆ. ಯಾರೋ ನನ್ನ ಸುತ್ತಲೂ ವಿಷಾದದ ಹಾಡನ್ನು ಹಾಡು ತ್ತಿರುತ್ತಾರೆ; ಆಗಾಗ ಯಾರದೋ ಭೀಷಣವಾದ ನಗೆ ಮಿಂಚಿನಂತೆ ನನ್ನ ಕಣ್ಣು ಮುಂದೆಯೇ ಮಿಂಚಿ ಮಾಯವಾಗುತ್ತಿದೆ. ಸೆರೆಮನೆಯ ಆ ಕಿಡಿಕಿ ಯತ್ತ....ಉಶ್....! ಅಲ್ಲಿ ಕಾಣಿಸುವ ಆ ಕಣ್ಣು ಯಾರವವು? ಅವು ಮೃತ್ಯು ವಿನ ನೇತ್ರಗಳೆ! ಅದೇನದು? ಪ್ರೇತದಂತೆ ನನ್ನ ಸುತ್ತಲೂ ಏಕೆ ಸುತ್ತುಹಾಕು ತ್ತಿರಬಹುದು! ಅದರ ಕೈಯೊಳಗಿರುವುದೇನು? ಹಗ್ಗ? ಅಲ್ಲ; ಅದು ಹಗ್ಗವಲ್ಲ. ಅಯ್ಯೋ, ನನಗೆ ಹುಚ್ಚು ಹಿಡಿಯಲಿಕ್ಕಿಲ್ಲವಷ್ಟೆ?

ಒಮ್ಮೆಲೆ ನಿದ್ದೆ ಹರಿಯಿತು. ಆಗ ನನಗೆ ತಿಳಿಯಿತು-ಯಾರೋ ಇಷ್ಟು ಹೊತ್ತಿನ ತನಕ ನನ್ನ ಮೋರೆಯನ್ನು ನೋಡುತ್ತ ನಿಂತಿದ್ದರು. ಇದೇನು ಕನಸಾಗಿರಬಹುದೆ? ಸೆರೆಮನೆಯ ಹುರಬರಕ ಕಲ್ಲುಗಳ ಮೇಲೆ, ದೀಪದ ನಸು ಬೆಳಕಿನಲ್ಲಿ, ಕಾವಲುಗಾರರ ನೀರವ ಮೂರ್ತಿಗಳಲ್ಲಿ, ಕಿಡಿಕಿಯ ಹತ್ತಿರ-ಹತ್ತಿರ ಯಾರು ತಿರುಗಾಡುತ್ತಿರುವರೋ ಏನೊ? ಅವನ ನಾಲಗೆಯ ಮೇಲೆ ಮತ್ತೆ ಮತ್ತೆ ಅದೊಂದೇ ಶಬ್ದ ಹೊರಬೀಳುತ್ತಿದೆ—ಕೊಲ್ಗಂಬ !

## ೨

ಆಗಸ್ಟ ತಿಂಗಳು. ನಿರ್ಮಲವೂ, ಸ್ನಿಗ್ಧವೂ ಸುಂದರವೂ ಆದ ಬೆಳಗಿನ ವೇಳೆ. ಇಂದಿಗೆ ಮೂರು ದಿನಗಳಾದುವು, ನನ್ನ ಅಪಾದನೆಯನ್ನು ಕುರಿತು ವಿಚಾರವು ನಡೆದಿದೆ. ಈ ಮೂರು ದಿನಗಳಲ್ಲಿಯೇ ನನ್ನ ಹೆಸರು ಸುತ್ತಲೂ ಹೆಸರಾಗಿ ಹೋಗಿದೆ. ಸೋಮಾರಿಗಳ ಗುಂಪು—ಒಂದು ಮಿನಿಟೂ ಇವರ ಕೈ ತೆರವು ಇರುವುದಿಲ್ಲ–ಈ ಹೊತ್ತು ನನ್ನನ್ನು ನೋಡಲು ಕೋರ್ಟಿನ ಮುಂದೆ ಇರುವೆ ನುಸುಳುವಷ್ಟು ಸ್ಥಳವಿಲ್ಲದಂತೆ ಒತ್ತಾಗಿ ನೆರೆದಿದ್ದಾರೆ, ಹೆಣದ

ಸುತ್ತಲೂ ಹೆನ್ದುಗಳು ಆಶೆಯಿಂದ ನೆರೆಯುವಂತೆ. ಅವರಾದರೂ ನನ್ನ ಸುತ್ತಲೂ ಚಂಚಲರೂ ಅಧೀರರೂ ಆಗಿ ನೆರೆದಿದ್ದಾರೆ.

ಕಾವಲುಗಾರರ ಈ ವೀರೋಚಿತವಾದ ದರ್ಪ! ಪ್ರೇಕ್ಷಕರ ಈ ಉದಾಸೀನತೆ! ಅಯ್ಯೊ, ಇವೆಲ್ಲ ನನಗೆ ಅಸಹನೀಯವಾಗಿ ತೋರುತ್ತಿವೆ!

ಮೊದಲಿನ ಎರಡು ದಿನ ಮಾತ್ರ ನನಗೆ ರಾತ್ರಿ ನಿದ್ದೆಯೇ ಬರಲಿಲ್ಲ. ಮನಸ್ಸಿನೊಳಗೆ ಒಂದು ಬಗೆಯ ಗಾಬರಿಯಿಂದ ಆರ್ತಸ್ವರವಾದಂತೆ ಎನಿಸ ಹತ್ತಿತು. ಈ ಗಂಭೀರವಾದ ಸಂಶಯವೆಲ್ಲಿಯದು? ಮೂರನೆಯ ದಿನ ರಾತ್ರಿ ದಣಿದು ನಿದ್ರಾದೇವಿಯ ಮೋಹಸ್ಪರ್ಶವನ್ನು ಮೊತ್ತಮೊದಲನೆಯ ಸಲ ಅನುಭವಿಸಿದ್ದು. ಆವೇಶಯುಕ್ತವಾದ ನಿದ್ದೆ–ಅಯ್ಯೊ, ಅದು ಎಲ್ಲ ದಣಿವನ್ನು ಮರೆಸುವುದು. ಕಾವಲುಗಾರನ ಸದ್ದಿನಿಂದ ಒಮ್ಮೆಲೆ ನಿದ್ರಾಭಂಗವಾಯಿತು. ಅವನ ಕಾಲುಗಳಲ್ಲಿ ಭಾರವಾದ ಜೋಡು, ಕೈಯೊಳಗೆ ಕೀಲಿಕೈಗಳ ಗೊಂಚಲು. ಆ ಕಾವಲುಗಾರನು ಒಬ್ಬ ಯಮದೂತನಂತೆಯೇ ಭಾಸವಾಗುತ್ತಿದ್ದ.

ನಾನು ಕಣ್ಣು ತಿಕ್ಕಿಕೊಂಡು ನಾಲ್ಕೂ ದಿಕ್ಕಿಗೆ ನೋಡಿದೆ. ಅದೇ ಸೆರೆಮನೆಯ ಗಟ್ಟಿಮುಟ್ಟಾದ ಕರೀಕಲ್ಲಿನ ಗೋಡೆ! ಮಾಳಿಗೆಯ ಕೆಳಗೆ ಜೇರುಗಿಂಡಿಯೊಳಗಿಂದ ಮುಗಿಲಿನ ಕೆಲಭಾಗವು ಕಾಣಿಸಿತು. ಸೂರ್ಯನ ಬೆಳಕು ಆ ಭಾಗವನ್ನು ಆವರಿಸುವುದರಲ್ಲಿತ್ತು. ಇಂಥ ಪ್ರಕಾಶವು ನಿಜವಾಗಿಯೂ ನನಗೆ ಬಹಳ ಸೇರುತ್ತದೆ.

ನಾನು ಮಾತನಾಡಿದೆ—"ಆಹಾ! ಎಂಥ ಸುಂದರವಾದ ದಿನವಿದು!"

ಕಾವಲುಗಾರನು ಸುಮ್ಮನಿದ್ದ. ನನ್ನ ಮಾತಿಗೆ ಉತ್ತರ ಕೊಡುವ ಆಗತ್ಯವಿಲ್ಲವೆಂದು ಅವನು ತಿಳಿದಿರಬೇಕು. ಮತ್ತೆ ಅವನು ಏನನ್ನೊ ಯೋಚಿಸಿಕೊಂಡು "ಹೂಂ, ಬಹಳ ಸುಂದರವಾದ ದಿನ." ಎಂದ. ಕಲ್ಲಿನಲ್ಲಿ ಕಟೆದ ಗೊಂಬೆಯಂತೆ ನಾನು ನಿಶ್ಚಲನೂ, ಕ್ರಿಯಾಹೀನನೂ, ಆದೆ. ಚೈತನ್ಯವು ನಾಶವಾಯಿತು, ನಾನು ಅದೇ ಕಿಂಡಿಯ ಕಡೆಗೆ ನೋಡುತ್ತಿದ್ದೆ. "ಆಹಾ, ಈ ಬೆಳಗಿನ ವೇಳೆ ಎಷ್ಟು ಸುಂದರವಾಗಿದೆಯಲ್ಲ!" ಮತ್ತೆ ನಾನು ಎಂದೆ.

"ಹೂಂ, ಆದರೆ ಹೊರಗೆಲ್ಲರೂ ನಿನ್ನ ಹಾದಿ ಕಾಯುತ್ತಿದ್ದಾರೆ." ಅವನು ಹೇಳಿದ.

ನನ್ನ ಮಾತಿಗೆ ಅವನು ಹೀಗೆ ಉತ್ತರ ಕೊಡಬೇಕೆ! ಜೇಡನ ಬಲೆಯಂತೆ

ಈ ಉತ್ತರವು ನನ್ನನ್ನು ಹಿಂದಿನ ಚಿಂತೆಗಳ ತೊಡಕಿನಲ್ಲಿ ತೊಡರಿಸಿತು. ಇದೇ ಹೊತ್ತಿಗೆ ಒಂದು ದೃಶ್ಯವು ನನ್ನ ಕಣ್ಣು ಮುಂದೆ ಬಂದು ನಿಂತಿತು—ಆ ಮಮತೆಯಿಲ್ಲದ ಕಠೋರನೂ ಹೃದಯಹೀನನೂ ಆದ ನ್ಯಾಯಾಧೀಶ, ಸಿಟ್ಟಿನಿಂದ ಕೆಂಪಾದ ಆವನ ಆ ಮೋರೆ, ಆಶೆಬುರುಕರಾದ ಆ ಸಾಕ್ಷಿದಾರರ ಗುಂಪು, ಕರಿಯ ಗೌನುಗಳನ್ನುಟ್ಟ ವಿದ್ವಾಂಸರಾದ ವಕೀಲರ ತಂಡ, ಚಿತ್ರಗಳಂತೆ ಸಜ್ಜಾದ ಆ ಕಾವಲುಗಾರರು, ಸಿಪಾಯಿಗಳು, ಆ ಪ್ರೋಕರಿಗಳಾದ ಪ್ರೇಕ್ಷಕರ ತಂಡ!

ನನ್ನ ಮೈಯೆಲ್ಲ ಉರಿದೆದ್ದಿತು. ಶರೀರವು ಕಂಪಿಸತೊಡಗಿತು. ಕಾಲೂ ನಡುಗುತ್ತಿದ್ದುವು. ಕಾವಲುಗಾರನು ನನ್ನನ್ನು ಹಿಡಿದು ಹೊರಗೆ ಎಳೆದುಕೊಂಡು ಬಂದ. ನನಗೆ ಹೊರಗಿನ ಹವೆಯಿಂದ ಸ್ವಲ್ಪ ಸುಖವೆನಿಸಿತು. ದುಶ್ಚಿಂತೆ ದೂರಾಯಿತು. ತಲೆಯ ಮೇಲೆ ವಿಶಾಲವಾದ ನೀಲಬಣ್ಣದ ಆಗಸ, ಎಳೆಬಿಸಿಲಿನ ಮಧುರ ಸ್ಪರ್ಶ, ಸುತ್ತಲೂ ಹಕ್ಕಿಗಳ ಕಲಕಲ ನಿನಾದ, ದೂರದಲ್ಲಿದ್ದ ಗಿಡಗಳ ನೆರಳು—ಆಹಾ! ಈ ಜಗತ್ತು ಎಷ್ಟು ಸುಂದರವಿದೆಯಲ್ಲ! ನನಗೆ ಇಂದೇ ಇದು ಗೊತ್ತಾಯಿತು.

ಆಮೇಲೆ ಮತ್ತೆ ಅದೇ ಪ್ರಾಣ ಹಿಂಡುವಂಥ, ಉಸಿರುಗಟ್ಟುವಂಥ ಹವೆ. ಬಾಳಿನ ನಂತರ ಸಾವು—ಆ ಸಾವಾದರೂ ಹೀಗೆಯೇ ಭೀಷಣವಾಗಿರಬಹುದೆ? ನಾನು ಹೋದ ಕೂಡಲೇ ಸುತ್ತಲೂ ನೆರೆದ ಆ ಜನರು ಗದ್ದಲವನ್ನೇ ಮಾಡತೊಡಗಿದರು. ಕಿವಿಮಾತು, ಕಾಗದ-ಪತ್ರಗಳ ಕರಬರ ಸಪ್ಪಳ, ಜೋಡುಗಳ ಜಿರ್‌ಬರ್ ಶಬ್ದ, ಇವೆಲ್ಲವೂ ಕೂಡಿ ವಿಚಿತ್ರವೇ ಆದ ಮಿಶ್ರರಾಗವೊಂದು ಹುಟ್ಟಿತು. ನನ್ನನ್ನು ನೋಡಲು ಅವರೆಲ್ಲರೂ ಧೈರ್ಯದಿಂದ ಹಾದಿ ಕಾಯುತ್ತಿದ್ದರು. ನಾನು ಬಂದುದರಿಂದ ಅವರಿಗೂ ಸ್ವಲ್ಪ ವಿಶ್ರಾಂತಿ ದೊರೆಯಿತು, ಎಂಥ ನಾಚಿಕೆಗೇಡಿತನ, ಎಂಥ ಕಟುಕತನವಿದು! ಒಬ್ಬನಿಗಾಗುವ ಮರಣದಂಡನೆಯ ಅಪ್ಪಣೆಯನ್ನು ಕೇಳಲು ಈ ಕಾಡು ಪಶುಗಳಿಗೆ ಎಷ್ಟು ಕುತೂಹಲವಿದೆಯಲ್ಲ!

ನಾಲ್ಕೂ ನಿಟ್ಟಿಗೂ ಶಾಂತಿಯೇ ಶಾಂತಿ ವಿರಾಜಿಸುತ್ತಿದೆ! ಬಿರುಗಾಳಿ ಬೀಸುವ ಮುನ್ನ ಪ್ರಕೃತಿ ಶಾಂತವಾಗಿರುವಂತೆಯೇ ನಿಃಸ್ತಬ್ಧತೆ! ಈಗ ಬಿರುಗಾಳಿ ಬೀಸುವುದು! ಒಂದು ಭಯಂಕರ ಬಿರುಗಾಳಿ ಬರುವುದು! ನನ್ನ ಎಲುವುಗಳನ್ನು ನುಚ್ಚುನೂರುಮಾಡಿ, ನರನಾಡಿಗಳನ್ನು ಹಿಂಡಿ ಹಿಪ್ಪಡಿಮಾಡಿ,

ಬಾಳನ್ನು ಸಾವಿರ ಹೋಳು ಮಾಡಿ, ಆಮೇಲೆ ಅದು ತಣ್ಣಗಾಗುವುದು ಇಂದು ನನ್ನ ನ್ಯಾಯವಿಚಾರಣೆಯಾಗುವುದು. ದಂಡದ ವಿಧಾನವೂ ನಡೆಯುವುದು.

ದಂಡ! ಯಾರು ಯಾರಿಗೆ ದಂಡ ಕೊಡುವರು? ಯಾರು ಯಾರ ತಪ್ಪನ್ನು ಕುರಿತು ವಿಚಾರ ಮಾಡುವರು? ನಾನು ಸುಮ್ಮನೆ ನಿಂತುಕೊಂಡು ನಿರೀಕ್ಷಿಸುತ್ತಲಿದ್ದೆ. ಎದೆ ತಡೆತಡೆದು ಡವಡವ ಎನ್ನುತ್ತಿತ್ತು. ಅದು ಎಷ್ಟು ಗಟ್ಟಿಯಾಗಿ ಬಡಿದುಕೊಳ್ಳುತ್ತಿದ್ದಿತಲ್ಲ! ಅದು ಹಾರುವಾಗ "ಧಕ್‌ಧಕ್" ಶಬ್ದ ವಾಗುತ್ತಿತ್ತು; ಅದು ಬಂದೂಕಿನ ಸಪ್ಪಳವನ್ನು ಮೀರಿಸಿತ್ತು.

ನನ್ನ ಎದೆಯಲ್ಲಿ ಆಗ ಯಾವ ನಡುಕವೂ ಇದ್ದಿಲ್ಲ. ನಾನಿರುವ ಕೋಣೆಯ ಕಿಡಿಕಿಯ ಬಾಗಿಲು ತೆರೆದಿತ್ತು, ಅಲ್ಲಿ ಕುಳಿತುಕೊಂಡು ಆಕಾಶ ವನ್ನು ನೋಡುತ್ತಿದ್ದೆ. ಅಲ್ಲಿ ಎಷ್ಟೋ ಸಣ್ಣ ಸಣ್ಣ ಹಕ್ಕಿಗಳು ಹಾರಾಡುತ್ತಿದ್ದುವು. ಶಾಂತವೂ, ಮಧುರವೂ ಆದ ಹವೆ. ಅದು ತಾಯಿಯಂತೆ ನನ್ನ ತಲೆಯ ಮೇಲೆ ತನ್ನ ತಣ್ಣಗಿನ ಕೈಯನ್ನು ಆಡಿಸುತ್ತಿತ್ತು. ವಿಚಾರಣೆ ನಡೆದಾಗ ಜಜ್ಜನ ಕಣ್ಣುಗಳು ನಿದ್ದೆ ಮಾಡುತ್ತಿದ್ದುವು. ಅವನ ಕಡೆಗೆ ನನ್ನ ದೃಷ್ಟಿ ಹೋಗುತ್ತಲೇ ನಾನು ಯೋಚಿಸುತ್ತಿದ್ದೆ–"ಈ ಎಲ್ಲ ಅಭಿನಯವೇಕೆ?"

ಹೊರಗೆ ಅಂಗಡೀಕಾರರು ನಗುತ್ತಿದ್ದರು. ಅವರಿಗೆ ನನ್ನ ಲಕ್ಷ್ಯವೇ ಇಲ್ಲ. ಅವರು ತಮ್ಮ ಮಾತು ಕತೆ, ನಗೆಯೊಳಗೇ ಮುಳುಗಿದ್ದಾರೆ ತಮ್ಮ ನಗೆ-ಮಾತು-ಕತೆ ಮುಗಿದರಲ್ಲವೇ—ಅವರು ಉಳಿದವರನ್ನು ನೋಡುವುದು? ಈ ವ್ಯಾಪಾರಸ್ಥರು ಎಷ್ಟು ಅಜ್ಞಾನಿಗಳಿದ್ದಾರಲ್ಲ! ಮೂರ್ಖಶಿರೋಮಣಿಗಳ ಲ್ಲದೆ ಮತ್ತೇನು!

ಸುತ್ತಲೂ ಇಷ್ಟು ಆನಂದ! ಇಷ್ಟು ವೈಭವ! ಇವು ಇರುವಾಗ ನಾನು ಮೃತ್ಯುವನ್ನು ಕುರಿತು ಯೋಚಿಸುವುದು ತಿಳಿಗೇಡಿತನದ್ದಾಗುವುದು—ಪಾಪ! ಈ ಸ್ನೇಹಮಯವಾದ ವಾಯು, ಇಂಥ ದೇದೀಪ್ಯಮಾನವೂ ಪ್ರಸನ್ನವೂ ಆದ ಸೂರ್ಯನ ಕಿರಣಗಳು! ಇಂಥ ಹೊತ್ತಿನಲ್ಲಿ ಸಾವಿನ ಚಿಂತೆಯೆ—ಎಂಥ ಸರಿ ಹೋಗದ ಸಂಗತಿಯಿದು! ಸೂರ್ಯನ ಕಿರಣದಂತೆ ಆಶೆಯ ಮೋಡವು ಆಗಾಗ ನಿರಾಶೆಯ ಹೃದಯದೊಳಗೆ ಬೆಳಕನ್ನು ಕೆಡಹುತ್ತಿತ್ತು—ಆಹಾ! ಇಂದು ನನ್ನ ಬಿಡುಗಡೆಯಾದರೆ!

"ಇನ್ನೂ ಆಶೆಯಿದೆ!" ನನ್ನ ವಕೀಲನು ಹೇಳಿದ.

"ಒಳ್ಳೇದು, ನೋಡುವಾ," ಸ್ವಲ್ಪ ನಕ್ಕು ನಾನು ಉತ್ತರವಿತ್ತೆ.

"ಘಟನೆ ಆಕಸ್ಮಾತ್ತಾಗಿ ಆಯಿತು, ಎಂದು ನಾನು ಸಿದ್ಧಮಾಡಿದ್ದೇನೆ. ಮರಣದಂಡನೆಯಂತೂ ಆಗುವುದಿಲ್ಲ ಹಾ; ಆದರೆ ಆಜನ್ಮ ಕಾರಾಗೃಹ ವಾಸವಾಗಬಹುದು — ಇರಲಿ, ಏನಾಗುವುದೋ ನೋಡಿದರಾಯಿತು." ವಕೀಲ ನೆಂದ.

"ಏನು, ಸೆರೆಮನೆಯಲ್ಲಿ ನಾನು ಸಾಯುವ ವರೆಗೆ ಕೊಳೆಯಬೇಕೆ? ಬೇಡ, ಅದಕ್ಕಿಂತ ಮರಣವೇ ಲೇಸು," ನಾನು ಹೇಳಿದೆ.

ಹೂಂ, ಸಾವೇ ಲೇಸು! ನಾನು ಹೊರಗೆ ನೋಡಿದೆ! ಒಂದು ಹಕ್ಕಿ ಮರದ ರೆಂಬೆಯೊಂದರ ಮೇಲೆ ಕುಳಿತುಕೊಂಡು ಒಂದು ಹಣ್ಣನ್ನು ಕಾಲಿ ನಿಂದ ಒಡೆಯುತ್ತಿದ್ದಿತು. ಅದು ಎಂಥ ಸುಖಪಡುವ ಪ್ರಾಣಿ! ನಾನೂ ಹಾಗೇ ಒಂದು ಹಕ್ಕಿಯಾಗಿದ್ದರೆ! ಅದರಂತೆಯೇ ಮುಕ್ತನೂ, ಸ್ವತಂತ್ರನೂ ಆಗಿರು ತ್ತಿದ್ದೆನಲ್ಲ!

ಜಜ್ಜನು ಆಗ ತನ್ನ ನಿರ್ಣಯವನ್ನು ಓದುತ್ತಿದ್ದ. ಆದರೆ ನನ್ನ ಲಕ್ಷ್ಯವು ಆ ಕಡೆಗಿದ್ದಿದ್ದಿಲ್ಲ. ಜೀವನ, ಮರಣದ ಮಾತನ್ನೇ ಆಗ ಮರೆತುಬಿಟ್ಟಿದ್ದೆ. ಒಮ್ಮೆಲೇ ಕಿವಿಗೆ ಒಂದು ಸಪ್ಪಳವು ಕೇಳಿಸಿತು—"ಮರಣದಂಡನೆ!" ರಕ್ತವು ತಲೆಗೇರಿತು. ಕಣ್ಣು ಮುಂದೆ ಕತ್ತಲೆಕವಿದಂತಾಯಿತು. ನನ್ನ ಮುಂದೆ ಒಂದು ಕರಿಯ ಪರದೆ ಬಿದ್ದಿತು ನಾನು ನಿಂತುಕೊಂಡಿದ್ದ ಆ ಕಟಾಂಜನಕ್ಕೆ ಆತು ಕೊಂಡೆ. ಆಗ ನನ್ನನ್ನು ನೋಡಿ ಬಹುಶಃ ಜಜ್ಜನಿಗೆ ದಯೆ ಹುಟ್ಟಿರಬೇಕು, "ನೀನೇನಾದರೂ ಹೇಳಲಿಚ್ಛಿಸುತ್ತೀಯಾ?" ಜಜ್ಜನು ಕೇಳಿದ.

ಹೇಳುವುದೇನೋ ಬಹಳವಿತ್ತು, ಆದರೆ ಆಗ ಮಾತು ಬೆಳಿಸಿದರೆ ಬರುವ ಲಾಭವೂ ಅಷ್ಟರಲ್ಲಿಯೇ ಇತ್ತು. ಬಾಯಿಗೆ ಬೀಗ ಬಿದ್ದಿತ್ತು. ಎರಡೂ ಕೈಗ ಳಿಂದ ಮೋರೆ ಮುಚ್ಚಿಕೊಂಡೆ. ಜನರು ಗದ್ದಲ ಮಾಡುತ್ತ ಕೋರ್ಟು ಬಿಟ್ಟು ಹೊರಗೆ ಹೋಗುತ್ತಿದ್ದರು. ಅವರು ಹೋಗುವಾಗ ಆಗುವ ಅವರ ಕಾಲಿನ ಸಪ್ಪಳವು ಕೇಳಿಸುತ್ತಿತ್ತು. ಉಶ್, ಈಗ ಅವನಿಗೆ ಸ್ವಲ್ಪ ವಿಶ್ರಾಂತಿ ಸಿಕ್ಕಿತು! ಕೆಲಸ-ಬೊಗಸೆ, ಸುಖ-ದುಃಖಗಳೆಲ್ಲವನ್ನೂ ಬಿಟ್ಟು ನನ್ನನ್ನು ನೋಡಲು ಕಷ್ಟ ಪಟ್ಟು ಬಂದಿದ್ದರು; ಆದರೆ ನಾನು ಈಗ ಅವರಿಗೆ ಬಿಡುವು ಕೊಟ್ಟೆ! ಅದರಿಂದ ಅವರು ಸಂತೋಷದಿಂದ ಹೊರಟುಹೋದರು.

ಎಷ್ಟೋ ಹೊತ್ತಾಯಿತು; ಆಮೇಲೆ ನನ್ನ ಬಾಯಿಂದ ಮಾತು ಹೊರ

ಬಿದ್ದವು. "ಸರಕಾರ, ನನಗೆ ದಯಮಾಡಿ ಬೇಗನೆ ಮರಣದಂಡನೆ ಕೊಡಿರಿ, ಸಾಕು, ಮತ್ತೇನನ್ನೂ ನಾನು ಬೇಡುವುದಿಲ್ಲ." ನಾನು ಹೇಳಿದೆ.

ಜಗತ್ತನ್ನು ನೋಡಿ ನನಗೆ ಸಿಟ್ಟು ಬಂದಿತು. ಅದು ಎಂದಿನಂತೆ ನಗುತ್ತ ಕೆಲೆಯುತ್ತ ಇರುವುದು, ಸುಖ-ಸಂತೋಷದಿಂದ ದಿನ ಹಾಕುವುದು; ಆದರೆ ನಾನು ಮಾತ್ರ ಇದನ್ನು ತೊರೆದು ಹೋಗುವೆ. ನಾನು ಹೋದರೆ ಇದಕ್ಕೇನೂ ಅಭಾವವೆನಿಸುವುದಿಲ್ಲ ಅಯ್ಯೋ, ಈ ಪೃಥ್ವಿ ಇಷ್ಟು ಸುಂದರ ವಾಗಿದ್ದರೂ ಎಷ್ಟು ನಿರ್ದಯಿಯಾಗಿರುವುದಲ್ಲ! ಯಾರನ್ನೂ ಇದು ಸ್ನೇಹದಿಂದ ನೋಡುವುದಿಲ್ಲ; ಮಮತೆಯಿಂದ ಮುದ್ದಿಡುವುದಿಲ್ಲ, ಒಂದು ಕ್ರಿಯಾಹೀನ ವಾದ ಕಠೋರ ಜಡಪಿಂಡದಂತಿದೆ! ಇದಕ್ಕೆಯೇ ಜಗತ್ತು ಎಂದು ಕರೆಯು ತ್ತಾರೆ; ಈ ಜಗತ್ತಿನೊಳಗೆಯೇ ಒಂದಿಲ್ಲೊಂದು ಬಗೆಯಿಂದ ಬಾಳುವುದ ಕ್ಕೆಯೇ ಜೀವನವೆನ್ನುತ್ತಾರೆ! ಇದಕ್ಕಿಂತ ಸಾವು, ಹೂಂ, ಅದು ಇದಕ್ಕಿಂತಲೂ ಕಠೋರವಾಗಿರಬಹುದೆ?

ಕಾವಲುಗಾರನು ನನ್ನನ್ನು ಹೊರಗೆ ಕರೆತಂದ. ಹೊರಗೆ ಪ್ರೇಕ್ಷಕರ ಗುಂಪು ನನ್ನನ್ನು ನೋಡಲು ಆಗಲೂ ಹಾತೊರೆಯುತ್ತಿತ್ತು. ಅಯ್ಯೋ, ಈ ಹೃದಯವಿಹೀನ ಪಶುಗಳ ಮೇಲೆ ಸಿಡಿಲೇಕೆ ಎರಗಬಾರದು? ಪ್ರೇತದಂತೆ ಇದ್ದಾರೆ, ಪಿಶಾಚಿಗಳಾಗಿದ್ದಾರೆ!

ಹೊರಗೆ ಬಂದು ನೋಡಿದೆ. ಎಷ್ಟು ಬದಲಾವಣೆಯಾಗಿದೆಯಲ್ಲ! ಇಲ್ಲಿಂದ ಕೋರ್ಟಿನ ಕಡೆಗೆ ಬಂದಾಗ ನಾನೂ ಎಲ್ಲರಂತೆಯೇ ಜೀವಂತನಾಗಿದ್ದೆ. ಆದರೆ ಈಗ? ಈಗ ಯಾರೋ ನನ್ನ ಶವವನ್ನು ಎಳೆದೊಯ್ಯುತ್ತಿರುವಂತೆ ಭಾಸ ವಾಗಹತ್ತಿದೆ. ಈಗ ನನಗೂ ಜಗತ್ತಿಗೂ ಏನೂ ಸಂಬಂಧವೇ ಇಲ್ಲದಂತಾ ಗಿದೆ. ಹಕ್ಕಿಗಳ ಹಾಡು, ಸೂರ್ಯನ ಸುಂದರವಾದ ಕಿರಣಗಳು—ಇವು ಇಂದು ನನ್ನವಲ್ಲ ನದಿಯ ಸ್ನೇಹಮಯವಾದ ನೀರು, ನೀಲಬಣ್ಣದ ಆಕಾಶ ಇವು ಇತರರಿಗೆ ಎಂದಿನಂತೆಯೇ ತೋರುತ್ತಿವೆ; ಆದರೆ ನಾನೋ ಇವನ್ನಗಲಿ ದೂರಾದಂತಾಗಿದ್ದೇನೆ. ಆ ಸಣ್ಣ-ಸಣ್ಣ ಹೂ, ಗಿಡದ ಆ ನೆರಳು, ಅಯ್ಯೋ, ಅವು ಇನ್ನು ನನ್ನ ಪಾಲಿಗೆ ಇಲ್ಲ! ಅವೆಲ್ಲವೂ ಇಂದು ನನ್ನ ಅಂಕಿತದಲ್ಲಿಲ್ಲ!

ಕರಿಯಬಣ್ಣದ ಬಂಡಿಯೊಂದು ನನ್ನ ಹಾದಿಕಾಯುತ್ತಿತ್ತು. ನಾನು ಬಂಡಿಯನ್ನೇರುತ್ತಿರುವಾಗ, ದೂರದಲ್ಲಿ ಯಾರೋ "ಅವನಿಗೆ ಮರಣದಂಡನೆ

ಯಾಯಿತು ” ಎಂದು ಹೇಳುತ್ತಿದ್ದರು. ನಾನು ತಿರುಗಿ ಅವನನ್ನು ನೋಡಿದೆ. ವ್ಯರ್ಥವಾದ ಮುನಿಸೊಂದು ನನ್ನ ಮನಸ್ಸಿನೊಳಗೆ ಪ್ರಜ್ವಲಿಸಹತ್ತಿತು.

ಬಂಡಿ ಮುಂದೆ ಸಾಗಿತು. ನಾನು ಬಂಡಿಯೊಳಗೆ ಕುಳಿತುಕೊಂಡೇ ಒಂದು ಕಿಡಿಕಿಯೊಳಗಿಂದ ಹೊರಗಿನ ಸೃಷ್ಟಿಯನ್ನು ನಿರೀಕ್ಷಿಸುತ್ತಿದ್ದೆ. ದಾರಿಯ ಮೇಲೆ ಜನರು ಹಾದಾಡುತ್ತಿದ್ದಾರೆ—ವಿಶೇಷ ಜನಸಂದಣಿಯಿತ್ತು. ಎಂದಿನಂತೆಯೇ ಜನರು ಅಡ್ಡಾಡುತ್ತಿದ್ದಾರೆ. ಅದರೊಳಗೆ ಏನೂ ಹೆಚ್ಚು ಕಡಿಮೆಯಾಗಿಲ್ಲ ನಾನು ಸತ್ತರೆ ಇವರಿಗೇನೂ ಹಾನಿಯಾಗುವುದಿಲ್ಲ. ನನಗೆ ಇವರು ಯಾವ ಬಗೆಯ ಸಹಾನುಭೂತಿಯನ್ನೂ ನೀಡರು. ಅಯ್ಯೊ, ಮನುಷ್ಯ ಜಾತಿಯೆ!

೩

ಮೃತ್ಯು!

ಆದರೆ ಇದರಿಂದ ಹಾನಿಯಾದರೂ ಏನಾಗುವುದು? ಮನುಷ್ಯನು ಕೊನೆಯ ವರೆಗೆ ಬದುಕಿರುವುದಂತೂ ಸಾಧ್ಯವಿಲ್ಲ ಒಂದಿಲ್ಲೊಂದು ದಿನ ಸತ್ತೇ ಸಾಯುವನು. ಆ ದಿನ, ಆ ಸಮಯ, ಅದು ಕೂಡ ಅವನಿಗೆ ಗೊತ್ತು ಇರುವುದಿಲ್ಲ. ಸಾಕು, ಇಷ್ಟೇ ಇದರೊಳಗೆ ಹೆಚ್ಚುಕಡಿಮೆ, ಎಂದ ಮೇಲೆ ನಾನೇ ಏಕೆ ವ್ಯರ್ಥವಾಗಿ ಗಾಬರಿಯಾಗುತ್ತಿದ್ದೇನೆ?

ಇಂದಿನಿಂದ ಮೊದಲು ಮಾಡಿ ನನಗೆ ಮರಣದಂಡನೆಯಾಗುವಷ್ಟರಲ್ಲಿ ಎಷ್ಟೋ ಜನರು ಈ ಜಗತ್ತನ್ನು ತೊರೆದುಹೋಗುವರು! ಕೊಲ್ಗಂಬಕ್ಕೇರಿದ ನನ್ನನ್ನು ನೋಡಲು ದಿನವನ್ನು ಎಣಿಸುತ್ತಿರುವ ಜನರೊಳಗೂ ಎಷ್ಟೋ ಮಂದಿ ಪರಲೋಕ ಪ್ರಯಾಣ ಬೆಳೆಸುವರು ಎಂದ ಮೇಲೆ ನಾನೇ ಏಕೆ ನನ್ನ ಜೀವದ ಮೇಲೆ ಇಷ್ಟು ಮೋಹಪಡುತ್ತಿರುವೆ?

ಗಾಳಿ, ಬೆಳಕಿಗೆ ಶತ್ರುವಾದ ಈ ಸೆರೆಮನೆ, ಕೆಟ್ಟ ಕೂಳು, ದುಸ್ಸಹ ವಾಸದ ಈ ಜೀವನ, ಅಪಮಾನದಿಂದ ನೊಂದ ಈ ಹೃದಯ, ಅಸಭ್ಯರೂ, ನಿಷ್ಠುರರೂ ಆದ ಕಾವಲುಗಾರರು—ಅಯ್ಯೊ, ಇಂಥ ಜೀವನದಿಂದಾಗುವ ಲಾಭವಾದರೂ ಏನು? ಜಗತ್ತಿನೊಳಗೆ ನನ್ನ ಸಲುವಾಗಿ ಎರಡು ಹನಿ ಕಣ್ಣೀರು ಹಾಕುವವರೂ ಇಲ್ಲ. ಈಗ ನನ್ನ ಕೈ ತೆರವಾಗಿವೆ, ನಾನು ಈಗ ಭಿಕಾರಿಯಾಗಿದ್ದೇನೆ! ನನ್ನ ನಾವೆಯ ಕರ್ಣಧಾರೆ ಹರಿದಿದೆ. ಇಂಥ ಜೀವನದಿಂದ ಪ್ರಯೋಜನವಾದರೂ ಏನು?

ಕರಿಯ ಬಣ್ಣದ ಮುಚ್ಚಿದ ಬಂಡಿ ನನ್ನನ್ನು ಸೆರೆಮನೆಗೆ ತಂದುಬಿಟ್ಟಿತು.

ಇದಕ್ಕೂ ಮೊದಲು ನಾನು ಅದೆಷ್ಟೋ ಸಾರೆ ಈ ಸೆರೆಮನೆಯನ್ನು ನೋಡಿದ್ದೇನೆ. ಆಗ ಇದು ಒಂದು ದೊಡ್ಡ ಮನೆಯಂತೆ ಕಾಣಿಸುತ್ತಿತ್ತು. ಇಷ್ಟು ಅಸತ್ಯವಾಗಿ ತೋರುತ್ತಿದ್ದಿಲ್ಲ ಸೆರೆಮನೆಯ ಮುಂದಿರುವ ಆ ಬಯಲಿನೊಳಗೆ ನಾನು ಅದೆಷ್ಟೋ ಸಾರೆ ಗೆಳೆಯರ ಕೂಡ ಹರಟೆ ಹೊಡೆದಿರಬಹುದು. ಬಾಲ್ಯಕಾಲದಲ್ಲಿ ಹೆಚ್ಚಿನ ಉಲ್ಲಾಸ, ಆನಂದದಿಂದ ಹುರುಪಿನಿಂದ ಚಂದ್ರಲೋಕದೊಳಗೆ ಇದ್ದುಕೊಂಡು ಇದೇ ಬಯಲಿನೊಳಗೆ ನಾನು ನನ್ನ ಭವಿಷ್ಯವನ್ನು ಕುರಿತು ತರತರದ ವಿಚಾರಗಳನ್ನು ಮಾಡುತ್ತಿದ್ದೆ ನಾನು ಆಗ ಎಷ್ಟು ಉದ್ದಾಮ ಕಲ್ಪನೆಗಳನ್ನು ಮಾಡುತ್ತಿದ್ದೆನಲ್ಲ! ಈ ಮನೆ ಆಗ ನೋಡಲಿಕ್ಕೆ ಅರಮನೆಯಂತೆ ಕಾಣುತ್ತಿತ್ತು. ಇದರ ಹತ್ತಿರವೇ ಒಂದು ಸಣ್ಣದಾದ ನದಿ ಹರಿಯುತ್ತಿದೆ. ಇದು ಒಂದು ಸುಂದರವಾದ ಚಿತ್ರದಂತೆ ತೋರುತ್ತಿದೆ. ಆದರೆ ಇಂದು ಇದನ್ನು ನೋಡಿದರೆ ಹೃದಯವು ತಿರಸ್ಕಾರದಿಂದ ಸಂಕುಚಿತವಾಗುತ್ತಿದೆ.

ನನ್ನ ಕೋಣೆ! ಅದಕ್ಕೆ ಕಿಡಿಕಿಗಳಿಲ್ಲ, ಅದಕ್ಕೆ ಕೇವಲ ಕಬ್ಬಿಣದ ಕಂಬಿಗಳಿವೆ. ಒಂದು ದೊಡ್ಡ ಕಬ್ಬಿಣದ ಬಾಗಿಲು ಮಾತ್ರ ಇದೆ. ನಾಲ್ಕೂ ನಿಟ್ಟಿಗೂ ಕಲ್ಲಿನ ಗೋಡೆಗಳಿವೆ. ಎಲ್ಲಿಯೂ ಸೌಂದರ್ಯದ ಕುರುಹೇ ಇಲ್ಲ. ಮತ್ತೆ ಆ ಸ್ನೇಹ? ಅದಂತೂ ಇಲ್ಲಿಗೆ ಎಷ್ಟೋ ಹರದಾರಿಯ ಮೇಲೆ ಇದೆ.

೪

ಕಲ್ಲಿನ ಗೋಡೆಗಳು ನನ್ನನ್ನು ತಮ್ಮ ಗಾಢಾಲಿಂಗನದಿಂದ ಬಂಧಿಸಿ ಇಟ್ಟಂತೆ ನನ್ನ ಗತಿಯಾಗಿತ್ತು. ಕಾವಲುಗಾರನು ಎಚ್ಚರದಿಂದ ಕಾವಲು ಮಾಡುತ್ತಿದ್ದ. ನನ್ನ ಈ ಬಹುಮೂಲ್ಯ ಜೀವನವು ತನ್ನಷ್ಟಕ್ಕೆ ತಾನೇ ನಾಶವಾಗಬಾರದೆಂದು ಅವರು ನನಗೆ ಯಾವ ಕಷ್ಟವೂ, ತೊಂದರೆಯೂ ಆಗದಂತೆ ನೋಡಿಕೊಳ್ಳುತ್ತಿದ್ದರು. ಅವರು ನನ್ನ ಬಗೆಗೆ ಬಹಳ ದಕ್ಷತೆ ವಹಿಸುತ್ತಿದ್ದರು. ಎಲ್ಲಿಯಾದರೂ ನಾನು ಆತ್ಮಹತ್ಯೆ ಮಾಡಿಕೊಂಡೇನೆಂಬ ಹೆದರಿಕೆ ಅವರಿಗೆ!

ಇದೇ ಪ್ರಕಾರ ಆದರ-ಸತ್ಕಾರದಿಂದ ನಾನು ಇನ್ನೂ ೬-೭ ತಿಂಗಳು

ಇಲ್ಲಿ ಕಾಲ ಕಳೆಯಬೇಕು ಆಮೇಲೆ ಅವರು ನನ್ನ ಈ ದೇಹವನ್ನು ಕೊಲ್ಗಂ-ಬಕ್ಕೆ ಬಿಗಿಯುವರು ಮಾರಿಗರ್ಪಿಸುವ ಕುರಿಯಂತೆ ನನ್ನನ್ನು ಚಾಂಡಾಲರ ಕೈಗೆ ಕೊಡುವರು.

ಮೊದಲು ಮಾತ್ರ ೩-೪ ದಿನ ಎಲ್ಲರ ಕರುಣಾರಸವೂ ಉಕ್ಕಿ ಬಂದಿದ್ದಿತು. ಸಾವಿನ ಅಗ್ನಿಯಲ್ಲಿ ಆಹುತಿ ಕೊಡುವ ಮೊದಲು ನನ್ನ ದೇಹಕ್ಕೆ ಅಮೃತವನ್ನು ಸಿಂಪಡಿಸುತ್ತಿರುವರೇನೋ ಎನ್ನಿಸಿತು. ಆದರೆ ಮತ್ತೆ ಅದೇ ನಿತ್ಯದ ನಡತೆ! ಎಂದಾದರೊಮ್ಮೆ ಕಾರುಣ್ಯದ ಸ್ನಿಗ್ಧ ಪ್ರವಾಹವು ಹರಿಯುತ್ತಿತ್ತು!

ಈಗ ನನ್ನ ವಯಸ್ಸು, ಶಿಕ್ಷಣ, ಸುಖ ಇವು ನನಗೆ ನೆರವಾದುವು. ನನಗೆ ಓದಲು ಬರೆಯಲು ಅಪ್ಪಣೆ ಸಿಕ್ಕಿತು. ಮುಂಜಾನೆ, ಸಂಜೆಗೆ ದೇವರ ಪೂಜೆಗೂ ಅನುಮತಿ ದೊರೆಯಿತು ಕಾವಲುಗಾರರ ಕಾವಲಿನೊಳಗೇ ನನಗೆ ಸ್ವಲ್ಪ ಆಡ್ಡಾಡಲೂ ಅನುಮತಿ ದೊರೆಯಿತು. ಮತ್ತೆ ಒಬ್ಬಿಬ್ಬರು ದುರ್ದೈವಿಗಳಾದ ಸೆರೆಯಾಳುಗಳ ಕೂಡ ಮಾತನಾಡಲೂ ಅವಕಾಶವು ದೊರೆಯಿತು — ಆ ಸೆರೆಯಾಳುಗಳು ಇಲ್ಲಿಯೂ ಆನಂದದಿಂದಿದ್ದಾರೆ. ನಾನು ಅವರು ಮಾಡಿದ ತಪ್ಪನ್ನು ಕುರಿತು ಕೇಳಿದೆ, ಅಯ್ಯೋ, ಅವರ ಭಾಷೆಯೆಷ್ಟು ಒರಟು! ಅವರಲ್ಲಿ ಯಾವನೋ ಒಬ್ಬನು ಹೇಳಿದ- "ನಾನು ಕಳವು ಮಾಡಿದ್ದೆ." ಒಬ್ಬನು ಹೇಳಿದ- "ಮೋಸ ಮಾಡಿದ್ದೆ." ಮತ್ತೊಬ್ಬನು ಬೇರೆ ಏನನ್ನೋ ಹೇಳಿದ, ಇನ್ನೊಬ್ಬನು ಬೇರೆ ಏನೊ! ತಾವು ಮಾಡಿದ ಕೆಲಸಗಳು ಶೂರತನದವೆಂದು ಅವರ ಕಲ್ಪನೆ. ಆದರಿಂದ ಅವರು ಅವನ್ನು ಅಭಿಮಾನದಿಂದ ಹೇಳುತ್ತಿದ್ದರು ಅವರ ತಿಳುವಳಿಕೆಯೇ ಬೇರೆಯಿತ್ತು. ಅವರು ಸಂತೈಸುವ ರೀತಿಯೇ ಅದ್ಭುತವಾಗಿತ್ತು.

ಇಷ್ಟಾದರೂ ಅವರು ನನಗೆ ಸಹಾನುಭೂತಿ ತೋರಿಸುತ್ತಿದ್ದರು. ಆಗ ಇವರೇ ನನಗೆ ಜೊತೆಗಾರರೂ ಗೆಳೆಯರೂ ಆಗಿದ್ದರು. ಅದೊಂದು ಕಾಲವಿತ್ತು. ಆಗ ನಾನು ಇವರನ್ನು ಕಂಡರೆ ಸಾಕು, ತಿರಸ್ಕಾರ ಮಾಡುತ್ತಿದ್ದೆ; ಆದರೆ ಈಗ ಇವರ ಕೂಡ ಮಾತನಾಡಿದರೆ ವಿಶ್ರಾಂತಿ ಸಿಗುತ್ತದೆ. ಹೃದಯವು ಹಗುರಾಗುತ್ತದೆ. ಇವರು ಒಂದು ವೇಳೆ ಇಲ್ಲಿ ಇರದೇ ಹೋಗಿದ್ದರೆ ನನಗೆ ಹುಚ್ಚು ಹಿಡಿಯುತ್ತಿತ್ತು. ಆದರೆ ಇವರು ಮನುಷ್ಯರೆಂದೆನಿಸಿಕೊಳ್ಳಲು ಯೋಗ್ಯರಿರುವರೆ?

ಅಯ್ಯೋ, ಬಡಪಾಯಿಗಳಿವರು ನಿಜವಾಗಿಯೂ ದುರ್ದೈವಿಗಳು. ಸಜ್ಜನರನ್ನು ಎಲ್ಲರೂ ನೆನೆಸುತ್ತಾರೆ ಶ್ರೀಮಂತರು, ದೈವವುಳ್ಳವರು ಇವರ ಬಾಯಿಂದ ಬಂದ ಮಾತನ್ನು ಕೇಳಲು ಎಲ್ಲರೂ ಆತುರಪಡುತ್ತಾರೆ ಆದರೆ ಈ ದರ್ದೈವಿಗಳನ್ನು "ಸಹೋದರ" ಎಂದು ಯಾರೂ ಎದೆಗೆ ಅವಚಿಕೊಳ್ಳುವುದಿಲ್ಲ. ಅವರಾವ ವರ್ಗದ ಮನುಷ್ಯರೋ ಅರಿಯೆ! ಅವರ ಸ್ಥಾನವಾದರೂ ಸ್ವರ್ಗದೊಳಗೆ ಎಷ್ಟು ಎತ್ತರದ ಮೇಲೆ, ಎಲ್ಲಿರುವುದೋ ಏನೊ? ಅವರು ನಿಜವಾಗಿಯೂ ಉದಾರರು!

ಮತ್ತೆ ಈ ಕಾವಲುಗಾರರು—ಅವರಾದರೂ ನನಗೆ ಸಹಾನುಭೂತಿ ತೋರಿಸಲು ಬರುತ್ತಿದ್ದರು. ಆದರೆ ಅವರ ಸಹಾನುಭೂತಿ ಪರಿಹಾಸ್ಯಗಳಿಂದ ತುಂಬಿರುತ್ತಿತ್ತು; ದುಃಸ್ಥಿತಿಯ ಬಲೆಯೊಳಗೆ ಸಿಕ್ಕಿಕೊಂಡೇ ನಾನು ಇಂದು ಮನುಷ್ಯನ ಹೃದಯವನ್ನು ಅಭ್ಯಾಸಮಾಡುತ್ತಿದ್ದೇನೆ. ಈ ತಿರಸ್ಕೃತ ಕೈದಿಗಳ ಗುಂಪು, ಸಹಾನುಭೂತಿಯಿಂದಲೂ ವ್ಯಥೆಯಿಂದಲೂ ಕೂಡಿದ ನೋಟ, ಅದೆಷ್ಟು ಪಾವನವಾಗಿದ್ದಿತಲ್ಲ! ಇವರು ನನ್ನನ್ನು ತಿರಸ್ಕಾರ ಮಾಡುವುದನ್ನು ಅರಿಯರು! ನನ್ನ ಅಪರಾಧದ ನಿರ್ಣಯವನ್ನು ಮಾಡುವುದಿಲ್ಲ—ಸೋಮಾರಿಗಳಾದ ಪ್ರೇಕ್ಷಕರ ವರ್ಗದಂತೆ ಹರಿದು ತಿನ್ನುವ ಹಾಗೆ ನನ್ನ ಕಡೆಗೆ ನೋಡವುದಿಲ್ಲ.

ಈ ಎಲ್ಲ ಸಂಗತಿಗಳನ್ನು ನಾನು ಬರೆದರೆ ಹೇಗೆ? ಬರೆದರೆ ಹಾನಿ ಏನಾಗುವುದು? ಮುಂತಾಗಿ ನಾನು ಯೋಚಿಸುತ್ತಿದ್ದೇನೆ. ನನಗೆ ಮಾತನಾಡಲು ಯಾರೂ ಜೊತೆಗಾರರು ಸಿಗದಿದ್ದರೆ ಈ ಕಾಗದ-ಲೇಖನಿಗಳೇ ನನಗೆ ಪ್ರೀತಿಯ ಗೆಳೆಯರಾಗುವುವು! ಆದರೆ ಏನು ಬರೆಯಲಿ? ನನ್ನ ಈ ನಿರರ್ಥಕವಾದ ಚಿಂತೆಗಳನ್ನೂ ಹಾಳು ಹರಟೆಗಳ ರಾಶಿಯನ್ನೂ ಕಾಗದದ ಮೇಲೆ ಅಲಂಕರಿಸಿದರೆ ಬರುವ ಲಾಭವೇನು? ನಾಲ್ಕೂ ನಿಟ್ಟಿಗಿರುವ ಗೋಡೆಗಳ ಆವರಣದೊಳಗೆ ಅರೆಜೀವ ಮಾಡಿ ಬಂಧಿಸಲ್ಪಟ್ಟ ಜೀವನದ ಸುಖ-ದುಃಖಗಳ ಮಾಲೆಯನ್ನು ಯಾರಿಗಾಗಿ ಹೆಣೆಯಲಿ? ನನ್ನ ಈ ಮಾಲೆಯನ್ನು ಯಾರು ಮುಡಿಯುವರು? ನಾನು ಇಂದು ಈ ಲೋಕದ ಮನುಷ್ಯನಲ್ಲ—ಇಹ-ಪರಲೋಕಗಳ ನಡುವೆ ಒಂದು ಸ್ಥಳದ ಮೇಲೆ ನಿಂತಿದ್ದೇನೆ. ಈಗ ನಾನು ಯಾರ ನೆರವನ್ನು ಕೋರಲಿ? ಈಗ ನನಗಾರು ಇದ್ದಾರೆ?

ಆದರೂ ನನ್ನ ಸಾವು-ನೋವುಗಳನ್ನು ದುಃಖದ ದಾರದಿಂದ ಹೆಣೆ

ಯುವೆ. ನಾನು ನನ್ನ ನೊಂದ ಭಾವನೆಗಳನ್ನು ಬರೆಯುವೆ. ಇವನ್ನು ನೋಡಿ ಜನರು ನಗುವರೆ? ನಗಲಿ. ಜನರು ನನ್ನನ್ನು ತಿರಸ್ಕಾರ ದೃಷ್ಟಿಯಿಂದ ಕಂಡರೇ ಹೊರತು ಮರುಗಲಿಲ್ಲ ನಾನು ಬಳಲುತ್ತಿದ್ದಾಗ ನನಗೆ ಸಹಾನುಭೂತಿ ತೋರಿಸಿದರೆ? ಎಂದಮೇಲೆ ನಾನೇಕೆ ಅವರಿಗೆ ಅಂಜಲಿ? ಅವರು ತಿರಸ್ಕಾರ ಪಟ್ಟುಕೊಂಡರೆ ನನಗಾಗುವ ಲಾಭ-ಹಾನಿಗಳಾದರೂ ಏನು?

ನನ್ನ ಹೃದಯದೊಳಗೆ ಒಂದು ಬಿರುಗಾಳಿ ಬೀಸುತ್ತಿದೆ! ಒಂದು ತುಮುಲವಾದ ಹೋರಾಟವು ನಡೆದಿದೆ. ಈ ಹೋರಾಟವು ಬಹು ಭಯಂಕರ ವಾಗಿದೆ. ಅದಾದರೂ ಸಾವಿನ ಕೂಡ ನಡೆದಿದೆ!

ಸಾಯುವವನ ಹೊತ್ತನ್ನು ನಿರ್ದಿಷ್ಟಪಡಿಸಿದಾಗ ಅವನ ಗತಿಯೇನಾಗ ಬೇಕು— ಅಯ್ಯೊ! ಬೆಳಕನ್ನು ಬೇಗ ಆರಿಸುವರು. ನನ್ನ ಜೀವನದ ಬೆಳಕೂ ಆರುವುದು. ಹೂಂ, ಬಹುಬೇಗ!

ಇಲ್ಲಿ ಹೆಜ್ಜೆ-ಹೆಜ್ಜೆಗೆ ದಾರುಣವಾದ ವ್ಯಥೆಗಳನ್ನು ನಾನು ಎದುರಿಸುತ್ತಿದ್ದೇನೆ—ಕ್ಷುಲ್ಲಕವಾದ ಕೊಲ್ಗಂಬದ ಹಗ್ಗದ ಯಾತನೆ ಇದಕ್ಕಿಂತಲೂ ಹೆಚ್ಚಿನದಾಗಬಹುದೆ? ಆ ಕೊಲ್ಗಂಬವು ಒಂದು ವಿರಾಟ ಮುಕ್ತಿಯ ಮಾರ್ಗ ವನ್ನು ತೋರಿಸುವುದು. ಸಾವಿನ ದುಃಖವು ಒಮ್ಮೆಯೇ ಅಲ್ಲವೆ? ಆಮೇಲೇನು ಶಾಂತಿಯೇ ಶಾಂತಿ, ಕಡೆತನಕ ಶಾಂತಿ. ಆಮೇಲೆ? ಓಹೋ, ಆಶೆ, ಪ್ರಕಾ ಶದ ರಾಜ್ಯವೇ ರಾಜ್ಯ—ಆದರೆ ಈ ಸುಂದರವಾದ ಸೃಷ್ಟಿ—ಅಯ್ಯೊ! ಇದನ್ನು ಹೇಗೆ ಅಗಲಲಿ! ಹೇಗೆ ಮರೆಯಲಿ?

ಒಳ್ಳೇದು, ಇವರು—ಕಟ್ಟು-ನಿಟ್ಟುಗಳನ್ನು ಮಾಡಿರುವರಲ್ಲ ಇವರಿಗೆ ಮನುಷ್ಯನನ್ನು ಕೊಲ್ಗಂಬಕ್ಕೆ ಬಿಗಿಯಲು ಯಾರು ಅಧಿಕಾರ ಕೊಟ್ಟರು ಮುಂತಾದ್ದನ್ನು ವಿಚಾರಮಾಡಿರುವರೆ? ಆ ಮನುಷ್ಯನಲ್ಲಿಯಾದರೂ ಪ್ರಾಣ ವಿದೆ, ಚೈತನ್ಯವಿದೆ, ಬುದ್ಧಿಯಿದೆ, ಜ್ಞಾನವಿದೆ, ಬಲವಿದೆ! ಒಂದು ತಿಳುವಾದ ಹಗ್ಗದಿಂದ ಕ್ಷಣಹೊತ್ತಿನಲ್ಲಿ ಇಂಥ ವ್ಯಕ್ತಿಯನ್ನು ಇದ್ದನೊ ಇಲ್ಲೊ ಎನ್ನು ವಂತೆ ಮಾಡುವುದೆ—ಅವನ ಕೂಡಲೇ ಅವನ ಅಭಿಲಾಷೆ, ಅವನ ಆಶೆ, ಅವನ ಪ್ರೇಮ, ಅವನ ವಿಶಾಲವಾದ ಹೃದಯ, ಇವೆಲ್ಲವನ್ನೂ ಸುಟ್ಟು ಸೂರೆ ಮಾಡುವುದೆ—ಇದೆಂಥ ಕ್ರೂರತನ, ಎಂಥ ಅಮಾನುಷ ಕೃತ್ಯವಿದು? ಆದರೆ ಏನು, ಅವರ ತಲೆಯೊಳಗೆ ಈ ವಿಚಾರಗಳು ಸುಳಿದಿಲ್ಲವೆ? ಅವರು ಈ ಮಾತುಗಳ ಕಡೆಗೆ ಗಮನ ಕೊಡುವುದಿಲ್ಲ ಕೇವಲ ಒಂದು ಹಗ್ಗ, ನನ್ನ

ಕುತ್ತಿಗೆ ಇವೇ ಅವರ ಕಣ್ಣು ಮುಂದೆ ಕುಣಿಯುತ್ತಿರುತ್ತವೆ. ಸರಿ, ಮತ್ತೆ ಬೇರೆ ಮಾತೇ ಇಲ್ಲ. ಬುದ್ಧಿಗೇಡಿ ಸೇಡನ್ನೇ ಅವರು ಸರ್ವಶ್ರೇಷ್ಠವೆಂದು ತಿಳಿದಿದ್ದಾರೆ.

ಇದೆಲ್ಲವನ್ನು ವಿಚಾರಮಾಡಿಯೇ ನಾನು ಬರೆಯುವೆ! ನನ್ನ ಈ ವ್ಯಥೆಗಳನ್ನು ಉಪ್ಪು-ಕಾರ ಹಚ್ಚಿ ಬರೆಯುವೆ! ಬಿಳಿಯ ಕಾಗದಗಳ ಮೇಲೆ, ಈ ಲೇಖನಿಯ ಸಹಾಯದಿಂದ! ನನ್ನ ಮನಸ್ಸಿನೊಳಗೆ ನಡೆದ ಹೋರಾಟವು ಯಾರಿಗೂ ಗೊತ್ತಿಲ್ಲ. ಅದು ಗೊತ್ತಾಗುವಂತೆಯೂ ಇಲ್ಲ. ತುಚ್ಛವಾದ ದೇಹದ ವೇದನೆ! ಅದೊ, ಉಸುರುಗಟ್ಟುತ್ತಿದೆ! ಯಾರೂ ನಾನು ಬರೆದ ಈ ಕಾಗದಗಳನ್ನು ಓದುವುದಿಲ್ಲವೆ? ಒಬ್ಬ ಮನುಷ್ಯನು ಏನೇನು ಕಷ್ಟಗಳನ್ನನುಭವಿಸಿ ಅಸುವ ದೊರೆದ, ಮುಂತಾದ ವಿಷಯಗಳ ಕಡೆಗೆ ಗಮನ ಕೊಡಲಿಕ್ಕಿಲ್ಲವೆ? ದೇವರಿಗೇ ಗೊತ್ತಿರಲಿ, ಇವನ್ನು ಯಾರೂ ಓದದಿದ್ದರೂ ಅಷ್ಟೆ! ಎಂದಾದರೊಂದು ದಿನ ಬಿರುಗಾಳಿಯ ಹೊಡೆತಕ್ಕೆ ಸಿಕ್ಕು ಹಾರಿಕೊಂಡು ಈ ಕಾಗದಗಳು ಹರಡುವುವು. ದಾರಿಗಳ ಮೇಲೋ ಗಟಾರಗಳಲ್ಲೋ ಹಾರಿ ಬೀಳುವುವು; ಇಲ್ಲವೆ ಯಾವನಾದರೂ ಕಿರಾಣಿ ಅಂಗಡಿಯವನು ಇವುಗಳನ್ನು 'ಪೊಟ್ಟ' ಕಟ್ಟಲು ಉಪಯೋಗಿಸುವನು. ಮಸಿಯ ಉಳಿದ ಕ್ಷೀಣ ರೇಖೆಯೂ ನನ್ನ ಜೀವನದ ಉಳಿದ ಉಸಿರಿನಂತೆ ನಿಶ್ಶಬ್ದವಾಗಿ ನಿರ್ಜನದೊಳಗೆಯೇ ವಿಲೀನವಾಗುವುದು.

೫

ಬಹುಶಃ ಎಂದಾದರೂ, ಯಾರದಾದರೂ ದೃಷ್ಟಿ ಈ ಕಾಗದಗಳ ಮೇಲೆ ಬಿದ್ದರೆ—ಫ್ರಾನ್ಸದೇಶದ ಈ ಪದ್ಧತಿಯನ್ನೇ ಇಲ್ಲದಂತೆ ಮಾಡಲು ಒಂದು ಆಂದೋಲನವು ಆರಂಭವಾಗುವುದು. ಎಷ್ಟೋ ನಿರಪರಾಧಿಗಳಿಗೆ, ಎಷ್ಟೋ ಮಂದ ದುರ್ದೈವಿಗಳಿಗೆ ಈ ದುಸ್ಥಿತಿಯಿಂದ ಬಿಡುಗಡೆಯಾದರೂ ಆಗುವುದು! ಅವರಿಗೆಬಿಡುಗಡೆಯಾದರೆ ನನಗೇನು ಲಾಭ? ನನ್ನ ಪ್ರಾಣವು ಅದಕ್ಕೆ ಮುಂಚಿತವಾಗಿಯೇ ಕೊಲ್ಲಂಬದ ಬಂಧನದಲ್ಲಿ ಸಿಲುಕಿ ಹಾರಿಹೋಗುವುದು!

ಅಯ್ಯೊ, ಸಾವು ನನ್ನನ್ನಾಲಂಗಿಸುವುದು! ಸಾಯುವೆ! ಸೂರ್ಯನ ಈ ಪ್ರಕಾಶ, ವಸಂತಋತುವಿನ ಈ ಸ್ನಿಗ್ಧಮಯವಾದ ಹವೆ, ಹೂ-ಕಾಯಿಗಳಿಂದ

ತುಂಬಿ ಮೆರೆಯುತ್ತಿರುವ ಈ ಪ್ರಪಂಚ, ಬಣ್ಣ-ಬಣ್ಣದ ಬಟ್ಟೆಗಳನ್ನುಟ್ಟ ಈ ಆಗಸ, ಈ ಎಲ್ಲ ಚರಾಚರಗಳು, ಅಯ್ಯೋ! ನಾನು ಇವೆಲ್ಲವನ್ನು ತೊರೆದು ಹೋಗುವೆನಲ್ಲ!

ಇಲ್ಲ, ನಾನು ನನ್ನ ರಕ್ಷಣೆಯನ್ನು ಮಾಡಿಕೊಳ್ಳಲಿಕ್ಕೆ ಬೇಕು. ನನ್ನ ಜೀವನವನ್ನು ಸುರಕ್ಷಿತವಾಗಿರಿಸಲೇಬೇಕು

ಎಷ್ಟು ಪ್ರಯತ್ನಮಾಡಿದರೂ ನಾನು ಸಾವಿನ ಗತಿಯನ್ನು ಬದಲಿಸಲಾರೆನೆ? ಅಯ್ಯೋ, ಸೆರೆಮನೆಯ ಈ ಗಟ್ಟಿಗೋಡೆಗೆ ತಲೆಯನ್ನಪ್ಪಳಿಸಿ ಜೀವ ಬಿಡಲೆ, ಮುಂತಾಗಿ ತಲೆಯಲ್ಲಿ ವಿಚಾರಗಳು ಸುಳಿದಾಡುತ್ತಿವೆ. ನಾನು ಹೀಗೆ ಮಾಡಿದರೆ ನಿರಾಶೆ ಕ್ಷೋಭಗಳಿಂದ ನನಗೆ ಮರಣದಂಡನೆ ವಿಧಿಸುವ ಅಧಿಕಾರಿಗಳು "ಅಯ್ಯೋ-ಅಯ್ಯೋ"ಎನ್ನುವರು. ಆಗ ನನಗೆ ಬಹಳ ಆನಂದವೆನಿಸುವುದು.

ಒಳ್ಳೇದು, ಒಂದು ಸಾರೆ ನನ್ನ ಸ್ಥಿತಿಯನ್ನು ಕುರಿತು ಆದಿಯಿಂದ ವಿಚಾರ ಮಾಡುವೆ ನನ್ನ ತೀರ್ಪು ಮುಗಿದು ಇಂದಿಗೆ ಮೂರುದಿನಗಳಾದವು. "ಅಪೀಲು ಮಾಡಬೇಕು! ಇದು ಇನ್ನು ಕಡೆಯ ಪ್ರಯತ್ನ!" ವಕೀಲನು ಹೇಳುತ್ತಾನೆ.

ಅಪೀಲು ಮಾಡಿದರೆ ಎಂಟು ದಿನ ಅರ್ಜಿ ಈ ಕೋಣೆಯಿಂದ ಆ ಕೋಣೆಗೆ, ಆ ಕೋಣೆಯಿಂದ ಈ ಕೋಣೆಗೆ ತಿರುಗಾಡುವುದು! ಹದಿನೈದು ದಿನಗಳಾದ ಮೇಲೆ ಕೋರ್ಟಿಗೆ ಹೋಗುವುದು; ಅಲ್ಲಿ ಆಗ ಅದರ ಮೇಲೆ ಅನುಕ್ರಮನಂಬರು ಹಾಕುವರು, ಅದನ್ನು ರಜಿಸ್ಟರಿಗೆ ಬರೆದುಕೊಳ್ಳುವರು. ಆಮೇಲೆ ಅದರ ನ್ಯಾಯವಿಚಾರಣೆ ನಡೆಯುವುದು ಆದರೆ ಇದೆಲ್ಲ ಇರಲಿ ಅಪೀಲು ಮಾಡಲು ಅಪ್ಪಣೆ ಸಿಕ್ಕರಲ್ಲವೆ ಅಪೀಲು ಮಾಡುವುದು? ಅಪ್ಪಣೆ ಸಿಗುವುದೋ, ಇಲ್ಲವೊ, ಇದರಲ್ಲಿ ಸಂದೇಹವಿದೆ!

ಆಮೇಲೆ ಮತ್ತೆ ಹದಿನೈದು ದಿನ ಅದರ ಹಾದಿ ಕಾಯಬೇಕು. ಎವೆಯಿಕ್ಕದೆ ಅದನ್ನು ನಿರೀಕ್ಷಿಸಬೇಕು. ಮತ್ತೆ ಅದೇ ವಿಚಾರಣೆಯ ನಟನೆ! "ಈ ಕೈದಿ ಮಾಡಿದ ಅಪರಾಧ ಅದು ಇವನ ಅಪರಾಧ ಸಿದ್ಧವಾಗಿದೆ. ಉದ್ಧಟತನದಿಂದ ಮತ್ತೆ ಅಪೀಲು ಮಾಡಿದ್ದಾನೆ" ಮುಂತಾಗಿ ಸರಕಾರೀ ವಕೀಲನು ವಕಾಲತ್ತು ನಡೆಸುವನು ಈ ಪ್ರಕಾರ ಮತ್ತೆ ಆರು ವಾರಗಳು ಕಳೆದುಹೋಗುವುವು.

ಕೊನೆಗೆ ಒಂದು ಮೃತ್ಯುಪತ್ರವನ್ನಾದರೂ ಬರೆಯಲಿ! ಈ ವಿಚಾರವು ಮನದೊಳಗೆ ಮೂಡುತ್ತಿದೆ. ಹೀಗೆ ವಿಚಾರ ಮಾಡುತ್ತೇನೆ; ಆದರೆ ವ್ಯರ್ಥ! ಈ ಖಟ್ಲೆಯನ್ನು ಕುರಿತು ಬಡಿದಾಡಿ-ಬಡಿದಾಡಿ ನನ್ನ ಎಲ್ಲ ಆಸ್ತಿನಾಸ್ತಿಯಾಗಿದೆ. ಇನ್ನು ಉಳಿದ ಆಸ್ತಿಗೆ ಮೃತ್ಯುಪತ್ರಮಾಡಿದರೆ? ಬಹುಶಃ ಕೋರ್ಟಿನ ದಂಡದ ಹಣಕ್ಕೆ ಅದನ್ನೂ ತೆಗೆದುಕೊಳ್ಳುವ ಸಂಭವವಿದೆ.

ಈ ಜಗತ್ತಿನೊಳಗೆ ನನಗೊಬ್ಬ ಮುದಿ ಅವ್ವ ಇದ್ದಾಳೆ, ಹರಯದ ಹೆಂಡತಿಯಿದ್ದಾಳೆ, ಒಬ್ಬ ಚಿಕ್ಕ ವಯಸ್ಸಿನ ಮಗಳೂ ಇದ್ದಾಳೆ, ಅದು ಮೂರ್‍ವರುಷದ ಮಗು. ಆ ಮಗುವಿನ ಚಂಚಲವಾದ ಕೆಂದುಟಿಯ ಮೇಲೆ ಯಾವಾಗಲೂ ನಗೆ ಇದ್ದೇ ಇರುತ್ತದೆ. ಹೊಳೆಯುವ ನೀಲಿ ಬಣ್ಣದ ಕಣ್ಣುಗಳು, ಉಂಗುರುಗೂದಲುಗಳ ಜಡೆ, ಒಂದೆರಡು ಹರಡಿದ ಕೂದಲು ಅವಳ ಮೋರೆಯ ಮೇಲೆ, ಕಣ್ಣುಗಳ ಮೇಲೆ ಹಾರಾಡುತ್ತಿರುತ್ತವೆ ಅದು ಹೂಗಳ ಮೇಲೆ ಝಾಲರಿ ಉಯ್ಯಾಲೆಯಾಡುವಂತೆ ತೋರುತ್ತದೆ. ಆರು ತಿಂಗಳಾದುವು ನಾನವಳನ್ನು ನೋಡದೆ. ಅಯ್ಯೊ, ಆರು ತಿಂಗಳಾದುವು.

ಅಯ್ಯೊ, ನಾನು ಸತ್ತರೆ ಈ ಜಗತ್ತಿನೊಳಗೆ ಮೂರು ಮಂದಿ ಸ್ತ್ರೀಯರು ಅನಾಥರಾಗುವರು. ಒಬ್ಬಳು ಪುತ್ರಹೀನಳಾಗುವಳು, ಇನ್ನೊಬ್ಬಳು ಪತಿಹೀನಳಾಗುವಳು. ಮತ್ತೊಬ್ಬಳು ಪಿತೃಹೀನಳಾಗುವಳು— ಮೂವರೂ ದುರ್ದೈವಿಗಳು. ಕಾಯಿದೆಯ ಒಂದು ಸನ್ನೆಗೆ ಮೂವರ ಆಶ್ರಯವೂ ಅದೃಶ್ಯವಾಗುವುದು. ನನಗಾಗುವ ದಂಡವು ಒಂದು ವೇಳೆ ಗೊತ್ತಾದರೂ ಆಗಲಿ, ಆದರೆ ಅನಾಥ ಪ್ರಾಣಿಗಳಾದರೂ ಯಾವ ತಪ್ಪನ್ನೂ ಮಾಡಿಲ್ಲ. ಇವರ ತಲೆಯ ಮೇಲೆ ಈ ಅಪರಾಧದ ಭಾರವೇಕೆ? ಸರಕಾರವು ಇದಕ್ಕೆ ಏನು ಉತ್ತರ ಕೊಡಬಲ್ಲುದು?

ಜನರು ತಿರಸ್ಕಾರದಿಂದ ಇವರನ್ನು ಕಾಣುವರು. ಆ ತಿರಸ್ಕಾರವನ್ನು ಇವರು ಸಹಿಸಲಾರರು. ಸರಕಾರವು ಇದಕ್ಕೇನಾದರೂ ವ್ಯವಸ್ಥೆ ಮಾಡುವುದೆ! ಇಲ್ಲ, ಮತ್ತೆ ಇದಕ್ಕೆಯೇ ವಿಚಾರಣೆಯೆಂದು ಹೇಳುತ್ತಾರೆ. ವಿಚಾರವಂತರ ಸುವ್ಯವಸ್ಥೆಯಿದು! ಈ ಸೋಗನ್ನು ನೋಡಿ ನನಗೆ ನಗೆ ಬರುತ್ತಿದೆ.

ಮುದುಕೆಯಾದ ತಾಯಿಯನ್ನು ಕುರಿತು ನಾನು ಚಿಂತಿಸುವುದಿಲ್ಲ.

ಅವಳ ಹಣ್ಣು-ಹಣ್ಣಾದ ದೇಹವನ್ನು ವಿದೀರ್ಣಮಾಡಲು ಇದೊಂದೇ ಆಘಾತವು ಸಾಕು.

ಹೆಂಡತಿಯನ್ನು ನೆನೆಸಿಕೊಂಡೂ ಚಿಂತೆಮಾಡುವುದಿಲ್ಲ, ಅವಳಾದರೂ ಎಂದಿನಂತೆಯೇ ಹಾಸುಗೆಯ ಮೇಲೆ ಬಿದ್ದುಕೊಂಡಿರಬಹುದು. ಮೊದಲಿನಿಂದಲೂ ಕೊರಗಿದ್ದಾಳೆ; ರೋಗದಿಂದಲೇ ಅವಳ ಜೀವನದ ಬೆಳಕು ಆರುವುದಿದೆ—ಈ ಸುದ್ದಿಯಿಂದ ಅವಳ ಕೊನೆಯ ಜೀವವೂ ಹಾರಿಹೋಗುವುದು. ಹಾ; ಏನೇ ಆಗಲಿ, ಆದರೆ ಅವಳಿಗೆ ಹುಚ್ಚು ಮಾತ್ರ ಹಿಡಿಯಬಾರದು.

ಹುಚ್ಚರಿಗೆ ಆಯುಷ್ಯವು ಬಹಳವೆಂದು ಕೇಳುತ್ತೇನೆ. ಬಹಳವಾದರೆ ಏನಾಯ್ತು? ಆದರೂ ಆ ಜೀವನದೊಳಗೂ ಮೃತ್ಯುವಿನಂತೆಯೇ ವಿರಾಮವಿದೆ; ಶಾಂತಿಯಿದೆ.

ಆದರೆ ನನ್ನ ಮಗಳು—ಅದೊಂದು ಶಾಂತಸ್ವಭಾವದ ಶಿಶು. ಅದು ಗೌರವಕ್ಕೆ ಯೋಗ್ಯವಾದ ಮಗು—ನಗೆ, ಆಟ-ಪಾಟ, ಹಾಡು-ಕುಣಿತಗಳಲ್ಲಿ ಎಲ್ಲವನ್ನೂ ಮರೆತಿದೆ. ಅಯ್ಯೋ, ನನ್ನ ತಲೆಯಮೇಲೊಂದಾವುದೋ ಆಪತ್ತು ತೂಗಾಡುತ್ತಿರುವುದನ್ನು ಅವಳು ಅರಿಯಳು. ವಜ್ರದ ಶಿಖೆಯಂತೆ ಅವಳ ಜೀವವೂ ಪುಡಿಪುಡಿಯಾಗಿ ಹೋಗುವುದು' ನಾಶವಾಗಿ ಹೋಗುವುದು! ಅಯ್ಯೋ! ಇದೊಂದೇ ಚಿಂತೆ ನನ್ನ ರೋಮ ರೋಮಗಳನ್ನೂ ಸುಡುತ್ತಿದೆ.

## ೬

ಇನ್ನೂ ರಾತ್ರಿಯಿದೆ! ಕಣ್ಣಿಗೆ ನಿದ್ದೆಯಿಲ್ಲ. ಸೆರೆಮನೆಯ ತುಂಬೆಲ್ಲ ಕತ್ತಲೆ! ಒಂದು ಶಬ್ದವೂ ಎಲ್ಲಿಂದಲೂ ಕೇಳಿಸುವುದಿಲ್ಲ. ಇನ್ನು ನಾನು ಹೇಗೆ ಹೊತ್ತುಗಳೆಯಲಿ? ಹೊತ್ತುಗಳೆಯಲು ಸಾಧನವಾದರೂ ಇಲ್ಲಿ ಎಲ್ಲಿಂದ ಬರಬೇಕು? ನಾನಿರುವ ಕೋಣೆಯ ಒಂದು ಮೂಲೆಯಲ್ಲಿ ಲಾಂದರು ಉರಿಯುತ್ತಿತ್ತು. ಆ ಲಾಂದರನ್ನೇ ತೆಗೆದುಕೊಂಡು ಸುತ್ತಲೂ ಗೋಡೆಯನ್ನು ನೋಡತೊಡಗಿದೆ. ಎಲ್ಲಿಯೂ ಒಂದು ಛಿದ್ರ ಕೂಡ ಕಾಣಲಿಲ್ಲ. ಹೊರಗಿನ ತಣ್ಣಗಿನ ಹವೆ ಒಳಗೆ ಬರಲು ಎಲ್ಲಿಯಾದರೂ ಒಂದು ಸಣ್ಣ ಕಿಂಡಿಯೂ ಬೇಡವೆ? ಕೇಳಬೇಡಿ!

ಗೋಡೆಯ ಮೇಲೆ ಅದೆಷ್ಟೋ ಚಿತ್ರಗಳನ್ನು ತೆಗೆದಿದ್ದಾರೆ. ಬೇರೆ ಬೇರೆ ಭಾಷೆಗಳಲ್ಲಿ ಎಷ್ಟೋ ಸಂಗತಿಗಳನ್ನು ಬರೆದಿದ್ದಾರೆ. ಒಂದು ಕಡೆಗೆ ಖಡುವಿನಿಂದ, ಇನ್ನೊಂದು ಕಡೆಗೆ ಇದ್ದಲಿಯಿಂದ! ಅಯ್ಯೋ, ನನ್ನಂಥ ದುರ್ದೈವಿಗಳೇ ಮನಸ್ಸಿನ ಮರುಕವನ್ನು ಕಲ್ಲಿನ ಗೋಡೆಯ ಮೇಲೆ ಬರೆದಿದ್ದಾರೆ! ಅವರ ಮರ್ಮಸ್ಥಾನದ ಎಲ್ಲ ಬಂಧನವೂ ಹರಿಯಿತು. ಆದರೂ ಈ ಕಲ್ಲಿನ ಗೋಡೆ ಅವರ ಕೂಡ ಒಂದು ಸಹಾನುಭೂತಿಯ ಶಬ್ದವನ್ನೂ ಆಡಲಿಲ್ಲ, ಒಂದು ಕ್ಷೀಣವಾದ ಮರುದನಿಯನ್ನೂ ಮಾಡಲಿಲ್ಲ. ಮೂಕವೂ, ನೀರವವೂ ಆದ ಪಾಷಾಣವು ಇದೇ ಪ್ರಕಾರ ಅಲುಗಾಡದೆ ನಿಂತಿತ್ತು. ಅವರ ದುಃಖದಿಂದ ತುಂಬಿದ ಆರ್ತಸ್ವರವು ಕಲ್ಲಿಗೆ ತಾಕಿ ತಿರುಗಿ ಅವರ ಮೇಲೆರಗಿ ಚೂರುಚೂರಾಗಿ ಹೋಯಿತು.

ಅವರ ದುಃಖದ ಸಂಗತಿಗಳನ್ನು ಗೋಡೆಯ ಮೇಲೆ ನಾನು ನೋಡತೊಡಗಿದೆ. ಈಗ ನನಗೆ ಹೊತ್ತುಗಳೆಯಲು ಒಂದು ಸಾಧನವು ಸಿಕ್ಕಿತು. ಅವರ ದುಃಖದ ಈ ಮಾಲೆಯನ್ನು ನಾನೇ ಇಂದು ನೀರೂರಿದ ಕಣ್ಣುಗಳಿಂದ ಧರಿಸುವೆ. ಮೃತ್ಯುವಿನ ಚಿಂತೆಯನ್ನೇ ಸ್ವಲ್ಪ ಹೊತ್ತು ಮರೆಯುವೆ.

ನನ್ನ ಹಾಸುಗೆಯ ಹತ್ತಿರ ಗೋಡೆಯ ಮೇಲೆ ಎರಡು ಹೃದಯಗಳನ್ನು ಬಾಣದಿಂದ ಹೆಣೆದಿದ್ದಾರೆ. ಇದೊಂದು ಚಿತ್ರ! ಬಹುಶಃ ಚಿತ್ರಕಾರನು ತನ್ನ ಹೃದಯದ ರಕ್ತದಿಂದಲೇ ಬರೆದಿರಬೇಕು. "ಹೃದಯದ ಪ್ರೇಮವೇ!" ಅಯ್ಯೋ, ಪಾಪ! ಆ ಬಡಪ್ರಾಣಿ ಇಲ್ಲಿ ಕುಳಿತುಕೊಂಡು ಹಗಲಿರುಳು ಪ್ರೇಮದ ಮಾತುಗಳನ್ನು ಕುರಿತು ಯೋಚಿಸಿರಬೇಕು. ಅದರ ಹತ್ತಿರವೇ ಯಾರೋ ಇದ್ದಲಿಯಿಂದ ಬರೆದಿದ್ದಾರೆ. "ಸಮ್ರಾಟನಿಗೆ ಜಯವಾಗಲಿ!" ಈ ಅಕ್ಷರಗಳಲ್ಲಿ ಎಷ್ಟು ಆಶೆ, ಆಕಾಂಕ್ಷೆ, ಆಶ್ವಾಸನಗಳು ಹುದುಗಿಕೊಂಡಿವೆಯಲ್ಲ!

ಒಂದು ಕಡೆಗೆ ಯಾರೋ ಬರೆದಿದ್ದಾರೆ. "ನಾನು ಬಾಧಿನಳನ್ನು ಪ್ರೀತಿಸುತ್ತೇನೆ!" ಮತ್ತೆ ಇನ್ನೊಂದು ಕಡೆಗೆ ಕೇವಲ "ಏ" ಅಕ್ಷರ ಮತ್ತು ಬಿಳಿಯ ಖಡುವಿನ ಕೇವಲ ಒಂದು ಗೆರೆ! ಕತ್ತಲೆಯೊಳಗೂ ಅದು ಬೆಳ್ಳಿಯ ಅಕ್ಷರದಂತೆಯೇ ಹೊಳೆಯುತ್ತಿದೆ! "ಏ" ಇದು ಬಹುಶಃ ಅವನ ಪ್ರಿಯತಮೆಯ ಹೆಸರಿರಬೇಕು; ಅವಳ ಹೆಸರು "ಏಮಾ" ಇಲ್ಲವೆ "ಏಡಿಥ" ಇದ್ದಿರಬೇಕು! ಅಯ್ಯೋ, ಇದೊಂದೇ ಅಕ್ಷರದೊಳಗೆ ಬೆಂದ, ಕಂದಿ ಕುಂದಿದ ಜೀವನದ ಒಂದು ದೊಡ್ಡ ನಿಟ್ಟುಸಿರು ಬೆರೆತಿದೆ!

ಕುಳಿತುಕೊಂಡು ಯೋಚನೆಮಾಡಹತ್ತಿದೆ. ನನ್ನ ಈ ನಿಸ್ಸಂಗ, ನಿರ್ಜನಾವಸ್ಥೆಯ ಜೀವನವನ್ನು ನೋಡಿ ಕಲ್ಲಿನ ಗೋಡೆಯೂ ಮರಮರ ಮರುಗಿತು. ಅದು ತನ್ನ ಕಲ್ಲೆದೆಯೊಳಗೆ ಇಷ್ಟು ವ್ಯಥೆ, ಇಷ್ಟು ಗುಪ್ತವೇದನೆಯನ್ನು ಹೂಳಿಟ್ಟುಕೊಂಡಿತ್ತು! ಇಂದು ಆ ದುರ್ದೈವಿಗಳ ಗುಂಪೆಲ್ಲಿದೆ! ಎಲ್ಲಿದ್ದಾಳೆ ಅವರ ಬಾಥಿಯಾ, ಏಮಾ, ಏಡಿಥ! ಯಾವ ಹೂದೋಟದೊಳಗೆ, ಯಾವ ಕಿಡಿಕಿಯ ಹತ್ತಿರ ಕುಳಿತುಕೊಂಡು ಅವರು ಆಕಾಶವನ್ನು ನಿಟ್ಟಿಸುತ್ತಿರುವರೊ! ಅವರ ಆ ತಣ್ಣಗಿನ ಉಸಿರು, ಅವರ ವಿರಹವ್ಯಥೆ, ಅವರ ಪ್ರಿಯ-ವಿಯೋಗಗಳೆಲ್ಲವೂ ಮುಗಿದುಹೋದುವೆ? ಇದಕ್ಕೆ ಯಾರು ಉತ್ತರ ಕೊಡುವರು.

ನಾನು ಲಾಂದರು ಹಿಡಿದುಕೊಂಡು ನೋಡತೊಡಗಿದೆ! ಗೋಡೆಯ ಒಂದು ಮೂಲೆಯ ಮೇಲೆ ಇದೇನು! ಅಯ್ಯೋ, ಇದು ಕೊಲ್ಲಂಬದ ಚಿತ್ರ! ಈ ಚಿತ್ರವನ್ನು ತೆಗೆದವರಾರು! ಯಾವ ಮೂರ್ಖನು ಈ ಪ್ರಕಾರ ಸಾವಿಗೆ ಆಮಂತ್ರಣ ಕೊಟ್ಟಿರುವನು! ಈ ಪೃಥ್ವಿ, ಈ ಜೀವನ, ಅವನಿಗೇನು ಇವೆಲ್ಲವೂ ನಿಜವಾಗಿ ಸಾರಹೀನವಾಗಿದ್ದುವೆ? ಎರಡು ನೆಟ್ಟಗಿನ ಕಟ್ಟಿಗೆಗಳನ್ನು ನಿಲ್ಲಿಸಿದ್ದಾನೆ ಎರಡೂ ಕಟ್ಟಿಗೆಗಳ ತುದಿಗೆ ಇನ್ನೊಂದು ಕಟ್ಟಿಗೆಯನ್ನು ಬಿಗಿದಿದ್ದಾನೆ. ನಡುವೆ ಒಂದು ಹಗ್ಗವು ನೇತಾಡುತ್ತಿದೆ—ಲಕ್ಷ್ಯಗೊಟ್ಟು ನಾನದನ್ನು ನೋಡಹತ್ತಿದೆ. ತಲೆ ತಿರುಗಹತ್ತಿತು. ಕೈಯೊಳಗಿನ ದೀಪ ಕೆಳಗೆ ಬಿದ್ದಿತು. ಕೂಡಲೇ ಕೋಣೆಯ ತುಂಬ ಕತ್ತಲೆ ಕವಿಯಿತು ಅಯ್ಯೋ, ಎಂಥ ಭಯಂಕರವಾದ ಕಗ್ಗತ್ತಲೆಯಿದು, ಹತಾಶನಾಗಿ ನಾನು ನೆಲದ ಮೇಲೆ ಕುಳಿತುಕೊಂಡೆ.

ಆಮೇಲೆ ತಡವರಿಸುತ್ತ ನನ್ನ ಹಾಸುಗೆಯ ಮೇಲೆ ಅಡ್ಡಾದೆ, ಮನಸ್ಸು ಅಸ್ಥಿರವಾಗುತ್ತಿತ್ತು— ಈ ಕಲ್ಲಿನ ಗೋಡೆಯ ಮೇಲೆ ತೆಗೆದ ಪ್ರತಿಯೊಂದು ಚಿತ್ರವನ್ನೂ, ಪ್ರತಿಯೊಂದು ಶಬ್ದವನ್ನೂ ನೋಡಬೇಕೆಂಬ ಲವಲವಿಕೆ ಹೆಚ್ಚುತ್ತಿತ್ತು.

ಕತ್ತಲೆಯೊಳಗೆ ಗೋಡೆಯನ್ನು ತಡವರಿಸಹತ್ತಿದೆ. ಆಗ ನನ್ನ ಕೈ ಜೇಡಕುಳದ ಬಲೆಗೆ ಸಿಕ್ಕಿತು. ಬಲೆಯೊಳಗಿಂದ ಕೈಬಿಡಿಸಿಕೊಂಡು ಹಾಸುಗೆಯ ಮೇಲೆ ಕುಳಿತೆ ಕಣ್ಣು ಮುಚ್ಚಹತ್ತಿದವು. ಮಲಗಿದೆ, ನಾನು ಕಣ್ಣು ತೆರೆದಾಗ ಕೋಣೆಯೊಳಗೆ ಹೂ-ಬಿಸಿಲು ಬೀಳುತ್ತಿತ್ತು. ಮತ್ತೆ ನಿಂತುಕೊಂಡು ಗೋಡೆಯನ್ನು ನೋಡಲಾರಂಭಿಸಿದೆ. ಗೋಡೆಯ ಮೇಲೆ ಒಂದೆಡೆಗೆ ನಾಲ್ಕು

ಹೆಸರುಗಳನ್ನು ಬರೆದಿದ್ದರು — ದಾಂತೊ ೧೮೧೫; ಪೂಲೊ ೧೮೧೮; ಜಿನ್-ಮಾರ್ಟಿನ್ ೧೮೨೧; ಕಾಸ್ತೆಂಗ್ ೧೮೨೩; ಆ ಹೆಸರುಗಳನ್ನು ಓದುವಾಗ ಒಂದು ಭೀಷಣವಾದ ಸಂಗತಿ ನೆನಪಾಯಿತು.

ದಾಂತೊ ಇವನು ಸಹೋದರನನ್ನು ಇರಿದಿದ್ದ. ದುಷ್ಟ ಪೂಲೊ ಇವನು ಹೆಂಡತಿಯನ್ನು ಹೊಡೆದು ಹಾಕಿದ್ದ. ಜಿನ್ನ ಮಾರ್ಟಿನ್ನನು ಬಂದೂಕಿಗೆ ತನ್ನ ತಂದೆಯನ್ನು ತುತ್ತು ಮಾಡಿದ್ದ. ಮತ್ತೆ ಕಾಸ್ತೇಂಗ್—ಡಾಕ್ಟರ ಕಾಸ್ತೇಂಗನು ತನ್ನ ಗೆಳೆಯನಿಗೆ ವಿಷವನ್ನು ಕೊಟ್ಟಿದ್ದ.

ನೋಡಿ ನಡುಗಿದೆ! ಅವರ ಕೊನೆಯುಸಿರು ಈಗಲೂ ಈ ಕೋಣೆಯ ಹವೆಯೊಳಗೆ ಬೆರೆಯುತ್ತಿವೆ. ಈ ಹಾಸುಗೆಯ ಮೇಲೆಯೇ ಅವರು ತಮ್ಮ ಕಟುಕ ಮನಸ್ಸಿನ ಕೊನೆಯ ಮಾತುಗಳನ್ನು, ಕೊನೆಯ ಚಿಂತೆಗಳನ್ನು ಹರಡಿ ಹೋಗಿದ್ದಾರೆ. ಈ ಕೋಣೆಯೊಳಗೆಯೇ ಅವರು ಓಡಾಡುತ್ತಿದ್ದರು, ಇಂದಿಗೂ ಈ ಕೋಣೆ ಅವರ ಉಸಿರಿನಿಂದ ಬಿಸಿಯಾಗಿದೆ.

ಅವರು ಹೋದ ಮೇಲೆ ಬಂದವರಲ್ಲಿ ನಾನೇ ಮೊದಲಿಗ. ಅವರು ನನ್ನನ್ನು ಕೈಸನ್ನೆ ಮಾಡಿ ಕರೆಯುತ್ತಿರುವಂತೆ ಭಾಸವಾಗುತ್ತಿದೆ. ಅಲ್ಲಿ ಕೇಳಿಸುವುದೇನು, ಅವರ ಸ್ವರವಾಗಿರಬಹುದೆ? ಕಣ್ಣುಮುಚ್ಚಿಕೊಂಡೆ, ಆಗ ಆ ಮೂರ್ತಿಗಳು ಮತ್ತಿಷ್ಟು ನಿಚ್ಚಳವಾಗಿ ಕಾಣಿಸಹತ್ತಿದುವು.

ಇದೇನು ಸಟೆಯೊ, ದಿಟವೊ, ಸ್ವಪ್ನವೊ, ಬುದ್ಧಿಭ್ರಮೆಯೊ? ಕಾಲಿಗೆ ಸ್ವಲ್ಪ ನೀರು ಹತ್ತಿದಂತಾಯಿತು!—ಇದೇನು?—ಜೇಡ! ಒಂದು ದೊಡ್ಡ ಜೇಡಹುಳುವನ್ನು ತುಳಿದು ಗಿಜಿಗಿಜಿ ಮಾಡಿದ್ದೇನೆ!- ಈ ಹುಳುವಿನ ಬಲೆಯೇ ಆಗ ನನ್ನ ಕೈಗೆ ಸಿಕ್ಕು ಹರಿದಿತ್ತು!—ಈಗ ನನಗೆ ಚೈತನ್ಯವು ಬಂದಿತು—ಇಲ್ಲಿಯ ವರೆಗೆ ಮೂರ್ಛೆ ಬಂದವರಂತೆ ಇದ್ದೆ. ಅಯ್ಯೊ! ಒಂದು ಛಾಯಾ-ಮೂರ್ತಿ ನನ್ನ ಸುತ್ತಲೂ ತಿರುಗುತ್ತಿದೆ.

ಇಲ್ಲ-ಇಲ್ಲ, ಇನ್ನು ಮನಸ್ಸನ್ನು ಸಂತೈಸಬೇಕು, ಸಬಲವನ್ನಾಗಿ ಮಾಡಬೇಕು. ಹೆಜ್ಜೆ-ಹೆಜ್ಜೆಗೆ ಸಾವಿನ ಕರೆ! ಇದರ ದವಡೆಯೊಳಗಿಂದ ಪಾರಾಗಲೇಬೇಕು. ದಾಂತೊ, ಪೂಲೊ ಇವರು ಸಮಾಧಿಯೊಳಗೆ ನಿದ್ರಿಸುತ್ತಿದ್ದಾರೆ. ಇನ್ನು ಅವರು ಇಲ್ಲಿಗೆ ಬರಲಾರರು—ಇಲ್ಲ, ಎಂದಿಗೂ ಬರಲಾರರು! ನಾನು ಸುಮ್ಮನೇ ಅವರಿಗೇಕೆ ಹೆದರುತ್ತಿರುವೆ! ಆದರೂ ಈ ಸೆರೆಮನೆಯೊಳಗಿಂದ

ನಾನು ಓಡಿಹೋಗಬಹುದು, ಆದರೆ ಸಮಾಧಿಯೊಳಗಿಂದ ಅವರು ಹೊರಗೆ ಬರುವುದು ಮಾತ್ರ ಸರ್ವಥಾ ಅಸಂಭವವು ಎಂದ ಮೇಲೆ ನಾನೇಕೆ ವ್ಯರ್ಥವಾಗಿ ಸಾಯುತ್ತಿರುವೆ.

೭

ಬಿಸಿಲು ಬಲಿತಿದೆ! ಸುತ್ತಲೂ ಕೋಲಾಹಲವು ನಡೆದಿದೆ! ದೊಡ್ಡ ದೊಡ್ಡ ಬಾಗಿಲುಗಳನ್ನು ತೆರೆಯುವ, ಮುಚ್ಚುವ ಸಪ್ಪಳ! ಕೀಲಿಕೈಗಳ ಜಣ-ಜಣಾಟ! ಇದೇ ಕಾರಾಗೃಹದ ಉಲ್ಲಾಸವೇನೊ ಎಂಬಂತಿತ್ತು. ಸಂಗೀತದಂತಿತ್ತು. ಎಲ್ಲರೂ ಆನಂದದಿಂದ ಓಲಾಡುತ್ತಿದ್ದಾರೆ, ಸಜೀವವಾಗಿದ್ದಾರೆ! ಆದರೆ ನಾನೇ ಏಕೆ ನೊಂದುಕೊಳ್ಳುತ್ತಿರುವೆ, ಏಕೆ ಉದಾಸೀನನಾಗಿರುವೆ.

ನಾನಿದ್ದ ಬಾಗಿಲಿನ ಹತ್ತಿರವೇ ಒಬ್ಬ ಕಾವಲುಗಾರನು ಹೋಗುತ್ತಲಿದ್ದ. ನಾನು ಅವನನ್ನು ಕರೆದು ಕೇಳಿದೆ—“ಇಷ್ಟೇಕೆ ಗದ್ದಲವಾಗುತ್ತಿದೆ? ಇಷ್ಟು ಆನಂದವೇಕೆ ಆವರಿಸಿದೆ?”

“ಹೊಸದಾಗಿ ಸೆರೆಯಾಳುಗಳ ಗುಂಪೊಂದು ಬಂದಿದೆ ಅವರ ಕಾಲಿಗೆ ಬೇಡಿ ಹಾಕುವರು. ನೀನು ನೋಡಲು ಹೋಗುವುದಿಲ್ಲವೆ?” ಅವನು ಉತ್ತರವಿತ್ತ.

ಸನ್ಯಾಸಿಯಂಥ ವೈಚಿತ್ರ್ಯವಿಲ್ಲದ, ಅಪ್ರಸನ್ನವಾದ ನಿಸ್ಸಂಗ ಜೀವನಕ್ಕೆ ಬೇಸತ್ತಿದ್ದೆ. ನೋಡುವ ಲಾಲಸೆ ನನ್ನಲ್ಲಿ ಹುಟ್ಟಲಾರದೆ ಹೋಯಿತು. ಬಹಳ ಎಚ್ಚರಿಕೆಯಿಂದ ಒಬ್ಬ ಕಾವಲುಗಾರನು ನನ್ನನ್ನು ಒಂದು ಕೋಣೆಗೆ ಕರೆದುಕೊಂಡು ಹೊರಟ. ಅಲ್ಲಿ ಕುಳಿತುಕೊಳ್ಳಲು ಒಂದೂ ಕುರ್ಚಿ ಇದ್ದಿದ್ದಿಲ್ಲ. ಹಾಂ, ಆದರೆ ಒಂದು ದೊಡ್ಡ ಕಿಡಿಕಿ ಮಾತ್ರ ಇತ್ತು. ಅದು ತೆರೆದಿತ್ತು, ಎಷ್ಟೋ ದಿನಗಳಾದ ಮೇಲೆ ಇಂದು ಕಿಡಿಕಿಯೊಳಗಿಂದ ಆಕಾಶದ ಬಹು ಭಾಗವು ಕಾಣಿಸಿತು. ಆಹಾ, ಮುಗಿಲು ಎಷ್ಟು ಸುಂದರವಾಗಿದೆಯಲ್ಲ!

“ಇಲ್ಲಿ ನಿಂತು ಮನದಣಿಯೆ ನೋಡು, ರಾಜನಂತೆ ಸುಖವಾಗಿ ನೋಡು. ನಿನ್ನ ಹತ್ತಿರ ಬಂದು ಯಾರೂ ನೆರೆಯುವುದಿಲ್ಲ” ಕಾವಲುಗಾರನೆಂದ.

ಹೀಗೆ ಹೇಳುತ್ತ ಅವನು ಬಾಗಿಲನ್ನು ಮುಚ್ಚಿಕೊಂಡು ಹೊರಟು ಹೋದ. ಕೀಲಿಯೊಳಗೆ ಕೀಲಿಕೈ ಹಾಕುವ ಸಪ್ಪಳವೂ ಕೇಳಿಸಿತು. ಕಿಡಿಕಿ

ಯೊಳಗಿಂದ ನೋಡಿದರೆ ಸೆರೆಮನೆಯ ದೊಡ್ಡ ಅಂಗಳವು ನಿಚ್ಚಳವಾಗಿ ಕಾಣಿಸುತ್ತಿತ್ತು. ಅಂಗಳದ ನಾಲ್ಕು ನಿಟ್ಟಿಗೂ ಎತ್ತರವಾದ ಗೋಡೆಯಿತ್ತು, ಒಂದು ಉದ್ದವಾದ ಪಡಸಾಲೆಯೂ ಇತ್ತು. ಅಲ್ಲಿ ಕೇವಲ ಜನರ ತಲೆಗಳೇ ಕಾಣಿಸುತ್ತಿದ್ದುವು. ಅವರೆಲ್ಲರೂ ತಮಾಷೆ ನೋಡಲು ನಿಂತಿದ್ದರು. ಅವರ ಕಣ್ಣುಗಳಲ್ಲಿ, ಮೋರೆಯ ಮೇಲೆ ಆಗ್ರಹದ ಚಿಹ್ನವೊಂದು ಕಾಣುತ್ತಿತ್ತು—ಕುತೂಹಲದ ಒಂದು ದೊಡ್ಡ ರೇಖೆ ಮೂಡಿತ್ತು, ನರಕದ ಪ್ರೇತಗಳು ಇಂದು ಮದದಿಂದ ನರ್ತಿಸುವಂತೆ ಕಾಣುತ್ತಿತ್ತು. ಎಲ್ಲರ ಕಣ್ಣುಗಳೂ ಅಂಗಳದ ಕಡೆಗೆಯೇ ಇದ್ದುವು.

ಹನ್ನೆರಡು ಹೊಡೆದಿದೆ. ಅಂಗಳದ ಬಾಗಿಲು ತೆರೆಯಿತು ಈಗ ಮತ್ತೆ ಅದೆಷ್ಟೋ ಮಂದಿ ಒಳಗೆ ಬಂದರು. ಅವರು ಬಂದೊಡನೆಯೇ ಒಂದು ಹೊಸ ಬಗೆಯ ಕೆಟ್ಟ ಕೋಲಾಹಲವೆದ್ದಿತು. ಕ್ಷಣಹೊತ್ತಿನಲ್ಲಿಯೇ ಸೆರೆಮನೆಯು ಒಂದು ಬಗೆಯ ಜೀವಕಳೆಯಿಂದ ತುಂಬಿಕೊಂಡಿತು. ಅಟ್ಟಹಾಸದಿಂದ, ಚೀತ್ಕಾರದಿಂದ ಆ ಪ್ರದೇಶವೆಲ್ಲ ಪ್ರತಿಧ್ವನಿಗೈಯಹತ್ತಿತು.

ಸೆರೆಯಾಳುಗಳ ಕೆಳಮೋರೆ, ಕಾವಲುಗಾರರ ವೀರೋಚಿತವಾದ ದರ್ಪ-ಈ ಸೃಷ್ಟಿಯಲ್ಲಿಯೇ ವಿಚಿತ್ರವಾಗಿತ್ತು. ಸೆರೆಯಾಳುಗಳ ಹೆಸರನ್ನು ಒದರಹತ್ತಿದರು. ಅವರು ಮಾಡಿದ ಅಪರಾಧವಾವುದು, ಶಿಕ್ಷೆಯ ಕ್ರಮವೇನು, ಎಲ್ಲವನ್ನೂ ಹೇಳಹತ್ತಿದರು. ಬಹಳ ದಂಡವಾದವರ ಹೆಸರಿನ ಕೂಡವೇ ಜಯ-ಧ್ವನಿಯಾಗಹತ್ತಿತು. ದರ್ಶಕರ ಮನಸ್ಸಿನೊಳಗೆ ಬೇರೆ ಬಗೆಯದೇ ಆನಂದವಿತ್ತು. ಸೆರೆಯಾಳುಗಳ ಒಂದು ಗುಂಪು ಗೆದ್ದ ಸೈನ್ಯದಂತಿತ್ತು. ಈಗ ಅದು ವಿಜಯವನ್ನು ಸಂಪಾದಿಸಿ ಬರುತ್ತಿರುವಂತೆ ಗದ್ದಲ ಮಾಡುತ್ತಿತ್ತು. ಆದುದರಿಂದಲೇ ಇಷ್ಟೆಲ್ಲ ಆನಂದವು ನಡೆದಿದೆ, ಆದುದರಿಂದಲೇ ಈ ತಾಂಡವನೃತ್ಯವು ನಡೆದಿದೆ. ಒಬ್ಬಿಬ್ಬರು ದರ್ಶಕರಂತೂ ಆನಂದದ ಮದದೊಳಗೆ ತಮ್ಮನ್ನು ತಾವೇ ಮರೆತರು.

ಆಮೇಲೆ ಸೆರೆಯಾಳುಗಳಲ್ಲಿ ಯಾರಾದರೂ ಗುರುತಿನವರಿದ್ದಾರೋ ಇಲ್ಲೋ. ಇದನ್ನು ಕುರಿತು ಶೋಧವು ನಡೆಯಿತು. ಗುರುತು ಪರಿಚಯವಿದ್ದವರನ್ನು ಬೇರೆ ಬೇರೆ ಕೋಣೆಯೊಳಗಿಡಬೇಕು—ಎಲ್ಲಿಯಾದರೂ ಅವರು ಸುಖದಿಂದ ಕಾಲಕಳೆಯುಹತ್ತಿದರೆ, ಅವರಿಗೆ ತಮ್ಮ ಶಿಕ್ಷೆಯ ಅನುಭವವೇನಾ-ದಂತಾಯಿತು!—ಅವರ ವಿಚಾರವಿದು!

ಸುತ್ತಲೂ ಕೋಲಾಹಲವೆದ್ದಿತ್ತು, ಅದೊಂದು ಅಖಂಡ ರಾಗಿಣಿಯಂತೆ ಕೇಳಿಸುತ್ತಿತ್ತು. ಇದು ಯಾವುದೊ ಮಾಯಾಲೋಕದ ಸಂಗೀತವಿರಬೇಕೆಂದು ನನಗೆನಿಸಹತ್ತಿತು ಆದರೆ ಆ ಧ್ವನಿ ಅತ್ಯಂತ ಅರ್ಥಹೀನವೂ, ಲಕ್ಷ್ಯ-ಹೀನವೂ ಉದ್ದೇಶಹೀನವೂ ಆಗಿತ್ತು. ತಣ್ಣಗಿನ ಮಂದ ಹವೆ ನನ್ನ ತಲೆಗೆ ತಂಪನ್ನು ತೀಡುತ್ತಿತ್ತು. ಸಣ್ಣದಾದ ಆಶೆಯ ಕಿರಣವೊಂದು ನನ್ನ ಮನಸ್ಸಿನೊಳಗೇಕೆ ಉದಯಿಸಿತೋ ಏನೊ, ಆ ಹೂಬಿಸಿಲು, ತೆರೆದ ಹವೆ, ಉದಾರವಾದ ಆಕಾಶ—ಅದಕ್ಕೆಯೇ ಜೀವನವೆನ್ನುವುದು!—ಇವುಗಳನ್ನಗಲಿ ದೂರ ಇರುವುದು—ಅಯ್ಯೊ, ಅದಕ್ಕೆಯೇ ಮೃತ್ಯುವೆಂದು ಕರೆಯುವುರೇ?

ಒಮ್ಮೆಲೇ ಹವೆಯಂತೆ ಬಿಸಿಲು ಇಳಿಯಿತು. ಯಾರೋ ಅದರ ಮೇಲೆ ಕರಿಯಬಣ್ಣದ ಪರದೆಯನ್ನೆಳೆದಂತಾಯಿತು. ಸಣ್ಣ ಮೋಡವು ಬಂದು ಪೃಥ್ವಿ ಹಾಗೂ ಬಿಸಿಲಿನ ನಡುವೆ ಒಂದು ಪರದೆಯನ್ನು ನಿರ್ಮಿಸಿತು ಬೂಟಾಟಿಕೆಯಿಂದ ತುಂಬಿದ ಸ್ವಪ್ನದಂತೆಯೇ ಒಂದು ನೆರಳು ಬಂದು ಬಿಸಿಲಿನ ತಾಪವನ್ನು ತಗ್ಗಿಸಿತು. ಕೂಡಲೇ ಮಳೆ ಸುರಿಯಲಾರಂಭಿಸಿತು. ಅಂಗಳದಲ್ಲಿದ್ದ ದರ್ಶಕರ ಗುಂಪು ಚೆದುರಿತು. ಸೆರೆಯಾಳುಗಳು ಮಾತ್ರ ಗೂಡು ಕಳೆದುಕೊಂಡ ಪಕ್ಷಿಗಳಂತೆ ಅಸಹಾಯರಾಗಿ ತೊಯ್ಯಿಸಿಕೊಳ್ಳುತ್ತಿದ್ದರು. ಅವರಲ್ಲಿ ಒಬ್ಬಿಬ್ಬರು ನಡುಗುತ್ತಿದ್ದರು. ಆದರೆ ಇದರಿಂದೇನು? ಕೇಳುವವರಾರು? ಅವರು ಕೈದಿಗಳಲ್ಲವೆ? ಈಗ ವಿಶ್ರಾಂತಿ ಅವರ ಪಾಲಿಗೆ ಶತ್ರುವಾಗಿದೆ.

ಮಳೆ ನಿಂತಿತು ಅವರನ್ನು ಮತ್ತೆ ಬಳೆಗಳಿಂದ ಬಂಧಿಸಿದರು ಕಾಲಿಗೆ ಬೇಡಿ ಹಾಕಿದರು ಅವರಲ್ಲೊಬ್ಬನು ಅಳಹತ್ತಿದ ನೆಲದ ಮೇಲೆ ಬಿದ್ದು ಉರುಳಾಡಹತ್ತಿದ. ಅದರಿಂದ ಒಂದು ಆರ್ತನಾದವೇ ಹುಟ್ಟಿತು! ಆದರೆ ಚಾಬುಕದ ಏಟು ಬಿದ್ದಾಗ ಎಲ್ಲರೂ ಸುಮ್ಮನಾದರು. ಅಯ್ಯೊ, ಇವರೆಂಥ ನರಪಿಶಾಚಿಗಳಪ್ಪ!

ಮೋಡವು ಸುರಿಯಿತು. ಸೂರ್ಯನ ಬೆಳಕು ಮತ್ತೆ ಬೆಳಗಲಾರಂಭಿಸಿತು. ಸೂರ್ಯನು ಕರಿಯ ಪರದೆಯನ್ನು ಎರಡೂ ಕೈಗಳಿಂದ ಸರಿಸಿ ಈ ದೃಶ್ಯವನ್ನು ನೋಡಲು ಬಂದವನಂತೆ ಇದ್ದ. ಒಳಗಿನಿಂದ ಸೆರೆಯಾಳುಗಳ ಗುಂಪು ಮತ್ತೆ ಹೊರಗೆ ಬಂದಿತು. ಅವರಲ್ಲಿ ಕೆಲವರು ಸೀಟಿ ಹೊಡೆಯುತ್ತಿದ್ದರು. ಮತ್ತೆ ಕೆಲವರು ಹಾಡುತ್ತಿದ್ದರು.

ಊಟದ ಹೊತ್ತಾಯಿತು. ಊಟದ ಎಲ್ಲ ಸಾಮಗ್ರಿಗಳೂ ಬಂದುವು. ದೊಡ್ಡ ದೊಡ್ಡ ಬಾಟ್ಲಿಗಳು, ಅವುಗಳಲ್ಲಿ ಸಪ್ಪೆಯಾದ ಕೇವಲ ನೀರಿನಂತಿದ್ದ ಪದಾರ್ಥ, ಅದಕ್ಕೆ ರುಚಿಯಿಲ್ಲ! ಕೂಳಬಕ್ಕನಿಗೆಯೇ ಅದರ ರುಚಿ ಗೊತ್ತು!

ಆದರೂ ಅವರು ಬಡಪಾಯಿಗಳು, ಪಾಪ ಹಸಿದಿದ್ದರು—ಆನಂದದಿಂದ ಅದನ್ನುಣ್ಣಲು ಅಣಿಯಾದರು ಊಟವು ಪ್ರಾರಂಭವಾಯಿತು. ಅದರಲ್ಲಿಯೇ ಅವರಿಗೇನೂ ಕಡಿಮೆ ಆನಂದವಿದ್ದಿಲ್ಲ

ನನಗೇನೂ ಮನಸ್ಸಿದ್ದಿಲ್ಲ. ಆದರೂ ಅದೆಲ್ಲವನ್ನೂ ನೋಡುತ್ತಲಿದ್ದೆ. ಆಗ ನನ್ನ ಪರಿವೆಯೇ ನನಗಿದ್ದಿದ್ದಿಲ್ಲ. ಮನಸ್ಸು ಮರುಕದಿಂದ ತುಂಬಿತು. ಕಣ್ಣುಗಳಲ್ಲಿ ನೀರೂರಿತು.

ಕೂಡಲೇ ಒಂದು ಧ್ವನಿಯಾಯಿತು. "ಏಳಿರಿ; ನಡೆಯಿರಿ!" ಸೆರೆಯಾಳುಗಳೊಳಗೆ ಗದ್ದಲವೆದ್ದಿತು. ಅವರೆಲ್ಲರೂ ಎದ್ದುನಿಂತರು, ಸಾಲಾದರು, ಮುಂದೆ ಸಾಗಿದರು. ನಾನಿದ್ದ ಕೋಣೆಯ ಕಿಡಿಕಿಯ ಹತ್ತಿರವೇ ಅವರು ಹಾಯ್ದು ಹೋಗುತ್ತಿದ್ದರು. ನನ್ನನ್ನು ಅವರೆಲ್ಲರೂ ನೋಡಿದರು. ಒಮ್ಮೆಲೇ ನಿಂತುಬಿಟ್ಟರು ಆಗ ನನ್ನ ಎದೆ ಡವ-ಡವ ಎನ್ನಹತ್ತಿತು. ನಾನೇನು ಪ್ರದರ್ಶನಾಲಯದ ಪ್ರಾಣಿಯೆ? ಅವರು ಹೀಗೆ ನನ್ನನ್ನೇಕೆ ದಿಟ್ಟಿಸಿ ಹರಿದು ತಿನ್ನುವಂತೆ ನೋಡುತ್ತಿದ್ದಾರೆ?

"ನೋಡಿರಿ, ಇವನಿಗೆ ಕೊಲ್ಗಂಬದ ಶಿಕ್ಷೆಯಾಗಿದೆ. ಇವನಿಗೆ ಗಲ್ಲಾಗುವುದು" ಅವರಲ್ಲಿ ಒಬ್ಬನು ಹೇಳಿದ ಆಗ ಸುತ್ತಲೂ ನಗೆಯೋ ನಗೆ ಹಬ್ಬಿತು. ಅಸಭ್ಯ ಪಶುಗಳಲ್ಲದೆ ಮತ್ತೇನು! ನನ್ನ ತಲೆಗೆ ಚಕ್ರ ಬಂದಂತಾಯಿತು. ಆಕಾಶದಲ್ಲಿ ನಾನು ನೇತಾಡುತ್ತಿದ್ದಂತೆ ನನಗೆನಿಸಹತ್ತಿತು. ನನಗೆ ಕೊಲ್ಗಂಬದ ಶಿಕ್ಷೆಯಾದ ಸಂಗತಿ ಇವರಿಗೆ ಹೇಗೆ ಗೊತ್ತಾಯಿತು?

ಅವರು ನಾಚಿಕೆಯಿಲ್ಲದವರಂತೆ ಒದರಿದರು. "ಒಳ್ಳೇದು ಗೆಳೆಯರೆ, ಇದೇ ಕೊನೆಯ ನಮಸ್ಕಾರ!" "ನಮಗಿಂತಲೂ ಈತನ ದೈವವೇ ಚೆಲೋದು, ಇವನಿಗೆ ಬೇಗನೇ ಬಿಡುಗಡೆಯಾಗುವುದು, ನಾನಂತೂ ಇನ್ನೂ ಹದಿನಾಲ್ಕು ವರುಷ ಇಲ್ಲಿರಬೇಕು." ಒಬ್ಬನು ಹೇಳಿದ.

ನನ್ನ ಚೈತನ್ಯವೆಲ್ಲ ಕುಂದಿತ್ತು. ಕೈ-ಕಾಲು ಮಿಸುಗಾಡಿಸಲೂ ಶಕ್ತಿಯಿದ್ದಿಲ್ಲ. ನನ್ನ ಕಣ್ಣೆದುರಿಗಿದ್ದ ಸೆರೆಯಾಳುಗಳ ಗುಂಪು ನದಿಯ ಪ್ರವಾಹ

ದಂತೆ ಮುಂದೆ ಸಾಗಿತು. ಒಮ್ಮೆಲೇ ನಾನು ಎಚ್ಚರಾದೆ. ಹೊರಗೆ ನೋಡಿದೆ. ಬೆಚ್ಚಿಬಿದ್ದೆ. ನನ್ನಷ್ಟಕ್ಕೆ ನಾನೇ ವಿಚಾರ ಮಾಡಿದೆ. ಈ ಕಿಡಿಕಿಯಾಚೆ ಹೊರಗೆ ಎಷ್ಟು ಬೆಳಕು, ಎಷ್ಟು ಆನಂದವಿದೆಯಲ್ಲ—ಮತ್ತೆ ಒಳಗೆ ಗಾಳಿ, ಬೆಳಕು, ಪ್ರಾಣ ಎಲ್ಲವೂ ನಿಂತಿವೆ. ಈ ಸಳಿಗಳಿರದಿದ್ದರೆ—?ಸಳಿಗಳನ್ನು ಹಿಡಿದು ಅವುಗಳನ್ನು ಅಲುಗಾಡಿಸಲು ಶಕ್ತಿಮೀರಿ ಯತ್ನಿಸಿದೆ! ಆದರೆ ವ್ಯರ್ಥ, ಅವು ತುಸುವಾದರೂ ಮಿಸುಗಲಿಲ್ಲ. ನನಗೆ ಪೆಟ್ಟು ತಾಗಿತು. ಸಿಟ್ಟಿನಿಂದ ಗದ್ದರಿಸಿದೆ, ನನ್ನ ಹೃದಯವು ಬಿರಿಯುತ್ತಿತ್ತು.

ದೂರದಿಂದ ಕೋಲಾಹಲದ ಒಂದು ಅಸ್ಪಷ್ಟಧ್ವನಿ ನನ್ನಕಿವಿಗೆ ಬಿದ್ದಿತು. ನಾನಲ್ಲಿಯೇ ಹತಾಶನಾಗಿ ಕುಳಿತುಕೊಂಡೆ. ದೂರದಲ್ಲಿ ಈ ವರೆಗೆ ಕೇಳಬರುತ್ತಿದ್ದ ಕೋಲಾಹಲವು ಮೆಲ್ಲ-ಮೆಲ್ಲಗೆ ಕ್ಷೀಣವಾಗುತ್ತ ಹೋಯಿತು. ಯಾರೋ ನನ್ನ ಜೀವನದ ಮೇಲೆ ಒಂದು ಕರಿಯ ಪರದೆಯನ್ನು ಮೆಲ್ಲ-ಮೆಲ್ಲಗೆ ಎಳೆಯುತ್ತಿರುವಂತೆ ಭಾಸವಾಗುತ್ತಿತ್ತು. ಮೂರ್ಛಿತನಾಗಿ ಹಿಂದಕ್ಕೆ ಬಿದ್ದೆ.

## ೮

ಕಣ್ಣು ತೆರೆದೆ. ನೋಡಿದೆ, ರಾತ್ರಿಯಾಗಿತ್ತು. ಮಂಚದ ಮೇಲೆ ಮಲಗಿದ್ದೆ. ಅಲ್ಲಿ ಪಲ್ಲಂಗಗಳನ್ನು ಸಾಲು-ಸಾಲಾಗಿಟ್ಟಿದ್ದರು! ಆಗ ನಾನು ಔಷಧಾಲಯದಲ್ಲಿದ್ದೇನೆಂಬ ಕಲ್ಪನೆ ಮನಸ್ಸಿನಲ್ಲಿ ಮೂಡಿತು. ನಾಲ್ಕೂ ನಿಟ್ಟಿಗೂ ಸಂಪೂರ್ಣ ಶಾಂತಿ ವಿರಾಜಿಸುತ್ತಿತ್ತು.

ತುಸು ಹೊತ್ತಿನ ವರೆಗಂತೂ ನನಗೆ ಏನೂ ನೆನಪಾಗಲಿಲ್ಲ. ಎಚ್ಚರವೇನೋ ಇತ್ತು, ಆದರೆ ಚೈತನ್ಯವಿದ್ದಿಲ್ಲ. ಮೊದಲು ನಾನು ಸೆರೆಮನೆಯ ಈ ಔಷಧಾಲಯವನ್ನು ಬಹಳ ಜರಿಯುತ್ತಿದೆ. ಆದರೆ ಇಂದು ನಾನು ಆಗಿನಂತೆ ಇಲ್ಲ. ಮೈಮೇಲೆ ಒಂದು ಮಾಸಿದ ಚಾದರು! ರೋಗಗಳ ಕೆಟ್ಟನಾತ! ಸುತ್ತಲೂ ಸಂಪೂರ್ಣ ಅಶಾಂತಿಯೇ ಅಶಾಂತಿ! ಒಂದು ಮೂರ್ತಿವೆತ್ತ ಭಯಂಕರವಾದ ದೃಶ್ಯ! ನನಗೆ ಅದೆಲ್ಲವನ್ನೂ ನೋಡುವುದಾಗಲಿಲ್ಲ. ಕಣ್ಣುಮುಚ್ಚಿಕೊಂಡೆ. ತುಸು ಹೊತ್ತಿನಲ್ಲಿ ನಿದ್ರಾದೇವಿಯ ತಣ್ಣಗಿನ ಕರಸ್ಪರ್ಶದಿಂದ ಎಲ್ಲ ಯಾತನೆಗಳನ್ನು ಮರೆತುಬಿಟ್ಟೆ.

ಒಮ್ಮೆಲೆ ನಿದ್ದೆ ಹರಿಯಿತು. ನೋಡಿದೆ, ಹೊತ್ತೇರಿತ್ತು. ಹೊರಗೆ ಗದ್ದಲವು ನಡೆದಿತ್ತು. ನನ್ನ ಮಂಚವು ಕಿಡಿಕಿಗೆ ತೀರ ಸಮೀಪದಲ್ಲಿತ್ತು. ಕಿಡಿಕಿಯೊಳಗಿಂದ ಹೊರಗೆ ನೋಡಿದೆ, ಸೆರೆಯಾಳುಗಳು ತಮ್ಮ ತಮ್ಮ ಕೆಲಸಕ್ಕೆ ಹೋಗಲು ಅಣಿಯಾಗುತ್ತಿದ್ದಾರೆ. ಅವರಿಗೆ ಹಾಕಿದ್ದ ಬೇಡಿಗಳ ಜಣ-ಜಣ ಸಪ್ಪಳ ಸ್ಪಷ್ಟವಾಗಿ ನನ್ನ ಕಿವಿಗೆ ಬಿತ್ತು. ಮುಂಜಾನೆಯೇ ಒಬ್ಬನಿಗೆ ಮರಣದಂಡನೆಯಾಯಿತು – ಉತ್ಸುಕರಾದ ದರ್ಶಕರ ಗುಂಪು ಅದೇ ನೋಡಿ ಗದ್ದಲ ಮಾಡುತ್ತ ತಿರುಗುತ್ತಿತ್ತು. ಈ ನಾಚಿಕೆಗೇಡಿಗಳಿಗೆ ಗದ್ದಲಮಾಡಲೂ ನಾಚಿಕೆ ಬರುವುದಿಲ್ಲವೆ? ಒಬ್ಬನು ಪ್ರಾಣಕ್ಕೆ ಎರವಾದರೆ, ಇವರು ಸಂತೋಷದಿಂದ ಕೂಗಾಡುತ್ತಿದ್ದಾರೆ ಇವರ ಮೇಲೇಕೆ ಸಿಡಿಲೆರಗಬಾರದು? ಮುಗಿಲಲ್ಲಿ ಸಿಡಿಲಿಗೆ ಅಭಾವವಿದೆಯೆ?

## ೬

ದ:

ನಾನು ಬಹಳ ಬೇಗನೇ ನೆಟ್ಟಗಾದೆ. ನನ್ನ ದೈವವೇ ಇಷ್ಟು ಕೆಟ್ಟದ್ದಿದೆ ಔಷಧಾಲಯವನ್ನು ಬಿಡಬೇಕಾಯಿತು ಆಮೇಲೆ ಮತ್ತೆ ಅದೇ ಮೊದಲಿನ ಸೆರೆಮನೆಯ ಮುಚ್ಚಿದ ಕೋಣೆ. ಅದು ನನ್ನ ನಿಟ್ಟುಸಿರಿನಿಂದಲೇ ತುಂಬಿಕೊಂಡಿತ್ತು. ನನ್ನ ಸುತ್ತಲೂ ನಿರಾಶೆಯ ವಾತಾವರಣವಿದೆ. ವಿಷಾದದಿಂದ ನಿರಾನಂದದಿಂದ, ಉದಾಸೀನ ಮನಸ್ಸಿನಿಂದ, ಇದೇ ಕೋಣೆಯೊಳಗೆ ಕುಳಿತುಕೊಂಡು ನಾನು ಸಾವಿನ ಬರವನ್ನು ನಿರೀಕ್ಷಿಸುತ್ತಿರಬೇಕು.

ನನಗಂತೂ ಈಗ ಯಾವ ಬೇನೆಯೂ ಇಲ್ಲ ಈ ಹರಯದ, ಸ್ವಾಸ್ಥ್ಯವುಳ್ಳ ಸಬಲವಾದ ದೇಹ—ಬೇನೆಗೆ ಏಕೆ ಬಲಿಯಾಗುವುದು? ನರಗಳಲ್ಲಿ ಬಿಸಿರಕ್ತವು ವೇಗವಾಗಿ ಸಂಚರಿಸುತ್ತಿದೆ; ಇಂಥ ಬುದ್ಧಿ, ಇಂಥ ಆರೋಗ್ಯಗಳಿರುವಾಗ ಈ ಮನಸ್ಸು ಮತ್ತೇಕೆ ಹೆಜ್ಜೆ-ಹೆಜ್ಜೆಗೆ ಅಸ್ಥಿರವಾಗುತ್ತಿರುವುದು? ಏಕೆ ಕುದಿಯುತ್ತಿರುವುದು?

ಔಷಧಾಲಯದಿಂದ ಈಗ ಮರಳಿ ಬಂದಿದ್ದೇನೆ. ಒಮ್ಮೊಮ್ಮೆ ಕೇವಲ ಒಂದು ಮಾತನ್ನೇ ಕುರಿತು ಯೋಚಿಸುತ್ತಿದ್ದೇನೆ. ಅಲ್ಲಿ ಓಡಿಹೋಗಲು ಒಳ್ಳೆಯ ಸಮಯವಿತ್ತು. ಆ ಹೊತ್ತನ್ನು ನಾನು ಮೂರ್ಖತನದಿಂದ ಕಳೆದುಕೊಂಡೆ! ಎಂಥ ಚೆಲೋ, ಸುಲಭವಾದ ಪ್ರಸಂಗವು ಸಿಕ್ಕಿದ್ದಿತಲ್ಲ! ನಿಸ್ತಬ್ಧ

ವಾದ ಕಾರಿರುಳಿನಲ್ಲಿ ಸುಮ್ಮನೆ ಹೊರಟುಹೋಗಿದ್ದರೆ—ಮುಕ್ತವೂ, ಸ್ವಾಧೀನವೂ ಆದ ರಾಜ್ಯವನ್ನು ಸೇರುತ್ತಿದ್ದೆನಲ್ಲ! ತಲೆಯೊಳಗಿನ ನರಗಳು ಧಕ್—ಧಕ್ ಎಂದು ಬಡಿದುಕೊಳ್ಳುತ್ತಿರುವುವು. ಕಣ್ಣ ಮುಂದೆ ನಾಲ್ಕು ನಿಟ್ಟಿಗೂ ಕೆಂಪು ಗುಂಡು ತೂಗಾಡುತ್ತಿವೆ.

ಒಂದು ವೇಳೆ ನಾನು ಓಡಿಹೋಗಿದ್ದರೆ! ಅಯ್ಯೋ! ಅದರಿಂದ ಇವರಿಗೆ ಏನು ನಷ್ಟವಾಗುತ್ತಿತ್ತು? ಇರಲಿ, ಅಪೀಲಿನಲ್ಲಿ ಒಂದು ವೇಳೆ ಬಿಡುಗಡೆಯಾದರೆ? ಸಾಕ್ಷಿದಾರರು ಆಣೆಯಿಟ್ಟುಕೊಂಡಿದ್ದಾರೆ—ವಿಚಾರಣೆ ಸಾಕಷ್ಟು ನಡೆದಿದೆ. ಇನ್ನು ಅಪೀಲಿನಿಂದೇನು ಲಾಭ? ಉಪಯೋಗವಿಲ್ಲ. ಅಯ್ಯೋ, ಎಲ್ಲವೂ ವ್ಯರ್ಥ. ಕೊಲ್ಗಂಬದ ಹಗ್ಗವೇ ನನಗೆ ಗತಿಯೆಂದು ನನ್ನ ಹಣೆಯೊಳಗೆ ಬರೆದಿದೆ. ಇನ್ನು ಅಪೀಲಿನ ಆಶೆ ದುರಾಶೆ! ಅದು ನಿರಾಧಾರವಾದುದು.

ಇಂದು ಒಂದು ವೇಳೆ ನನ್ನನ್ನು ಕ್ಷಮಿಸಿಬಿಟ್ಟರೆ! ಕ್ಷಮೆಯೆ? ಆದರೆ ಕ್ಷಮೆ ದೊರೆಯುವುದಾದರೂ ಹೇಗೆ? ಎಷ್ಟೋ ಮಂದಿ ದುರ್ದೈವಿಗಳು! ಒಜ್ಜೆಯನ್ನು ಹೊತ್ತುಕೊಂಡು, ಬೇಡಿಗಳನ್ನು ಜಗ್ಗಾಡುತ್ತ ಕೊಳೆಯುತ್ತಿದ್ದಾರೆ—ಇಟ್ಟಿಕೂಳನ್ನು ತಿಂದು ಹಸಿವೆಯನ್ನು ಹಿಂಗಿಸಿಕೊಳ್ಳುತ್ತಿದ್ದಾರೆ. ಇವರ ಪರಿವಾರ, ಕುಟುಂಬ, ಗೆಳೆಯರು ಎಲ್ಲಿದ್ದಾರೆ? ಇವರ ಮನೆಯ ಗತಿಯೇನು? ಇವರೆಲ್ಲರೂ ಸಮಾನ ಭಾವದಿಂದ ಕಷ್ಟಗಳನ್ನು ಸಹಿಸಿಕೊಳ್ಳುತ್ತಿರುವಾಗ ನನಗೆ ಕ್ಷಮೆಯೆ? ನಾನು ಆನಂದದಿಂದ ಮನೆಗೆ ಮರಳಿ ಹೋಗುವೆನೆ? ಏಕೆ, ಯಾವ ಕಾರಣದಿಂದ ಅವರು ನನ್ನನ್ನು ಕ್ಷಮಿಸುವರು? ಜಗತ್ತಿನ ಜನರು ಅನ್ಯಾಯಪೂರ್ಣವಾದ ಈ ಕ್ಷಮೆಯನ್ನು ನೋಡಿ ಏನೆಂದಾರು? ಇಲ್ಲ, ಕ್ಷಮೆಯಂತೂ ಸಾಧ್ಯವಿಲ್ಲ; ನನ್ನ ಬಿಡುಗಡೆಗೆ ಒಂದೇ ಒಂದು ಉಪಾಯವೆಂದರೆ ಕೊಲ್ಗಂಬ!

ಹೂಂ, ಒಂದು ವೇಳೆ ಓಡಿ ಹೋಗಿದ್ದರೆ, ಹಸಿರು ಮುರಿಯುವ ಹೊಲ, ಸಣ್ಣ-ದೊಡ್ಡ ಬೆಟ್ಟ, ಹಳ್ಳ-ಕೊಳ್ಳ, ಅಡವಿಗಳನ್ನು ದಾಟಿ ಯಾವುದಾದರೂ ಒಂದು ಅಪರಿಚಿತ ದೇಶದ ಕಡೆಗೆ ಹೋಗುತ್ತಿದ್ದೆ! ಯಾರ ಕಡೆಗೂ ಕಣ್ಣೆತ್ತಿ ನೋಡುತ್ತಿದ್ದಿಲ್ಲ. ಗಿಡಗಳ ಹಣ್ಣು-ಹಂಪಲುಗಳಿಂದ ಹಸಿವೆಯನ್ನೂ, ನದಿಯ ನೀರಿನಿಂದ ನೀರಡಿಕೆಯನ್ನೂ ಹೋಗಲಾಡಿಸಿಕೊಳ್ಳುತ್ತಿದ್ದೆ. ಪಕ್ಷಿಗಳ ಇನಿದಾದ ಇಂಚರವನಾಲಿಸಿ ವಿಶ್ರಮಿಸುತ್ತಿದ್ದೆ. ಗಿಡದಡಿಯಲ್ಲಿ ಮಲಗುತ್ತಿದ್ದೆ. ಲೋಕಾಲಯದಲ್ಲಿಯೆ? ಇಲ್ಲ—ಅಲ್ಲಿ ಯಾರಾದರೂ ನೋಡಿದರೆ, ಸಂಶಯಪಟ್ಟು

ಕೊಂಡರೆ, ಹಿಡಿದರೆ? ನಾನು ಓಡುವುದಾದರೂ ಅಷ್ಟರಲ್ಲಿಯೇ ಇದೆ!—ಓಡಿದರೆ ಅವರ ಸಂಶಯವು ಮತ್ತಷ್ಟು ಹೆಚ್ಚಾಗುವುದು! ಮೆಲ್ಲ-ಮೆಲ್ಲಗೆ ನಿಶ್ಚಿಂತೆಯಿಂದ ಎಷ್ಟೋ ಪಟ್ಟಣ, ಹಳ್ಳಿಗಳನ್ನೂ ದಾಟಿ ಹೋಗುತ್ತಿದ್ದೆ. ಗುಪ್ತ ವೇಷದ ಉಡುಗೆಗಳನ್ನು ಎಲ್ಲಿಂದಲಾದರೂ ಕೂಡಿಸಿಕೊಳ್ಳುತ್ತಿದ್ದೆ. ನಮ್ಮ ಊರ ಹತ್ತಿರವೇ ಒಂದು ಕೊಪ್ಪಲು ಇದೆ. ಆ ಕೊಪ್ಪಲಿನಲ್ಲಿ ನಾನು ಎಷ್ಟೋ ರಾತ್ರಿಯನ್ನು ಜಾಗರಣೆಯಿಂದ ಕಳೆದಿದ್ದೇನೆ. ಎಷ್ಟೋ ದಿನಗಳನ್ನು ಆಡಿ ಕಳೆದ್ದೇನೆ! ಬಾಲ್ಯದಲ್ಲಿ ಗೆಳೆಯರೊಂದಿಗೆ ಅಲ್ಲಿ ಕಣ್ಣುಮುಚ್ಚಾಟವನ್ನಾಡುತ್ತಿದ್ದೆ; ನಗೆ, ಹುಡುಗಾಟಿಕೆ, ನಗೆಚಾಟಿಕೆ! ಅಯ್ಯೊ, ಆ ದಿನಗಳೆಷ್ಟು ಸುಂದರವಾಗಿದ್ದುವಲ್ಲ! ಕಳೆದು ಹೋದ ಆ ದಿನಗಳು ಒಂದು ಕ್ಷಣವಾದರೂ ಇಂದು ನನಗೆ ದೊರೆತರೆ!

ಹಾಂ, ಮುಂದೆ ಕತ್ತಲೆ ಬಿದ್ದ ಮೇಲೆ ನಾನು ದಾರಿಯಲ್ಲಿ ಓಡಾಡುತ್ತಿದ್ದೆ. ಮೊದಲು ಭಿನ್ಸೇನ ಪಟ್ಟಣಕ್ಕೆ ಹೋಗುತ್ತಿದ್ದೆ. ಇಲ್ಲ, ಭಿನ್ಸೇನಕ್ಕೆ ಹೋಗುವುದು ಹೇಗೆ? ದಾರಿಯಲ್ಲಿ ಒಂದು ದೊಡ್ಡ ನದಿ ಹತ್ತುತ್ತದೆ; ಅದನ್ನು ದಾಟುವುದು ಕಠಿಣ ಹಾಗಾದರೆ ಆಪಾಜಿನ ನಗರಕ್ಕೆ ಹೋಗುತ್ತಿದ್ದೆ: ಇಲ್ಲ, ಮೊದಲು ಜರ್ಮನಿಗೆ ಹೋಗುವುದೇ ವಿಹಿತ-ಅಲ್ಲಿಂದ ಹೇಮುರ, ಹೇಮುರದಿಂದ ಇಂಗ್ಲಂಡ! ಆದರೆ ಆಗ ಪೋಲಿಸನು ಹಿಡಿದರೆ, ಪಾಸಪೋರ್ಟ ತೋರಿಸೆಂದು ಕೇಳಿದರೆ? ಕಷ್ಟವಾಗುತ್ತಿತ್ತು.

ಅಯ್ಯೊ, ನಾನು ದುರ್ದೈವಿ, ಇದನ್ನೇನು ಯೋಚಿಸುತ್ತಿದ್ದೇನೆ! ನಾನು ಸ್ವಪ್ನಮುದ್ರಿತ ಜೀವಿ, ಮೂರು ಫೂಟು ಎತ್ತರವಿರುವ ಈ ಗೋಡೆಯನ್ನು ಹಾರಿ ಹೋಗುವುದು ಹೇಗೆ? ಅಸಂಭವ. ಅಯ್ಯೊ, ಉಪಾಯವೇ ಇಲ್ಲವಲ್ಲ—ಇಲ್ಲ! ಇನ್ನು ಸಾವೇ ನನ್ನ ಸಂಗಡಿಗ!

ನನಗೆ ಈಗ ನನ್ನ ಬಾಲ್ಯದ ಸಂಗತಿಗಳೆಲ್ಲ ನೆನಪಾಗುತ್ತಿವೆ. ನಾನು ಆಗ ಈ ಕೊಲ್ಗಂಬವನ್ನು ನೋಡಲು ಕೆರೆಮನೆಗೆ ಬರುತ್ತಿದ್ದೆ. ಉಶ್, ಆಗ ಇಲ್ಲಿ ಎಷ್ಟು ಜನರು ನೆರೆಯುತ್ತಿದ್ದರಲ್ಲ! ಆದರೆ ಮತ್ತೆ ಇಂದು?

## ೧೦

ದೀಪವು ಆರುವುದಿತ್ತು. ಈಗ ಬೆಳಗಾಗುವುದು! ಚರ್ಚಿನ ದೊಡ್ಡ ಗಂಟೆ ಡಣ್-ಡಣ್ ಎಂದು ಆರು ಬಾರಿಸಿತು. ಕಾವಲುಗಾರನು ಬಂದ. ಟೊಪ್ಪಿಗೆ

ತೆಗೆದು ನಮಸ್ಕಾರ ಮಾಡಿದ. "ಏನಾದರೂ ತಿನ್ನುವ ಇಚ್ಛೆಯಿದೆಯೆ?" ವಿನಯ ತುಂಬಿದ ಶಬ್ದಗಳಿಂದ ಕೇಳಿದ. ಆಶ್ಚರ್ಯ! ಇಷ್ಟು ವಿನಯ, ಇಷ್ಟು ನಮ್ರತೆಯೆ! ನನ್ನ ಮೈಯೆಲ್ಲ ನಡುಗಿತು! ಇಂದೇ ಹೀಗೇಕಾಯಿತು?

ಹೌದು, ಇಂದೆಯೆ! ಸ್ವತಃ ಜೇಲರ ಬಂದಿದ್ದರು ನನಗೇನು ಬೇಕೆಂದು ವಿಚಾರಿಸಿದರು. "ನಿನ್ನ ಕೂಡ ಕೆಟ್ಟ ರೀತಿಯಿಂದ ನಡೆದುಕೊಳ್ಳುವರೋ, ಹೇಗೆ? ನಿನಗೆ ಅಪಮಾನ ಮಾಡುವರೆ? ನಿನ್ನ ಪ್ರಕೃತಿ ಹೇಗಿದೆ? ರಾತ್ರಿ ಸರಿಯಾಗಿ ನಿದ್ದೆ ಬರುತ್ತಿರಬಹುದಲ್ಲ'" ಕೇಳಿದರು ಅವರು ಪ್ರತಿ ಮಾತಿಗೂ ಮಹನೀಯ ಎಂದು ಕರೆಯುತ್ತಿದ್ದರು ಇಂದು ನನ್ನ ಸಂಶಯವೆಲ್ಲ ದೂರ ಆಯಿತು. ಈ ದಿನವೇ, ಚಿರಸ್ಮರಣೀಯ ದಿನ! ಅಂದಿನ ನೆನಪನ್ನು ಒಂದು ಕ್ಷಣವಾದರೂ ಮರೆತಿದ್ದಿಲ್ಲ!

ಜೇಲರರಾಗಲಿ, ಅವರ ನೌಕರರಾಗಲಿ ಏನಾದರೂ ನನಗೆ ತ್ರುಟಿಯನ್ನೇಕೆ ಮಾಡುತ್ತಾರೆ! ನನ್ನ ಕೂಡ ಕೆಟ್ಟ ರೀತಿಯಿಂದೇಕೆ ನಡೆದುಕೊಳ್ಳುತ್ತಾರೆ? ಇದೊಂದು ಹುಡುಗಾಟಿಕೆಯ ಮಾತು! ಅವರು ಕೇವಲ ತಮ್ಮ ಕರ್ತವ್ಯವನ್ನು ಕೊನೆಗಾಣಿಸುತ್ತಿದ್ದಾರೆ. ನನ್ನ ಕೂಡ ಯಾರೂ ಕೆಟ್ಟ ರೀತಿಯಿಂದ ನಡೆದುಕೊಳ್ಳಲಿಲ್ಲ ಈ ಮಾತನ್ನು ನೆನೆಸಿಕೊಂಡಾಗ ಸಂತೋಷವೆನಿಸುತ್ತದೆ.

ಮತ್ತೆ ಈ ಜೇಲರ—ಇವರೂ ಒಳ್ಳೆಯವರು ಎಂಥ ಸವಿ-ಸವಿ ಮಾತುಗಳನ್ನಾಡುತ್ತಾರೆ. ಮಧುರ ದೃಷ್ಟಿಯಿಂದ ಕಾಣುತ್ತಾರೆ– ಹಾಂ-ಹಾಂ, ಧೀರವೂ, ಬಲಿಷ್ಠವೂ ಆದ ಬಾಹುಗಳು! ಸೆರೆಮನೆಗೆ ಇದೊಂದೇ ಪ್ರತಿಬಿಂಬ! ಇದೇ ಒಂದು ಕಲ್ಲಿನ ಜೀವಂತ ಕಾರಾಗೃಹದಂತಿದೆ. ಇಲ್ಲಿಯ ಎಲ್ಲ ವಸ್ತುಗಳು ಸೆರೆಮನೆಯ ರೂಪಾಂತರದಂತಿವೆ! ಕಾವಲುಗಾರರು ಕಬ್ಬಿಣದ ಸಳಿ, ಕಲ್ಲಿನ ಗೋಡೆ—ಎಲ್ಲವೂ ಕೀಲಿ, ಕೀಲೀಕೈಗಳೂ ಸಹ ಸಜೀವ ಪ್ರಾಣಿಯಂತೆ ಕಾಣಿಸುತ್ತವೆ—ನಿಷ್ಠುರವಾದ ಸೆರೆಮನೆ, ಅರ್ಧಕಲ್ಲು, ಅರ್ಧ ಮಾನವನ ದೇಹದಂತಿದೆ—ನನ್ನನ್ನು ಇದು ಬಂಧಿಸಿಟ್ಟಂತಾಗಿದೆ ಉಕ್ಕಿನಂಥ ಕೈಯವನ್ನಿಟ್ಟುಕೊಂಡು ನನ್ನನ್ನಾಲಂಗಿಸಲು ಬರುತ್ತಿದೆ ನಾನು ದರಿದ್ರ, ದುರ್ದೈವಿ! ನನ್ನನ್ನು ಕಂಡರೆ ಹೀಗೇಕೆ ಹುಡುಗಾಟಿಕೆ ಮಾಡುತ್ತಾರೆ?

ಈಗ ಮನಸ್ಸಿಗೆ ಆರಾಮು ಇದೆ. ಯಾವುದರ ಚಿಂತೆಯೂ ಇಲ್ಲ ಯಾವ ತೊಂದರೆಯೂ ಇಲ್ಲ. . ಜೇಲರ ಬಂದು ನೋಡಿಕೊಂಡು ಹೋಗಿದ್ದಾರೆ ಅವರು ಬಂದು ಹೋದಾಗಿನಿಂದ ನಾನು ಚೆಲೋ ಇದ್ದೇನೆ. ಮೊದಲು ಮನಸ್ಸಿನೊಳಗೇನೋ ಬಹಳ ಆಶೆಯಿತ್ತು; ಆದರೆ ಈಗ ಅದೆಲ್ಲವನ್ನೂ ಬಿಟ್ಟು ಕೊಟ್ಟಿದ್ದೇನೆ—ಜೇಲರರು ಹೇಳಿದ ಮೇಲೆಯೇ ಬಿಟ್ಟೆ.

ಸುಮಾರು ಆರುವರೆ ಅಥವಾ ಆರು ಮುಕ್ಕಾಲು ಹೊಡೆದಿರಬಹುದು ಒಮ್ಮೆಲೆ ನಾನಿರುವ ಕೋಣೆಯ ಬಾಗಿಲು ತೆರೆಯಿತು ನರೆಗೂದಲಿನ ಮುದುಕನೊಬ್ಬನು ನನ್ನ ಕೋಣೆಯೊಳಗೆ ಕಾಲಿಟ್ಟ. ಬಂದ ಕೂಡಲೇ ಅವನು ತನ್ನ ಒಜ್ಜೆಯಾದ ಕೋಟನ್ನು ಬಿಚ್ಚಿ ಕುಳಿತುಕೊಂಡ ಅವನುಟ್ಟ ಅರಿವೆಗಳನ್ನು ನೋಡಿಯೇ ನಾನು ತಿಳಿದುಕೊಂಡೆ. ಈ ಮಹನೀಯರೊಬ್ಬರು ಆಚಾರ್ಯರು ಇರಬೇಕು.

ಅವರು ನನ್ನ ಮುಂದೆಯೇ ಕುಳಿತಿದ್ದರು ತಲೆಯನ್ನಲುಗಾಡಿಸಿ ಆಗ ಸದ ಕಡೆಗೆ ನೋಡಿದರು. ಇದರ ಗುಟ್ಟು ನನಗೆ ಗೊತ್ತಾಯಿತು. ಅವರು ನನ್ನನ್ನು ನೋಡುತ್ತ ಕೇಳಿದರು—"ಮಗು, ನೀನು ಬಂದುಬಿಟ್ಟಿದ್ದೀಯಾ, ಸಿದ್ಧವೆ?"

"ಇಲ್ಲ, ಇನ್ನೂ ಸಿದ್ಧನಾಗಿಲ್ಲ; ಆದರೆ ಹಾಂ, ಈಗಲೇ ಹೊರಡಲು ಸಿದ್ಧನಿದ್ದೇನೆ." ನಾನು ಶಾಂತಸ್ವರದಿಂದ ಉತ್ತರವಿತ್ತೆ. ನನ್ನ ಕಣ್ಣು ಮದ್ದಿನವು ಯಾಗಿತ್ತು ನಡೆದಿದ್ದುವು. ಹಣೆ ಬೆವರಿನಿಂದ ತುಂಬಿತ್ತು. ಸಿದ್ಧ-ಒಮ್ಮೆಲೇ ಸಿದ್ಧವೆ,—ಆದರೆ ಏತಕ್ಕೆ? ನಾನು ನಡುಗಿದೆ! ಪ್ರಾಣಗಳ ನಡುವೆ ಒಂದು ವಿಕಟಧ್ವನಿ—ಸಪ್ಪಳವಾಗತೊಡಗಿತು.

ಆಚಾರ್ಯರು ಏನೋ ಬಹಳ ಹೇಳುತ್ತಿದ್ದರು—ಅವರ ತುಟಿಗಳು ನಡುಗುತ್ತಿದ್ದುವು. ಅವುಗಳಂತೆಯೇ ಕೈಕಾಲೂ, ಕುತ್ತಿಗೆಯೂ ನಡುಗುತ್ತಿದ್ದುವು. ಅವರೇನು ಹೇಳುತ್ತಿದ್ದರೋ, ಏನೊ ನಾನರಿಯೆ; ಯಾಕಂದರೆ ಅವರಾಡುವ ಒಂದು ಶಬ್ದವೂ ನನ್ನ ಕಿವಿಗೆ ಬೀಳುತ್ತಿದ್ದಿಲ್ಲ

ಮತ್ತೆ ಬಾಗಿಲು ತೆರೆಯಿತು. ಈಗ ಸ್ವತಃ ಜೇಲಾಧ್ಯಕ್ಷರೇ ಬಂದರು.

ಅವರು ಕರಿಯ ಕೋಟನ್ನು ತೊಟ್ಟಿದ್ದರು. ಕೈಯೊಳಗೊಂದು ಕಾಗದ-ಪತ್ರದ ಪುಡಿಕೆಯಿತ್ತು—ಮುಖದ ಮೇಲೆ ದುಃಖಸೂಚಕ ಚಿಹ್ನವನ್ನು ತರಲು ಯತ್ನಿಸುತ್ತಿದ್ದರು.

"ಕೋರ್ಟಿನಿಂದ ಸುದ್ದಿ ಬಂದಿದೆ" ಜೇಲರರು ಎಂದರು. ಈ ವಾಕ್ಯವನ್ನು ಕೇಳಿದ ಕೂಡಲೇ ನನ್ನ ಮೈತುಂಬ ವಿದ್ಯುತ್ತು ಹರಿದಾಡಿದಂತಾಯಿತು

"ಕೋರ್ಟು ನನ್ನ ತಲೆಯನ್ನು ಈಗಲೇ ತನ್ನಿರೆಂದು ಹೇಳುತ್ತಿದೆಯೆ? ಅದು ನನಗೆ ಗೌರವದ ಮಾತು ನನ್ನ ಈ ದೇಹದ ಮೇಲೆ ಸರಕಾರೀ ವಕೀಲನ ಆಶೆ ಬಹಳವಿದೆ—ಇದನ್ನು ನಾನು ಚೆನ್ನಾಗಿ ಬಲ್ಲೆ. ಹೂಂ. ನಾನು ಪೂರ್ಣ ಸಿದ್ಧತೆಯಲ್ಲಿದ್ದೇನೆ!" ನಾನು ಹೇಳಿದೆ ಅವರು ಪುಡಿಕೆಯನ್ನು ಬಿಚ್ಚಿ ಕಾಗದಗಳನ್ನು ಓದಹತ್ತಿದರು. ಮತ್ತೆ ಅದೇ ಕಬ್ಬಿಣದ ಕಡಲೆಯಂಥ ಕೋರ್ಟಿನ ಭಾಷೆ, ದೊಡ್ಡ ದೊಡ್ಡ ಶಬ್ದಗಳ ಕಡಕಡಾಟ—ಸುಲಭವಾಗಿ ತಿಳಿಯುವಂತಿದ್ದಿಲ್ಲ. ತಿಣಿಕಾಡಿ ಅರ್ಥಮಾಡಿಕೊಳ್ಳಬೇಕಾಗಿತ್ತು. ಅರ್ಧತಾಸು ತಲೆ ತುರಿಸಿಕೊಂಡು ಕಾಗದಪತ್ರಗಳನ್ನು ನೋಡಿದ ಮೇಲೆ ಅದರ ಅರ್ಥವಾಯಿತು. ನನ್ನ ಅಪೀಲು ನಿರಾಕೃತವಾಗಿತ್ತು. ಒಳ್ಳೇದು!

ಕಾಗದಗಳನ್ನು ನೋಡುತ್ತಲೇ ಅವರು ಮಾತನಾಡಿದರು—"ಪ್ಲೇದೀ-ಗ್ರೀವ್ಹದಲ್ಲಿ ಕೊಲ್ಗಂಬದ ಶಿಕ್ಷೆ ಕೊಡುವರು. ನಾವು ಏಳುವರೆ ಗಂಟೆಗೆ ಕಾಂಸಿಯಾರಿ ಸೆರೆಮನೆಗೆ ಹೋಗಬೇಕು ದಯಮಾಡಿ ನೀನೂ ನನ್ನ ಕೂಡ ನಡೆ." ತುಸು ಹೊತ್ತು ಸುಮ್ಮನಿದ್ದೆ. ಯಾರ ಮಾತಿಗೂ ನಾನು ಉತ್ತರ ಕೊಡಲಿಲ್ಲ. ಜೇಲಾಧ್ಯಕ್ಷರೂ, ಆಚಾರ್ಯರೂ ಏನೇನೋ ಬಹಳ ಹೊತ್ತು ಮಾತನಾಡುತ್ತಿದ್ದರು. ದೇಶದ ಸರ್ವಸಾಧಾರಣ ವಿಷಯವನ್ನು ಕುರಿತು ವಾದ ನಡೆದಿತ್ತು. ಅವರು ಅದೇ ವಾದದೊಳಗೆ ತನ್ಮಯರಾಗಿದ್ದರು.

ಇದೇ ಹೊತ್ತಿಗೆ ಬಾಗಿಲು ತೆರೆಯಿತು, ಸಶಸ್ತ್ರರಾದ ನಾಲ್ವರು ಕಾವಲುಗಾರರು ಕೋಣೆಯೊಳಗೆ ಬಂದರು. ಅವರು ಯಮದೂತರಂತಿದ್ದರು ನಮಸ್ಕಾರ ಮಾಡಿ ಹೇಳಿದರು—"ಏಳಿರಿ ಹೊತ್ತಾಯಿತು"

"ನಾನೂ ಅಣಿಯಾಗಿದ್ದೇನೆ; ನಡೆಯಿರಿ," ನಾನೆಂದೆ. "ಇನ್ನು ಅರ್ಧತಾಸಿನೊಳಗೆಯೇ ಹೊರಡಬೇಕು." ಹೀಗೆಂದು ಅವರು ಕೋಣೆಯೊಳಗಿಂದ ಹೊರಗೆ ಹೊರಟುಹೋದರು. ಒಂದು ಸಾರೆ ಕೊನೆಯ ಪ್ರಯತ್ನ! ಅಯ್ಯೋ, ದೇವರೆ, ನಿಜವಾಗಿಯೂ ಆಶೆಯಿಲ್ಲವೆ?

ಇಲ್ಲಿಂದ ಓಡಿಹೋಗಲೆ? ಹೌದು, ಏನೇ ಆಗಲಿ, ಓಡಿ ಹೋಗಬೇಕು! ಬಾಗಿಲು, ಕಿಡಿಕಿ, ಮಾಳಿಗೆ ಎಲ್ಲವನ್ನೂ ಪಾರಾಗಿ ಹೇಗೇ ಆಗಲಿ ಓಡಿಹೋಗ ಬೇಕು. ದೇಹದೊಳಗಿನ ಮಾಂಸವನ್ನು ಬಿಟ್ಟು ಹೋಗುವ ಪ್ರಸಂಗಬಂದರೂ ಅಡ್ಡಿಯಿಲ್ಲ, ಅದನ್ನಾದರೂ ಬಿಟ್ಟು ಹೋಗಬೇಕು ಕೇವಲ ಎಲುಬಿನ ಸಹಾಯದಿಂದಲೇ ಓಡಿಹೋಗುವೆ.

ಎಲ್ಲಿಯಾದರೂ ಯಂತ್ರ ಇಲ್ಲವೆ ಶಸ್ತ್ರವು ಸಿಕ್ಕರೆ! ರಾಕ್ಷಸನಂತೆ ಶಕ್ತಿ ಯಿಂದ ಎಲ್ಲರನ್ನೂ ಇರಿಯುವೆ. ಹೇಗೇ ಆಗಲಿ—ಆದರೇನು ಈಗ ನನ್ನ ಕೈ ಯೊಳಗೆ ಒಂದು ಮೊಳೆಯೂ ಇಲ್ಲವಲ್ಲ—ನಾನು ಹತಭಾಗ್ಯ—ಇನ್ನು ಆಶೆ ಇಲ್ಲ!

## ೧೨

ನಾನು ಕಾಂಸಿಮಾರಿ ಜೇಲಿಗೆ ಬಂದೆ. ನನ್ನ ಇಚ್ಛೆಯಿಂದಲ್ಲ, ಸರ ಕಾರದ ಅಪ್ಪಣೆಯ ಮೇರೆಗೆ–ಸರಕಾರೀ ದೂತರ ತೀಕ್ಷ್ಣ ಕಾವಲಿನಲ್ಲಿ ನಡೆದ ಸಂಗತಿಗಳನ್ನಾದರೂ ಕೇಳಿರಿ!

ಏಳೂವರೆಯಾಗಿತ್ತು. "ಮಹನೀಯರೆ, ನನ್ನಕೂಡ ನಡೆಯಿರಿ" ಕಾವಲು ಗಾರನು ಬಂದು ನಮಸ್ಕಾರಮಾಡಿ ಹೇಳಿದ. ನನ್ನ ಕೂಡ ಯಾವ ಥರದ ಒರಟುತನವೂ ಇದ್ದಿಲ್ಲ ನಾನು ಎದ್ದು ಅವನ ಹಿಂದೆ ಹಿಂದೆ ಹೊರಟೆ. ತಲೆಯೇಕೊ ಒಜ್ಜೆಯಾಗುತ್ತಿತ್ತು— ಕಾಲು ಕಸುವಿಲ್ಲದಂತಾಗಿದ್ದುವು. ಅವನ ಕೂಡ ನಡೆಯುವುದಾಗುತ್ತಿದ್ದಿಲ್ಲ. ಆದರೂ ಹೊರಟೆ! ಹೊರಗೆ ಹೋಗಿ ನಿಂತು ಒಮ್ಮೆ ನಿರ್ಜನವಾದ ಕೋಣೆಯತ್ತ ನೋಡಿದೆ. ಇಷ್ಟು ದಿನ ನೆರವಾದ ಬೀಡು! ಅದನ್ನು ನೋಡಿ ನನ್ನ ಮನಸ್ಸಿನೊಳಗೆ ಮಮತೆ ವ್ಯಕ್ತವಾಗುತ್ತಿತ್ತು. ಇಂದು ನಾನು ಈ ಕೋಣೆಯನ್ನು ಹಾಳುಗರೆಯುವಂತೆ ಮಾಡಿ ಹೊರಟೆ. ಆದರೆ ಬಹಳ ಹೊತ್ತಿನವರೆಗಲ್ಲ –ಸಂಜೆಯೊಳಗಾಗಿ ಯಾರಾದರೂ ಅತಿಥಿಗಳು ಇಲ್ಲಿಗೆ ಬಂದೇ ಬರುವರು! ಅಯ್ಯೋ, ವಿಧಾತನ ವಿಧಾನವೆ! ಅಂಗಳದ ಮುಂದೆ ಆಚಾರ್ಯರು ಕುಳಿತುಕೊಂಡಿದ್ದರು. ಅವರಿಗೆ ಕೇವಲ ತಮ್ಮ ಊಟದ ಚಿಂತೆಯೊಂದು ಮಾತ್ರ ಇತ್ತು. ಜೇಲಾಧ್ಯಕ್ಷರು ಬಂದು ನನ್ನ ಕೈಹಿಡಿದು

ಕುಲುಕಿಸಿದರು. ಆಮೇಲೆ ನಾನು ನಾಲ್ವರು ಕಾವಲುಗಾರರ ಕಾವಲಿನೊಳಗೆ ಹೊರಟೆ. ಔಷಧಾಲಯದೊಳಗೆ ಒಬ್ಬನು ನನಗೆ ಕೈಮುಗಿದ. ಆಗ ನಾನು ಅಂಗಳದ ನಟ್ಟನಡುವೆ ನಿಂತಿದ್ದೆ. ಅಲ್ಲಿ ಉಸಿರಾಡಿಸುವುದರಿಂದ ಸ್ವಲ್ಪ ಮೋಜೆನಿಸುತ್ತಿತ್ತು. ಆದರೆ ಇದು ಎಲ್ಲಿಯತನಕ?

ಹೊರಗೆ ನನಗಾಗಿ ಬಂಡಿ ಕಾದುಕೊಂಡು ನಿಂತಿತ್ತು—ನಾನು ಹತ್ತಿಕೊಂಡು ಇಲ್ಲಿಗೆ ಬಂದ ಬಂಡಿಯೇ ಇದು. ಬಂಡಿ ಉದ್ದವಾಗಿತ್ತು—ಒಳಗೆ ಕಬ್ಬಿಣದ ಸಳಿಗಳನ್ನು ಹಾಕಿದ್ದರು. ಆದರಿಂದ ಇದು ಭಾಗವಾಗಿ ಕಾಣಿಸುತ್ತಿತ್ತು. ಕಬ್ಬಿಣದಿಂದ ಜೇಡನ ಬಲೆಯನ್ನು ಮಾಡಿದಂತೆ ಇತ್ತು. ಬೇರೆ-ಬೇರೆ ಎರಡು ಬಾಗಿಲುಗಳಿದ್ದುವು. ಒಂದು ಮುಂದೆ, ಇನ್ನೊಂದು ಬಂಡಿಯ ಹಿಮ್ಮಗ್ಗಲಿಗೆ ಇದ್ದಿತು. ಗಾಡಿಯಲ್ಲಿ ಕತ್ತಲೆಯೇನೋ ಕವಿದಿತ್ತು. ಇಷ್ಟೇ ಅಲ್ಲ, ಧೂಳ, ಹೊಲಸೂ ತುಂಬಿತ್ತು. ಇದಕ್ಕಿಂತ ನನ್ನ ಸೆರೆಮನೆಯ ಕೋಣೆಯೇ ಎಷ್ಟೋ ಪಾಲು ನೆಟ್ಟಗಿತ್ತು. ಈ ಸಮಾಧಿಯೊಳಗೆ ಕಾಲಿಡುವ ಮೊದಲೇ ಒಮ್ಮೆ ಸುತ್ತಲೂ ದೃಷ್ಟಿ ಬೀರಿದೆ. ತೆರೆದ ವಿಶಾಲವಾದ ಆಗಸದತ್ತ ನೋಡಿದಾಗ ಹಿಂದಿನ ನೆನಹುಗಳೆಲ್ಲ ಮನದೊಳಗೆ ಮೂಡಿದುವು. ಇವುಗಳ ಆಧಾರದಿಂದ ಕತ್ತಲೆಯ ಸಮುದ್ರದೊಳಗೆ ಹಾರುವೆ. ಬಾಗಿಲ ಮುಂದೆ ಸಾಲುಗಟ್ಟಿಕೊಂಡು ದರ್ಶಕರು ನಿಂತಿದ್ದರು. ತಪ-ತಪ ಮಳೆ ಬೀಳುತ್ತಿತ್ತು. ಈ ಮಳೆಯನ್ನು ನೋಡಿದಾಗ ಇಂದು ಮಳೆಯೇ ನಿಲ್ಲುವುದಿಲ್ಲವೆಂದು ಗೊತ್ತಾಗುತ್ತಿತ್ತು. ದಾರಿ, ಅಂಗಳಗಳೆಲ್ಲವೂ ಕೆಸರು ಮುಳುಗಿದ್ದುವು! ಸುತ್ತಲೂ ಉದಾಸೀನತೆ ಹಬ್ಬಿತ್ತು.

ಬಂಡಿಯನ್ನೇರಿದೆ. ಬಂಡಿಯ ಮುಂಭಾಗದ ಕೋಣೆಯೊಳಗೆ ಸಶಸ್ತ್ರರಾದ ಕಾವಲುಗಾರರ ಗುಂಪು, ಆಚಾರ್ಯರು-ಬಂಡಿಯ ಮುಂಭಾಗದ ಕೋಣೆಯೊಳಗೆ ನಾನೊಬ್ಬನೇ ಇದ್ದೆ. ಬಂಡಿಯ ಸಂಗಡವೇ ಸಶಸ್ತ್ರರಾದ ಕುದುರೆ ಸವಾರರು, ನಾಲ್ಕೂ ನಿಟ್ಟಿಗೂ ಈ ಪ್ರಕಾರ ಆಯುಧಪಾಣಿಗಳಾದ ದಂಡಾಳುಗಳು—ನಾನು ಬಾದಶಹನಂತೆ ಹೊರಟಿದ್ದೆ. ಬಂಡಿ ಮುಂದೆ ಸಾಗಿತು ನೀರು ಹರಿದುದರಿಂದ ದಾರಿಯು ತುಂಬೆಲ್ಲ ಕಲ್ಲುಗಳೆದ್ದಿದ್ದುವು. ಆದರಿಂದ ದಾರಿಯೊಳಗಿನ ಕಲ್ಲಿಗೆ ಕುದುರೆಯ ನಾಲು ಬಡೆಯುವುದರಿಂದ ಕಡ ಕಡ ಸಪ್ಪಳವಾಗುತ್ತಿತ್ತು.

ನಮ್ಮ ಹಿಂದೆ ಒಂದು ಸದ್ದಾಯಿತು. ಅದು ಸೆರೆಮನೆಯ ಮಹಾದ್ವಾರದ

ಸಪ್ಪಳ. ಆವನ್ನು ಈಗ ಮುಚ್ಚಿದರು. ನಾನು ನಿದ್ರಾವಸ್ಥೆಯಲ್ಲಿದ್ದಂತೆ ಇದ್ದೆ. ನನಗೆ ಆಗ ಯಾವ ಅಂಜಿಕೆಯೂ, ಚಿಂತೆಯೂ ಇದ್ದಿಲ್ಲ ಸಮಾಧಿಯೊಳ ಗಿದ್ದವರಂತೆ ನನ್ನ ಆವಸ್ಥೆಯಿತ್ತು. ಕುದುರೆಯ ಕೊರಳಿಗೆ ಗಂಟೆ ಕಟ್ಟಿದ್ದರು-ಗಾಳಿ ಮತ್ತು ಕುದುರೆಯ ಸಪ್ಪಳನೆಲ್ಲವೂ ಕೂಡಿ ಒಂದು ಬಗೆಯ ವಿಚಿತ್ರ ವಾದ ನಾದವೇ ಆಗಿತ್ತು. ಕಗ್ಗತ್ತಲೆಯನೇರಿ ನಾನೆಲ್ಲಿಗೋ ಹೊರಟಂತಿದ್ದೆ-ಯಾವುದೋ ಒಂದು ನಿರುದ್ದೇಶದ ದೇಶದತ್ತ, ಯಾವುದೋ ಒಂದು ಸ್ವಪ್ನ ಲೋಕದತ್ತ, ಯಾವುದೋ ದೇವಕನ್ಯೆಯಿದ್ದತ್ತ!

ಬಂಡಿಯೊಳಗೆ ಒಂದು ಕಿಂಡಿಯಿತ್ತು. ಅದರೊಳಗಿಂದಲೇ ನಾನು ಹೊರಗೆ ನೋಡುತ್ತಿದ್ದೆ. ಒಂದೆಡೆ ದೊಡ್ಡ-ದೊಡ್ಡ ಅಕ್ಷರಗಳಿಂದ ಬರೆದಿ ದ್ದರು—"ಮುದುಕರ ಔಷಧಾಲಯ"-ಜಗತ್ತಿನೊಳಗೆ ಮನುಷ್ಯರು ಮುದುಕ ರಾಗುವರೆ? ಆಶ್ಚರ್ಯ! ಆದರೆ ನಾನು? ನನ್ನ ಆ ಹರಯ! ಇರಲಿ, ಹೋಗಲಿ ಬಿಡು, ಈ ಮಾತುಗಳಿಂದೇನು ಲಾಭ?—

ಬಂಡಿ ತಿರುಗಿತು. ದೂರದಿಂದಲೇ ನೋಟರ್‌ಡ್ಯಾಮ್‌ದ ಅಂತಸ್ತು ಕಾಣಿಸ ಹತ್ತಿತು ಪ್ಯಾರಿಸದ ಮಂಜನ್ನು ಭೇದಿಸಿ ಗಗನವನ್ನು ಚುಂಬಿಸುವ ಚರ್ಚು ತಲೆಯೆತ್ತಿಕೊಂಡು ನಿಂತಿದೆ ನಾನು ಆಲೋಚಿಸಿದೆ - "ಅಯ್ಯೋ, ಮೇಲೇರಿ ಸುತ್ತಲೂ ಒಮ್ಮೆ ನೋಡಿದ್ದರೆ ನೆಟ್ಟಗಾಗುತ್ತಿದ್ದಿಲ್ಲ!"

ಆಚಾರ್ಯರು ಈಗ ನನ್ನ ಕೂಡ ಮಾತಿಗೆ ಮೊದಲು ಮಾಡಿದರು. ಅವರು ಬಹಳ ಮಾತನಾಡುತ್ತಿದ್ದರು. ಅದಕ್ಕೆ ತಡೆಮಾಡುವವರೂ ಇದ್ದಿಲ್ಲ. ಆಚಾರ್ಯರ ಕಂಠವು ಕುದುರೆ ನಾಲಿನ ಸಪ್ಪಳಕ್ಕಿಂತಲೂ ಹೆಚ್ಚು ಕರ್ಕಶ ವಾಗಿತ್ತು. ಅವರ ಮಾತಿನ ಕಡೆಗೆ ಲಕ್ಷ್ಯಕೊಡಲು ನನಗೆ ಅವಕಾಶವಿದ್ದಿಲ್ಲ. ದಾರಿಯುದ್ದಕ್ಕೂ ಗೊಂದಲವಿತ್ತು.

ಎಲ್ಲ ಸಪ್ಪಳವೂ ಕಿವಿಗೆ ಬೀಳುತ್ತಿತ್ತು. ಆದರೆ ಸ್ವತಂತ್ರವಾಗಿ ಅಲ್ಲ-ಒಂದು ವಿಚಿತ್ರವಾದ ಮಿಶ್ರರಾಗಿಣಿಯ ರೂಪದಂತೆ, ಹಳ್ಳದ ನೀರು ಹರಿಯು ವಾಗ ಆಗುವ ಜುಳು ಜುಳು ಎಂಬ ನಾದದಂತೆ ಕೇಳಿಸುತ್ತಿತ್ತು! ಅಕಸ್ಮಾ ತ್ತಾಗಿ ನನ್ನ ಕಿವಿಗೆ ಒಂದು ಸದ್ದು ಬಿದ್ದಿತು. ಆಚಾರ್ಯರು ಏನೋ ವಟ-ಗುಟ್ಟುತ್ತಿದ್ದರು—"ಏನು ಬಂಡಿಯಿದು, ಬಡ ಬಡ ಬಡಕೊಳ್ಳುತ್ತಿದೆ. ಒಂದು ಮಾತನ್ನೂ ಕೇಳಗೊಡುವುದಿಲ್ಲ."

ಅವರಾಡುವ ಮಾತು ನಿಜವಾಗಿತ್ತು—ಹದಿನಾರಾಣೆ ನಿಜ.

"ಬಹುಶಃ ನಿಮಗೆ ನನ್ನ ಮಾತು ಕೇಳಿಸುತ್ತಿರಲಿಕ್ಕಿಲ್ಲ. ಹೂಂ, ನಾನೇನು ಹೇಳುತ್ತಲಿದ್ದೆ? ಹಾಂ, ಪ್ಯಾರಿಸಿನಲ್ಲಿ ಇಷ್ಟೇಕೆ ಗದ್ದಲ ನಡೆದಿದೆ, ಗೊತ್ತಿದೆಯೆ?" ಆಚಾರ್ಯರು ನನ್ನನ್ನು ಕೇಳಿದರು.

ನಾನು ಬೆಚ್ಚಿ ಬಿದ್ದೆ. ಮತ್ತೇನಾದರೂ ಹೊಸ ಸುದ್ದಿ ಬಂದಿತೆ? ಗಾಬರಿ ನನಗೆ ನನಗಾದ ಕೊಲ್ಲಂಬದ ಶಿಕ್ಷೆಯನ್ನು ಕೇಳಿ ಜನರು ಹಾಗೆ ಗದ್ದಲ ಮಾಡಿರಬಹುದು. "ಹೊತ್ತು ಮುಳುಗುವ ಮುನ್ನ ವರ್ತಮಾನಪತ್ರವನ್ನೋದಲು ವೇಳೆ ಸಿಗುವುದಿಲ್ಲ. ದಿನಾಲು ಸಂಜೆಯ ಮುಂದೆ ನಾನು ವರ್ತಮಾನ ಪತ್ರವನ್ನೋದುತ್ತೇನೆ. ಆದರಿಂದ ಏನು-ಇಳಿತಗಳು ತಿಳಿಯುತ್ತಿವೆ; ಒಂದು ಮಾತೂ ಉಳಿಯುವುದಿಲ್ಲ." ಆಚಾರ್ಯರು ಮತ್ತೆ ಮಾತನಾಡಿದರು.

ಇಲ್ಲಿಯ ತನಕ ದಂಡಾಧಿಪನು ಸುಮ್ಮನೆ ಕುಳಿತುಕೊಂಡಿದ್ದ. ಈಗ ಅವನು ಮಾತನಾಡಿದ—"ಇದೊಂದು ಮೋಜಿನ ಸುದ್ದಿ, ಹೀಗಿದ್ದೂ ಇಲ್ಲಿಯ ತನಕ ನಿಮಗೆ ಗೊತ್ತಾಗಿಲ್ಲವೆ?"

"ಬಹುಶಃ ನನಗೆ ಗೊತ್ತಾಗಿರಬೇಕು." ನಾನೆಂದೆ.

"ನಿಮಗೆ ಗೊತ್ತಿದೆಯೆ? ಇದು ಸೋಜಿಗದ ಸಂಗತಿ. ಗೊತ್ತಿದ್ದರೆ ಹೇಳಬಾರದೆ?" ಅವನು ಹೇಳಿದ.

"ನಿಮಗೆ ಕೇಳುವ ಮನಸ್ಸಿದೆಯೆ?"

"ಹೂಂ, ಅವಶ್ಯವಾಗಿ ಕೇಳುವೆ ರಾಜ್ಯದ ವಿಷಯವಾಗಿ ಮಾತನಾಡಲು ಎಲ್ಲರಿಗೂ ಅಧಿಕಾರವಿದೆ—ಅವನು ಬೇಕಾದವನಿರಲಿ. ನೀವು ಕೈದಿಯಾಗಿದ್ದರೇನಾಯಿತು? ನಾನೂ ರಾಷ್ಟ್ರೀಯ ಸೈನ್ಯದಲ್ಲಿದ್ದೆ. ಚಿಕ್ಕಂದಿನ ಲಾಗಾಯತು ನಾನು ಅದಕ್ಕೆ ಕ್ಯಾಪ್ಟನ್ನನಾಗಿದ್ದೆ. ಆ ದಿನಗಳೆಷ್ಟು ಮಹತ್ವದ ವಿದ್ದುವಲ್ಲ!" ಅವನು ಹೇಳಿದ.

"ಮಹನೀಯರೆ ಹಾಗಲ್ಲ, ನಾನು ತಿಳಿದುಕೊಂಡುದು ಬೇರೆ." ನಾನು ಕೈಹೊಡೆದು ಹೇಳಿದೆ.

"ಹಾಗಾದರೆ ಮತ್ತಾವ ಮಾತದು? ನೀವೇನು ಹೇಳುತ್ತೀರಿ? ನಿಮಗೆ ಹೇಗೆ ಗೊತ್ತಾಯಿತು? ಯಾರು ಹೇಳಿದರು? ಹೇಳಬಾರದೆ ವಿಷಯವೇನು? ನಾನೂ ಸ್ವಲ್ಪ ಕೇಳುವೆ." ಅವನು ಕೇಳಿದ.

"ನೀವೇನು ಯೋಚನೆ ಮಾಡಿಕೊಂಡಿದ್ದಿರಿ?" ಆಚಾರ್ಯರು ಕೇಳಿದರು.

"ಸಂಜೆಗೆ ಆಲೋಚನೆ ಮಾಡಲು ನನಗೆ ವೇಳೆಯೇ ಸಿಗುವುದಿಲ್ಲವೆಂದು ಆಲೋಚಿಸಿದ್ದೆ." ನಾನು ಹೇಳಿದೆ.

"ಚಚ್-ಚಚ್! ದುಃಖದ ಸಂಗತಿಯಿದು. ನೀವು ಬಹಳ ಚಿಂತೆ ಮಾಡುತ್ತಿರುವಿರಿ ಮನಸ್ಸಿಗೆ ಧೈರ್ಯ ಕೊಡಿರಿ. ಎದೆ ಗಟ್ಟಿಮಾಡಿಕೊಳ್ಳಿರಿ." ಆಚಾರ್ಯರು ಹೇಳಿದರು.

"ನೀವು ಬಹಳ ದುಃಖದಲ್ಲಿದ್ದಂತೆ ತೋರುತ್ತದೆ. ಕಾಸ್ತೀಗಾಂವಿಗೆ ನಾವು ಕರೆದುಕೊಂಡು ಬಂದಾಗ ಹಾದಿಯುದ್ದಕ್ಕೂ ನಗುತ್ತ ಬಂದಿದ್ದಿರಿ." ದಂಡಾಧಿಪನು ಹೇಳಿದ.

ಮತ್ತೆ ಅವನು ತನ್ನ ಅನುಭವದ ಮಾತುಗಳನ್ನು ಹೇಳಹತ್ತಿದ. ಪಾಪಾಮುನನ್ನೂ ಅಲ್ಲಿಗೇ ಕರೆದುಕೊಂಡು ಬಂದಿದ್ದ. ದಾರಿಯು ತುಂಬೆಲ್ಲ ಅವನು ಚುರುಟು ಸೇದುತ್ತ ಬಂದ. ಹವಲೆಯ ಕ್ರಾಂತಿಯ ಹುಡುಗರು ನಗುತ್ತ-ಕೆಲೆಯುತ್ತ ಬಂದಿದ್ದರು; ಇದನ್ನು ಹೇಳುವುದೇ ಕಠಿನ.

"ಕಷ್ಟ-ದುಃಖಗಳನ್ನು ಭೋಗಿಸುವುದು ಮೂರ್ಖತನ; ಇದು ಬುದ್ಧಿಯ ದೋಷ. ಆದರೆ ಮಹನೀಯರೆ, ಏಕೋ ನೀವು ದುಃಖದಲ್ಲಿದ್ದಂತೆ ಕಾಣುತ್ತದೆ. ಇಷ್ಟು ಚಿಕ್ಕ ವಯಸ್ಸು ನಿಮ್ಮದು!" ಆಚಾರ್ಯರು ಹೇಳಿದರು.

ದನಿಯನ್ನು ಸಾಧ್ಯವಿದ್ದಷ್ಟು ತೀಕ್ಷ್ಣಮಾಡಿ ನಾನು ಹೇಳಿದೆ—"ಕಡಮೆ ವಯಸ್ಸೆ! ನೀವೇನು ಹೇಳುತ್ತೀರಿ? ನಿಮಗಿಂತಲೂ ನಾನು ಹಿರಿಯ. ನನ್ನ ವಯಸ್ಸು ಪ್ರತಿಯೊಂದು ತಾಸಿಗೆ ಹತ್ತುವರುಷದಂತೆ ಹೆಚ್ಚುತ್ತದೆ."

"ಏಕೆ ಚೇಷ್ಟೆ ಮಾಡುತ್ತೀರಿ. ನನ್ನ ವಯಸ್ಸು ನಿಮ್ಮ ಮುತ್ತಯ್ಯನಷ್ಟು ಇದೆ." ಆಚಾರ್ಯರು ನಕ್ಕು ಎಂದರು.

"ಇಲ್ಲ, ನೀವು ಚೇಷ್ಟೆಮಾಡುತ್ತೀರಿ. ನಾನಾಡುತ್ತಿರುವುದು ಯೋಗ್ಯವಿದೆ." ನಾನು ಗಂಭೀರ ಮುಖಮುದ್ರೆಯಿಂದ ಹೇಳಿದೆ.

ಆಚಾರ್ಯರು ನಸ್ಯದ ಡಬ್ಬಿಯನ್ನು ಹೊರಗೆ ತೆಗೆದರು. ಅದರ ಬಾಯಿ ತೆರೆ-ತೆರೆಯುತ್ತ ನನ್ನ ಕಡೆಗೆ ನೋಡಿ ಹೇಳಿದರು—"ಸಹೋದರ, ಸಿಟ್ಟಾಗಬೇಡಿರಿ, ಚಟ."

"ಇಲ್ಲ-ಇಲ್ಲ, ಸಿಟ್ಟಾಗುವ ಪ್ರಸಂಗವೇ ಇಲ್ಲ," ನಾನು ಉತ್ತರಕೊಟ್ಟೆ.

ಇದೇ ಹೊತ್ತಿಗೆ ಒಂದು ಪಡಕಿ ಬಂದಿತು, ಗಲ್ಲಿಸಿತು. ನಸ್ಯದ ಡಬ್ಬಿ ನುಸುಳಿ ಕೆಳಗೆ ಬಿದ್ದಿತು—ಪುಡಿಯೆಲ್ಲ ಬಕ್ಕಬೋರಲಾಯಿತು ಗಾಬರಿಯಾಗಿ ಆಚಾರ್ಯರು ಡಬ್ಬಿಯನ್ನು ತೆಗೆದುಕೊಳ್ಳುತ್ತ ಮಾತನಾಡಿದರು—"ರಾಮ ರಾಮ! ಎಲ್ಲ ಪುಡಿ ಹಾಳಾಯಿತು, ಇನ್ನೇನು ಮಾಡಲಿ?"

"ಮುಂದೇನು ಮಾಡುವಿರಿ, ಅಂಥ ಆಪತ್ತಾದರೂ ಏನಿದೆ? ಸುಖ-ಸಂತೋಷಗಳೆಲ್ಲವೂ ತುಚ್ಛವಲ್ಲವೆ! ನನ್ನನ್ನು ನೋಡಿದರೆ ಸಾಕು, ನಿಮ್ಮ ಮನಸ್ಸು ತಣ್ಣಗಾಗುವುದು." ನಾನು ಹೇಳಿದೆ.

"ನಿಮ್ಮ ಚೇಷ್ಟೆ ಇರಲಿ ಇಷ್ಟು ಗೀಳು ಮಾಡುವವರು ಯಾರೂ ನನಗೆ ಸಿಕ್ಕಿದ್ದಿಲ್ಲ ನೀವು ಬಂದಿರಿ!—ನಮಗಿರುವ ದುಃಖವಾದರೂ ಏನು? ನಾನಂತೂ ಮುದುಕ—ನಸ್ಯವಿಲ್ಲದೆ ಇಷ್ಟು ದಾರಿ ದಾಟುವುದು ಹೇಗೆ—ಅಯ್ಯೋ-ಅಯ್ಯೋ!" ಆಚಾರ್ಯರು ಗದ್ದರಿಸಿದರು.

ಆಚಾರ್ಯರ ಮಾತುಗಳನ್ನು ಕೇಳಿದಿರಾ, ನನಗಿಂತಲೂ ಅವರು ಹೆಚ್ಚು ದುಃಖದಲ್ಲಿದ್ದಾರೆ. ಇದಕ್ಕೆ ಕಾರಣವೇನೆಂದರೆ ಅವರ ನಸ್ಯದ ಡಬ್ಬಿ. ಈ ಪುರೋಹಿತರೆಷ್ಟು ಸ್ವಾರ್ಥಾಂಧರಾಗಿದ್ದಾರಲ್ಲ!

ನಸ್ಯದ ಚಿಂತೆಯಿಂದ ಆಚಾರ್ಯ ಮಹನೀಯರು ಸುಮ್ಮನೆ ಚಿಂತೆ ಮಾಡುತ್ತ ಕುಳಿತರು. ಅವರ ವಾದವಿವಾದವು ನಿಂತಿತು. ಬಂಡಿಯ ತುಂಬ ಮತ್ತೆ ಮೌನವು ಹಬ್ಬಿತು. ಗರ-ಗರ ಗರ-ಗರ ಸಪ್ಪಳ ಮಾಡುತ್ತ ಬಂಡಿ ಅದೇ ಗತಿಯಿಂದ ಸಾಗಿತ್ತು.

ಕೊನೆಗೆ ಬಂಡಿ ಪಟ್ಟಣದೊಳಗೆ ಜಕಾತಿಕಟ್ಟೆಯ ಹತ್ತಿರ ಬಂದು ನಿಂತಿತು. ಅಲ್ಲಿಂದ ಸೇವಕರು ಬಂದು ಬಂಡಿಯನ್ನು ಪರೀಕ್ಷೆ ಮಾಡಿ ಹೋದರು. ನಾವೂ ಆಡು-ಕುರಿಗಳಾಗಿದ್ದರೆ ಇಲ್ಲಿ ದಕ್ಷಿಣೆ ಕೊಡಬೇಕಾಗುತ್ತಿತ್ತು. ನಾವು ಮನುಷ್ಯರೆಂದು ಹೇಳಿಕೊಳ್ಳಲು ವಿಷಾದನೆನಿಸುತ್ತದೆ ಸುಂಕ ಕೊಡದೆಯೇ ದಾಟಿದೆವು.

ಆಮೇಲೆ ಬಂಡಿ ಚಿಕ್ಕ ದೊಡ್ಡ, ಅಂಕು ಡೊಂಕಾದ ದಾರಿಗಳನ್ನು ದಾಟುತ್ತ ತಿರುಗುತ್ತ ಒಂದು ದೊಡ್ಡ ರಸ್ತೆಗೆ ಬಂದಿತು ಆ ದಾರಿ ನೆಟ್ಟಗೆ ಕಾಂಸಿಯಾರಜಾರಿ ಜೇಲಿಗೆ ಹೋಗುತ್ತಿತ್ತು. ದಾರಿಗಳ ಮೇಲೆ ಸುಮ್ಮನೇ

ಜನರು ನಿಂತು ಬಂಡಿಯನ್ನು ನೋಡುತ್ತಿದ್ದರು. ವರ್ತಮಾನಪತ್ರಗಳನ್ನು ಮಾರುವವರು ಅತ್ತಿಂದಿತ್ತ, ಇತ್ತಿಂದತ್ತ ತಿರುಗಾಡುತ್ತಿದ್ದರು.

ಎಂಟು ಹೊಡೆದಿತ್ತು. ನಾವು ಕಾಂಸಿಯಾರ ಜಾರಿಯನ್ನು ತಲ್ಪಿದೆವು. ಎದುರಿಗೆಯೇ ಒಂದು ದೊಡ್ಡ ಸೆರೆಮನೆ. ಅದರ ಕಬ್ಬಿಣದ ಹೆಬ್ಬಾಗಿಲನ್ನು ನೋಡಿ ನನ್ನ ಕೈಕಾಲು ತಣ್ಣಗಾದುವು. ಬಂಡಿ ಅಲ್ಲಿಗೆ ಬಂದು ನಿಂತಿತು. ಆಗ ನನ್ನ ಹೃದಯಕ್ರಿಯೆಯೂ ನಿಂತಂತಾಯಿತು. ಹಾಗೂ ಹೀಗೂ ಸಾಹಸ ಮಾಡಿ ನಾನು ಕೋಣೆಯೊಳಗಿಂದ ಕೆಳಗೆ ಜಿಗಿದೆ. ಇಬ್ಬರು ಕಾವಲುಗಾರರು ಬಂದು ನನ್ನ ಎರಡೂ ರಟ್ಟೆಗಳನ್ನು ಹಿಡಿದರು. ಎರಡು ಬದಿಗೆ ಸಾಲಾಗಿ ಸೈನ್ಯವು ನಿಂತಿತ್ತು. ಅದರ ನಡುವೆ ನಾನು ಹೊರಟೆ. ಹೊರಗೆ ನಮ್ಮನ್ನು ನೋಡಲು ಬಹಳ ಜನರು ನೆರೆದಿದ್ದರು.

## ೧೩

ಆ ಸೈನ್ಯದ ಸಾಲಿನ ನಡುವೆಯೇ ನಾನು ಹೊರಟೆ. ಆಗ ನನಗೆ ಸ್ವಲ್ಪ ಸುಖವೆನಿಸಹತ್ತಿತು ನಾನು ಸ್ವತಂತ್ರನಾಗಿದ್ದೆ, ನಾನೊಬ್ಬ ಸೆರೆಯಾಳು ಎಂಬ ಕಲ್ಪನೆಯೇ ನನಗಿದ್ದಿಲ್ಲ ಆಮೇಲೆ ಪಾವಟಿಗೆಗಳನ್ನು ದಾಟಿ ಕತ್ತಲೆ ಕೋಣೆಯತ್ತ ಸಾಗಿದೆ. ಆಗ ಮತ್ತೆ ಚಿಂತೆ, ವೈರಾಗ್ಯಗಳು ಬಂದು ನನ್ನನ್ನು ಸುತ್ತುವರಿದುವು.

ಕಾವಲುಗಾರರು ನನ್ನ ಜೊತೆಗೇ ಬರುತ್ತಿದ್ದರು. ಇನ್ನೆರಡು ತಾಸು ಬಿಟ್ಟು ಬರುವುದಾಗಿ ಹೇಳಿ ಆಚಾರ್ಯರು ಎಲ್ಲಿಗೋ ಹೋದರು. ಅವರಿಗೆ ಇನ್ನೂ ಏನೇನು ಕೆಲಸಗಳಿದ್ದುವೋ ಏನೊ?

ಈಗ ನಾವು ಜೇಲರರಿದ್ದ ಕೋಣೆಗೆ ಬಂದೆವು. ಕಾವಲುಗಾರನು ನನ್ನನ್ನು ಅವರಿಗೆ ಒಪ್ಪಿಸಿದ. ಆಗ ನನಗೆ ನಗೆ ಬಂದಿತು –ಎಂಥ ಪ್ರಿಯ ಜನರ ಕೈಗೆ ನನ್ನನ್ನು ಒಪ್ಪಿಸಿದನಲ್ಲ!

ಜೇಲರ ಮಹನೀಯರು ಆಗ ಯಾವುದೋ ವಿಚಾರದಲ್ಲಿ ತೊಡಗಿದ್ದರು. ಕಾವಲುಗಾರನಿಗೆ ಅವರು ಹೇಳಿದರು—"ಸ್ವಲ್ಪ ತಾಳು, ನಾನು ಈಗ ವಿಚಾರ ಮಾಡುತ್ತೇನೆ."

ಅವರಾಡಿದುದೇ ಯೋಗ್ಯ—ಜಮಾ-ಖರ್ಚಿನ ಲೆಕ್ಕವನ್ನು ಸರಿಪಡಿಸದೆ ಒಬ್ಬ ಮನುಷ್ಯನನ್ನು ಹೇಗೆ ಸೇರಿಸುವರು? ಆಗ ಅವರು ಮತ್ತೆ ಯಾವನೋ ಒಬ್ಬ ದುರ್ದೈವಿ ಕೈದಿಯ ಹಣೆಬರೆಹವನ್ನು ಬರೆಯತೊಡಗಿದ್ದರು. "ಒಳ್ಳೇದು, ಅಲ್ಲಿಯ ವರೆಗೆ ನಾನೂ ನನ್ನ ಕಾಗದ-ಪತ್ರಗಳನ್ನು ನೋಡಿಕೊಳ್ಳುವೆ" ಕಾವಲುಗಾರನೆಂದ.

ಕಾವಲುಗಾರನು ಕಾಗದ-ಪತ್ರಗಳ ಪುಡಿಕೆಯೊಂದನ್ನು ಹೊರಗೆ ತೆಗೆದು ನೋಡಹತ್ತಿದ. ನಾನು ಒಂದು ಮೂಲೆಯಲ್ಲಿ ನಿಂತುಕೊಂಡೆ. ಕಬ್ಬಿಣದ ದಪ್ಪ-ದಪ್ಪವಾಗಿದ್ದ ಸಳಿಗಳೊಳಗಿಂದ ಮುಗಿಲು ಕಾಣಿಸುತ್ತಿತ್ತು—ಬಿಸಿಲು ಬಲಿತಿತ್ತು. ಆಗ ಮುಗಿಲಿಗೆ ಯಾರೋ ಬಣ್ಣ ಬಳಿದಂತೆ ತೋರುತ್ತಿತ್ತು! ಉಜ್ವಲವಾದ ನೀಲಿ ಬಣ್ಣದ ಆಗಸ! ಆಯ್ಯೋ! ಎವೆಯಿಕ್ಕದೆ ನಾನು ಮೇಲೆ ನೋಡುತ್ತಿದ್ದೆ. ನನ್ನ ತಲೆಯೊಳಗೆ ಬಗೆ-ಬಗೆಯ ವಿಚಾರಗಳು ಸುಳಿಯು ತ್ತಿದ್ದುವು. ನಾನು ಇಲ್ಲಿ ನಿಂತಿದ್ದೇನೆ, ಆದರೆ ನನ್ನ ತಾಯಿ, ಹೆಂಡತಿ, ಮಗಳು? ಅವರಾದರೂ ಇದೇ ಆಗಸದಡಿಯಲ್ಲಿರಬಹುದು. ಇನ್ನು ಪುನಃ ನಾನು ಅವ ರನ್ನು ಕಾಣುವೆನೊ ಅಥವಾ ಇಲ್ಲೊ, ತಿಳಿಯದಾಗಿದೆ

ಹತ್ತಿರವೇ ಒಂದು ಸಣ್ಣ ಕೋಣೆಯಿತ್ತು. ಕಾವಲುಗಾರನು ನನ್ನನ್ನಲ್ಲಿಗೆ ಕರೆದೊಯ್ದ. ಕೋಣೆಯ ತುಂಬೆಲ್ಲ ಕತ್ತಲೆ ಮುಸುಕಿತ್ತು! ಅದಕ್ಕೆ ಎರಡು ಕಿಡಿಕಿಗಳಿದ್ದುವು ಅವಕ್ಕೆ ಕಬ್ಬಿಣದ ಜಾಳಿಗೆಯನ್ನು ಹಾಕಿದ್ದರು. ನಾನು ಹೋಗಿ ಒಂದು ಕಿಡಿಕಿಯ ಹತ್ತಿರ ಕುಳಿತುಕೊಂಡೆ. ಅಲ್ಲಿ ಎಷ್ಟು ಹೊತ್ತು ಕುಳಿತಿದ್ದೆನೋ ಏನೊ, ಸರಿಯಾಗಿ ನೆನಪಿಲ್ಲ ಒಮ್ಮೆಲೇ ನಾನು ಉಲ್ಲಾಸ ದಿಂದ ತಿರುಗಿ ನೋಡಿದೆ ಇದೇನು, ಮತ್ತೊಬ್ಬನು ಬಂದಿದ್ದಾನೆ. ಅವನ ವಯಸ್ಸು ಅಯ್ವತ್ತಕ್ಕಿಂತ ಹೆಚ್ಚೇ ಇರಬೇಕು—ನಡ ಬಾಗುವುದರಲ್ಲಿತ್ತು. ತಲೆ ಹಂಜಿಬುಟ್ಟಿಯಾಗಿತ್ತು. ಆದರೂ ಅವನು ಗಟ್ಟಿಮುಟ್ಟಾಗಿ ಕಾಣಿಸು ತ್ತಿದ್ದ; ಕಣ್ಣುಗಳ ಮೇಲೆ ಮೋರೆಯ ಮೇಲೆ ಒಂದು ವಿಕಟವಾದ ರೂಪವು ಎದ್ದು ಕಾಣುತ್ತಿತ್ತು; ನೋಡಿದರೆ ಅವನು ಹೆದರಿಕೆ ಬರುವಂತಿದ್ದ.

ನಾನು ಅವನನ್ನು ಈ ಮೊದಲು ನೋಡಿದ್ದಿಲ್ಲ; ಆದರೆ ಅವನೂ ಇದೇ ಕೋಣೆಯೊಳಗೆ ಕುಳಿತುಕೊಂಡಿದ್ದ.

ಆಶ್ಚರ್ಯ, ಮೃತ್ಯುವೆಂದರೆ ಇದೇ ಏನು?—ಇಂದು ಈ ವೇಷವನ್ನು ತಾಳಿ ನನ್ನನ್ನು ಆಹುತಿಗೆ ಅಣಿಮಾಡಲು ಬಂದಿರುವುದೆ?

"ಏನರಿ, ಏನು ಚಿಂತೆ ಮಾಡುತ್ತಿದ್ದೀರಿ? ನಾನು ಇಲ್ಲಿ ಕುಳಿತು ಎಷ್ಟೋ ಹೊತ್ತಾಯಿತು, ನೀವು ನನ್ನ ಕಡೆಗೆ ಕಣ್ಣೆತ್ತಿ ನೋಡಲೇ ಇಲ್ಲವಲ್ಲ! ನಿಮ್ಮ ಹೆಸರೇನು?" ಅವನು ಮಾತನಾಡಿಸಿದ. ನಾನು ಅವನ ಮಾತಿಗೆ ಉತ್ತರ ಕೊಡಲಿಲ್ಲ. ಕೇವಲ ಕಣ್ಣು ಕಿಸಿದು ಅವನನ್ನು ನೋಡತೊಡಗಿದೆ.

"ನನ್ನನ್ನೇನು ನೋಡುತ್ತೀರಿ? ನಾನೊಂದು 'ಲಗೇಜ' ಎಂದು ತಿಳಿಯಿರಿ—ಸ್ಟೇಶನ್ನಿನ ಮುದ್ರೆಯನ್ನು ನನಗೆ ಒತ್ತಿದ್ದಾರೆ, ಉಗಿಬಂಡಿ ಬರುವುದೊಂದೇ ತಡ." ಅವನೆಂದ.

ಅವನು ಸ್ವಲ್ಪ ರಸಿಕನಿರಬೇಕೆಂದು ಗೊತ್ತಾಯಿತು. "ಹೀಗೆಂದರೇನು?" ನಾನು ಕೇಳಿದೆ. ಅವನು ಗಟ್ಟಿಯಾಗಿ ಕೊಳ್-ಕೊಳ್ ನಕ್ಕ, ನಾನು ಹೆದರಿದೆ. ಅವನು ಮುಂದೆ ಮಾತು ಬೆಳೆಸಿದ-"ಇಷ್ಟೂ ತಿಳಿಯಲಿಲ್ಲವೆ? ಇದೊಂದು ಸರ್ವಸಾಧಾರಣ ಸಂಗತಿ! ಆರು ವಾರಗಳು ಮುಗಿಯುತ್ತಲೇ ನನ್ನನ್ನು ಪರ-ಲೋಕಕ್ಕೆ ಕಳಿಸುವರು. ಆದುದರಿಂದಲೇ ನನಗೆ ಮುದ್ರೆ ಹಾಕಿದ್ದಾರೆ, ಎಂದರೆ—ನೀವು ಆರು ತಾಸಿಗೆ ಪ್ರಯಾಣ ಬೆಳೆಸುವಿರಿ; ನಾನು ಆರು ತಿಂಗಳಾದ ಮೇಲೆ ಬರುವೆ. ಈಗಲಾದರೂ ತಿಳಿಯಿತೆ? ನೋಡಿರಿ, ನಾನು ನಿಮ್ಮ ಮಿತ್ರ ಹೇಗಿದ್ದೇನೆ."

ನನ್ನ ಸ್ನಾಯುಗಳು ಸೇದಿಕೊಳ್ಳಹತ್ತಿದುವು.

ಅವನು ತನ್ನ ಮಾತನ್ನು ಹಾಗೆಯೇ ಬೆಳೆಸಿದ—"ಮನಸ್ಸಿನೊಳಗೆ ಮಂಡಿಗೆ ತಿಂದರೆ ಗೋದಿ ಲೆಕ್ಕ ಕೊಡುವವರಾರು ಸಹೋದರ! ಆದ ಕಾರಣ ಕೇಳಿರಿ; ನಿಮಗೆ ನಾನು ನನ್ನ ಕಥೆಯನ್ನು ಹೇಳುವೆ, ಇದರಿಂದ ಹೊತ್ತೂ ಹೋಗುವುದು—ಮತ್ತೆ ಆ ಕಥೆಯಾದರೂ ಮೋಜಿನದಿದೆ."

ತನ್ನ ಕಥೆಯನ್ನವನು ಆರಂಭಿಸಿದ—"ಕಳವು-ಸುಲಿಗೆಗಳು ನಮ್ಮ ಮನೆತನದ ಕಸಬು ಆಗಿದ್ದುವು; ಆದರೆ ಕೊಲ್ಗಂಬದ ಶಿಕ್ಷೆ ಆದುದು ನನಗೊಬ್ಬನಿಗೇ. ಇದೆಲ್ಲ ಸಹೋದರರೇ ನಸೀಬದಾಟ! ಯಾರೇನು ಮಾಡುವುದು!"

"ನಾನು ಆರು ವರುಷದವನಿದ್ದಾಗ ನನ್ನ ತಾಯಿ-ತಂದೆಗಳು ಪರಲೋಕಕ್ಕೆ ಪ್ರಯಾಣಮಾಡಲು ಟಿಕೇಟು ತೆಗೆಯಿಸಿದರು. ಹುಟ್ಟಿದವರು ಒಂದಿಲ್ಲೊಂದು ದಿನ ಅಲ್ಲಿಗೆ ಹೋಗಲೇಬೇಕಲ್ಲ, ಯಾರಿಗೂ ಬಿಟ್ಟಿದ್ದಲ್ಲ. ಕಿಸೆಕತ್ತರಿಸಿ,

ಮೂರ್ಖತನವನ್ನು ಮತ್ತಿಷ್ಟು ಮೂರ್ಗ್ಬರನ್ನಾಗಿ ಮಾಡಿ ನನ್ನ ಹೊಟ್ಟೆ ಹೊರೆದು ಕೊಳ್ಳುತ್ತಿದ್ದೆ. ಏನೇ ಆಗಲಿ, ಇದು ನಮ್ಮ ಮನೆತನದ ಕಸಬು ಅಲ್ಲವೆ!"

"ಚಳಿಗಾಲದಲ್ಲಿ ಇಲ್ಲಿ ದಾರಿಗಳು ಬರ್ಫದಿಂದ ತುಂಬಿರುತ್ತವೆ. ಆಗ ನಾನು ಬರಿಗಾಲಿನಿಂದ ಓಡಾಡುತ್ತಿದ್ದೆ. ಸ್ಟೇಶನ್ನಿನೊಳಗೆ, ಹೋಟಲಿನೊಳಗೆ, ಟ್ರೇನಿನೊಳಗೆ ಎಲ್ಲೆಡೆಯಲ್ಲಿಯೂ ನಾನು ಕಿಸೆ ಕತ್ತರಿಸುತ್ತ ತಿರುಗಾಡುತ್ತಿದ್ದೆ."

"ಹದಿನೈದು ವರುಷದವನಿದ್ದೆ, ಆಗ ಒಮ್ಮೆ ನನ್ನನ್ನು ಹಿಡಿದರು ಬೆನ್ನಿಗೆ ಕೋರ್ಡಾದಿಂದ ಎಷ್ಟೋ ಏಟು ಬಿದ್ದುವು. ಬೆನ್ನು ಹುಳಿಯಿತು, ಮೂರು ನಾಲ್ಕು ದಿನದ ಶಿಕ್ಷೆಯೂ ಆಯಿತು. ಮತ್ತೆ ನಾನು ಜೇಲಿನಿಂದ ಹೊರಗೆ ಬಂದೆ. ಆಗ ನನ್ನ ಮರ್ಯಾದೆ ಹೆಚ್ಚಿತು, ನಾನು ಒಂದು ಗುಂಪಿನ ನಾಯಕ ನಾದೆ."

"ಆಮೇಲೆ ದೊಡ್ಡ-ದೊಡ್ಡ ಕೆಲಸಗಳಿಗೆ ಕೈಹಾಕಹತ್ತಿದೆ. ಒಂದು ಸಾರೆ ಪಟ್ಟಣದಲ್ಲಿಯ ಹೆಸರಾದ ಒಂದು ಆಭರಣದ ಅಂಗಡಿಗೆ ನನ್ನ ಗುಂಪನ್ನು ಕಟ್ಟಿಕೊಂಡು ಹೋಗಿ ಮುತ್ತಿಗೆ ಹಾಕಿದೆ— ಇಡಿಯ ಅಂಗಡಿಯನ್ನೇ ಸುಲಿಗೆ ಮಾಡಿದೆವು. ನಾನು ಇಬ್ಬರು ಕಾವಲುಗಾರರ ಜೀವ ತೆಗೆದುಕೊಂಡೆ. ನನ್ನ ಧೈರ್ಯವೂ ಮುಂದೆ ಬೆಳೆಯತೊಡಗಿತು ಆದರೆ ಜಗತ್ತಿನೊಳಗೆ ವಿಭೀಷಣ ನಂಥ ಜನರ ಕೊರತೆಯೇನೂ ಇಲ್ಲ, ಒಬ್ಬ ವಿಶ್ವಾಸಘಾತಿ ನಮ್ಮನ್ನು ಹಿಡಿ ಸಿದ. ನನಗೆ ಏಳು ವರುಷ ಶಿಕ್ಷೆಯಾಯಿತು, ಮತ್ತೆ ಹೊರಗೆ ಬಂದೆ ಹೆಚ್ಚು ಸಾಕ್ಷಿ-ಪುರಾವೆಗಳು ಸಿಗಲಿಲ್ಲ, ಆದರಿಂದ ಬೇಗನೇ ಹೊರಗೆ ಬಂದೆ. ಇಲ್ಲ ವಾದರೆ ಹೊರಗೆ ಕಾಲಿಡುವ ಪ್ರಸಂಗವೇ ಬರುತ್ತಿದ್ದಿಲ್ಲ! ನಾನು ಆ ವಿಶ್ವಾಸ ಘಾತಿಯ ಮೇಲೆ ಬೆಂಕಿಯಾದೆ."

"ನನ್ನ ಖಟ್ಲೆಯ ತೀರ್ಪು ನಡೆದಾಗ ಅವನು ಕೋರ್ಟಿನ ಹೊರಗಿದ್ದ. ಅವನನ್ನು ತೀಕ್ಷ್ಣದೃಷ್ಟಿಯಿಂದ ನೋಡುತ್ತ ಹೋದೆ ಆ ದೃಷ್ಟಿ ಉರಿ ಕಾರುತ್ತಿತ್ತು. ಆ ಬೆಂಕಿ ಅವನ ಪ್ರತಿಯೊಂದು ಎಲುಬಿನಲ್ಲಿ ಸೇರಿತು. ಹೆದ ರಿಕೆಯಿಂದ ಅವನ ಮೋರೆ ಬತ್ತಿತು. ಇರಲಿ, ಏಳು ವರುಷಗಳ ನಂತರ ನಾನು ಮತ್ತೆ ಹೊರಗೆ ಬಂದೆ."

"ಅತ್ತ-ಇತ್ತ ತಿರುಗಾಡಿ ಎರಡು ದಿನ ಕಳೆದೆ. ಒಂದು ಅನ್ನದ ಅಗಳೂ ಹೊಟ್ಟೆಯೊಳಗೆ ಸೇರಲಿಲ್ಲ. ಆದರೆ ಸೇಡು ತೀರಿಸಿಕೊಳ್ಳಲು ಒಂದು ಜ್ವಾಲೆ

ಹೃದಯದೊಳಗೆ ಪ್ರಜ್ವಲಿಸುತ್ತಿತ್ತು. ಒಂದು ದಿನ ರಾತ್ರಿ ಕಿಡಿಕಿ ಮುರಿದು ಹೋಟಲಿನೊಳಗೆ ನುಗ್ಗಿದೆ. ಅಲ್ಲಿ ಹೊಟ್ಟೆತುಂಬ ಹಣಿದೆ, ಸುಮ್ಮನೆ—ಅದು ಯಾರಿಗೂ ಗೊತ್ತಾಗಲಿಲ್ಲ!"

"ಏಳೆಂಟು ದಿನಗಳಾದ ಮೇಲೆ ನಮ್ಮ ಗುಂಪಿನ ಮೂರು ನಾಲ್ಕು ಮಂದಿ ನನಗೆ ಕೂಡಿದರು. ಅವರು ಈಗ ಕಳವು ಮಾಡುವುದನ್ನು ಬಿಟ್ಟಿದ್ದರು. ಅವರಲ್ಲಿ ಒಬ್ಬನು ನೌಕರಿ ಮಾಡುತ್ತಿದ್ದರೆ, ಇನ್ನೊಬ್ಬನು ಒಕ್ಕಲತನ ಮಾಡುತ್ತಿದ್ದ. ಎಲ್ಲರೂ ಹೇಡಿಗಳು!"

"ಮತ್ತೊಂದು ಹೊಸ ಗುಂಪನ್ನು ಕಟ್ಟಿಕೊಂಡೆ, ಅದಕ್ಕೆ ತರುಣರನ್ನೂ ಧಿಟ್ಟಜನರನ್ನೂ ನೋಡಿ ಆರಿಸಿ ಸೇರಿಸಿಕೊಂಡೆ."

"ಆಮೇಲೆ ಒಳ್ಳೇ ವಿಜೃಂಭಣೆಯಿಂದ ಕೆಲಸ ನಡೆಯಿತು. ದಿನಾಲು ಸುಲಿಗೆ! ದಿನಾಲು ಗೆಲುವು ಕಟ್ಟಿಟ್ಟದ್ದೆ! ನಿತ್ಯವೂ ಹೊಸ-ಹೊಸ ಮೋಜುಗಳು! ಆನಂದವು ಅತಿಯಾಗಿ ಆಗುತ್ತಿತ್ತು. ಆದರೆ ಭಾಗ್ಯವು ಬದಲಾಯಿತು. ನಮ್ಮ ಗುಂಪಿನ ಜನರು ಒಬ್ಬೊಬ್ಬರಾಗಿ ಸಿಗಹತ್ತಿದರು. ನಮ್ಮ ಟೋಳಿ ಒಡೆಯಿತು, ಕೆಲಸವು ನಿಂತಿತು. ಸಿಟ್ಟಿನಿಂದ ನಾನು ಹುಚ್ಚನಂತಾದೆ."

"ಇಷ್ಟಾದ ಮೇಲೆ, ಆ ಹಳೆಯ ವಿಶ್ವಾಸಘಾತುಕ ಗೆಳೆಯ ಹಾದಿಯಲ್ಲಿ ಕೂಡಿದ. ಅವನು ನನ್ನನ್ನು ನೋಡಿ ನಡುಗಹತ್ತಿದ. ಅವನ ತಲೆಗೂದಲುಗಳನ್ನು ಮುಷ್ಟಿಮಾಡಿ ಹಿಡಿದೆ. 'ಏಕೆ? ಇಂದು?' "

ಅವನು ಅಂಗಲಾಚಿ ಹೇಳಹತ್ತಿದ—"ಸರದಾರರೇ, ನನ್ನನ್ನು ಬಿಡಿರಿ!"

ನಾನು ಹೇಳಿದೆ—"ವಿಶ್ವಾಸಘಾತುಕನನ್ನು ನಾನು ಕ್ಷಮಿಸುವುದಿಲ್ಲ."

ಅವನು ಹೇಳಿದ—"ನಾನು ನಿಮ್ಮ ಆಳಾಗಿ ಬಾಳುವೆ."

"ವಿಶ್ವಾಸಘಾತುಕನಿಗೆ ಕೊಡುವ ಶಿಕ್ಷೆಯೇ ಇದು." ಎನ್ನುತ್ತ ನಾನು ಅವನ ಬೆನ್ನಿಗೆ ಜಾಡಿಸಿ ಒಂದು ಸಾರೆ ಒದ್ದು ಬಿಟ್ಟೆ. ಅವನು ಅಯ್ದು ಮೊಳ ದೂರ ಹೋಗಿ ಬಿದ್ದ. ರಕ್ತಕಾರಹತ್ತಿದ. ನಾನು ಹೇಳಿದೆ—"ಏಳು, ಇನ್ನು ಹೋಗು."

"ಅವನನ್ನು ನಾನು ಹೊತ್ತುಕೊಂಡು ಹೊರಟೆ. ಆಗ—ಅಯ್ಯೋ, ನಾನು ರಾಕ್ಷಸನಂತಾಗಿದ್ದೆ, ನನ್ನ ಟೋಳಿ ಎಷ್ಟು ಸುಂದರವಿದ್ದಿತಲ್ಲ, ಹಳೆಯ ಗೆಳೆಯರ ಗುಂಪು—ಈ ವಿಭೀಷಣನಿಂದಲೇ ಒಡೆದು ಹೋಯಿತು! ದುಷ್ಟ!"

ನಾನು ಬೊಕ್ಕಣದೊಳಗಿಂದ ಚಾಕು ಹೊರಗೆ ತೆಗೆದೆ, ಅವನ ಕಿವಿ

ಗಳನ್ನು ಕೊಯ್ದೆ. ಅವನು ಬವಳಿ ಬಂದು ಭೂಮಿಯ ಮೇಲೆ ಬಿದ್ದ. ನನ್ನ ತಲೆಯೂ ಕಾಯ್ದಿತ್ತು. ನಾನು ಅಲ್ಲಿಂದ ಓಡಿ ಹೋದೆ."

"ಇಷ್ಟಾದ ಮೇಲೆ ಅವನು ಪೋಲಿಸರಿಗೆ ವರದಿ ಕೊಟ್ಟ. ಅವನೂ ಒಂದು ದಿನ ಔಷಧಾಲಯದೊಳಗೆ ತೀರಿಕೊಂಡ, ನಾನೂ ಸೆರೆಸಿಕ್ಕೆ. ನನಗೆ ಕೊಲ್ಗಂಬದ ಶಿಕ್ಷೆಯಾಯಿತು, ಪ್ರಾಯಶ್ಚಿತ್ತವು ಸರಿಯಾಗಿಯೇ ಆಯಿತು; ಇದಕ್ಕೆ ನಿಮ್ಮ ಅಭಿಪ್ರಾಯವೇನು? ಒಂದು ರೀತಿಯಿಂದ ನಾನೇ ಅವನ ಜೀವ ತೆಗೆದುಕೊಂಡೆ. ಇರಲಿ, ಜನರು ಬೇಕಾದುದನ್ನು ಆಡಿಕೊಳ್ಳಲಿ, ಚಿಂತೆಯಿಲ್ಲ. ಕಳವು ಮಾಡಿ-ಮಾಡಿ ಏಕೋ ಮನಸ್ಸೂ ಬೇಸತ್ತಿತ್ತು. ಚಿಕ್ಕ-ಪುಟ್ಟ ಕಳವು ಮಾಡಿದರೆ ತೃಪ್ತಿಯೂ ಆಗುತ್ತಿದ್ದಿಲ್ಲ. ಬೇಕಾದಷ್ಟು ಬುದ್ಧಿ ಖರ್ಚುಮಾಡುತ್ತಿದ್ದೆ, ಅಂಥ ಬುದ್ಧಿವಂತರೂ, ಎದೆಗಾರರೂ ಆದ ಗೆಳೆಯರು ಎಲ್ಲಿ ಸಿಗುತ್ತಾರೆ? ಆದುದರಿಂದಲೇ ಬದುಕಿ ಬಾಳುವ ಇಚ್ಛೆಯೂ ಇಲ್ಲ. ನಾನು ಸಾಯುವ ಮೊದಲೇ ವಿಶ್ವಾಸಘಾತುಕನಿಗೆ ದಂಡ ಕೊಟ್ಟೆ. ಈ ಆನಂದವೇನು ಕಡಮೆಯೆ? ಇನ್ನೂ ಒಂದೆರಡು ಕಳವಿನ ಕತೆಗಳನ್ನು ಹೇಳುತ್ತೇನೆ ಕೇಳಿರಿ. ನಾನು ಎಷ್ಟು ಬುದ್ಧಿವಂತನೆಂಬುದು ಆಗ ನಿಮಗೆ ಗೊತ್ತಾಗುವುದು. ನನ್ನಂಥವನು ಕೊಲ್ಗಂಬಕ್ಕೆ ಆಹುತಿಯಾಗಬೇಕೆ? ವಿಷಾದದ ಸಂಗತಿಯಿದು. ಇರಲಿ, ಇದು ದೇಶದ ದುರ್ಭಾಗ್ಯವಲ್ಲದೆ ಏನು!"

ಅವನ ಮಾತುಗಳನ್ನು ಕೇಳಿ ನನ್ನ ಮೈಕೂದಲುಗಳು ನಿವಿರಿದುವು. ಈ ಪಿಶಾಚಿ, ಈ ರಾಕ್ಷಸನು ಯಾವಾಗ ಹೋಗುವನೋ ಏನೊ ಎನ್ನಿಸಿತು!

"ನೀವು ಬಹಳ ಸಜ್ಜನರೆಂದು ಕಾಣುತ್ತೀರಿ! ರಾಮ-ರಾಮ; ನೀವೂ ಕೊಲ್ಗಂಬಕ್ಕೆ ಬಲಿಯಾಗಲು ಹೋಗುತ್ತಿರುವಿರಿ, ಆದರೆ ಈಗೂ ಏಕೆ ವಿಷಾದ ಪಡುತ್ತಿದ್ದೀರಿ? ಇದರೊಳಗೆಯೇ ಆನಂದವಿದೆ. ನಿಮಗಿದು ತಿಳಿಯದೆ? ಆನಂದದಿಂದ ಇರ್ರಿ, ಸುಖಪಡಿರಿ, ಈ ಮನುಷ್ಯನು ಕೊಲ್ಗಂಬಕ್ಕೂ ಅಂಜುವುದಿಲ್ಲ, ಸಾವು ಎಂದರೆ ಈತನಿಗೆ ಸರಸವೆಂದು ಜನರು ಅರಿತುಕೊಳ್ಳಲಿ. ನಿಮ್ಮನ್ನು ನೋಡಿ ಎಲ್ಲರೂ ಮೌನರಾಗುವರು, ಬೆರಳು ಕಚ್ಚುವರು, ನಿಮಗೆ 'ಶೂರ' ಎನ್ನುವರು. ಇಲ್ಲಿ ನನ್ನನ್ನು ನೋಡಬಾರದೆ? ಎಷ್ಟು ಸಂತೋಷದಿಂದ ಇದ್ದೇನೆ! ಕೊನೆಗೆ ದುಃಖಪಟ್ಟರೆ ಆಗುವ ಲಾಭವಾದರೂ ಏನು!" ಅವನೆಂದ.

"ನೀವು ನಿಜವಾಗಿಯೂ ಮಹನೀಯರೇ ಸರಿ!" ನಾನೆಂದೆ. ಅವನು ಮತ್ತೆ ಬಿದ್ದು-ಬಿದ್ದು ನಕ್ಕ. ಆ ಭಯಂಕರವಾದ ನಗೆಯಿಂದ ಕೋಣೆಯೇ ಪ್ರತಿಧ್ವನಿಸಿತು. ಮತ್ತೆ ಮಾತನಾಡಿದ—"ಓಹೊ, ಮಹನೀಯರೆ! ನೀವು ಸಜ್ಜನರು, ಮಹನೀಯರು, ಇದು ನನಗೆ ಗೊತ್ತಿದ್ದಿಲ್ಲ! ಆದರೆ ಮಹನೀಯರಿಗೂ ಕೊಲ್ಗಂಬವೆ— ಇದೊಂದು ಸೋಜಿಗದ ಸಂಗತಿಯೇ ಸರಿ!"

ಆವನ ಮಾತುಗಳಲ್ಲಿ ಪೂರ್ಣ ಹಾಸ್ಯವಿತ್ತು, ನಾನು ಸುಮ್ಮನೆ ಇದ್ದೆ. ಆವನು ಹೇಳಲಾರಂಭಿಸಿದ—"ಇನ್ನು ಆಚಾರ್ಯರು ಬರುವುದೊಂದೇ ತಡ! ಒಳ್ಳೇದು, ನೀವೇನು ಜಮೀನದಾರರು, ಕೊಲ್ಗಂಬಕ್ಕೆ ತುತ್ತಾಗಲು ಹೊರಟಿರುವಿರಿ. ನೀವು ನಿಮ್ಮ ಈ ಸುಂದರವಾದ ಕೋಟನ್ನು ಸುಮ್ಮನೆ ಹಾಳು ಮಾಡುವಿರಾ? ನನಗೆ ಕೊಟ್ಟು ಬಿಡಿರಿ! ಇದರಿಂದ ಚಳಿಗಾಲವನ್ನು ಕಳೆಯುವೆ; ಇಲ್ಲದಿದ್ದರೆ ಇದನ್ನು ಮಾರಿ ಚುರುಟವನ್ನಾದರೂ ತರಿಸಲು ಹಂಚಿಕೆ ಹಾಕುವೆ."

ಕೋಟನ್ನು ತೆಗೆದೆ ಚಳಿ ಬಹಳವಿತ್ತು, ನಡುಗಹತ್ತಿದೆ. ಅವನು ಹೇಳಿದ—"ನೀವು ಧೈವುಳ್ಳವರು ಚಳಿಯನ್ನು ಸಹಿಸಲಾರಿರಿ, ಇರಲಿ ಬಿಡಿರಿ. ನಿಮ್ಮ ಕೋಟು ನಿಮಗೇ ಇರಲಿ."

ಆವನು ಕೋಟನ್ನು ನನ್ನ ಕಡೆಗೇ ಹಿಡಿದ. "ಇಲ್ಲ, ಸಹಿಸಿಕೊಳ್ಳುವೆ. ಕೋಟನ್ನು ತೆಗೆದುಕೊಳ್ಳಿರಿ." ನಾನೆಂದೆ.

ಕಿಡಿಕಿಯ ಹತ್ತಿರ ಅವನು ನಿಂತುಕೊಂಡು ಕೋಟನ್ನು ಸರಿಯಾಗಿ ನೋಡಹತ್ತಿದ—ತುಸು ಹೊತ್ತು ಅದನ್ನು ತಿರು-ತಿರುವಿ ನೋಡುತ್ತಲಿದ್ದ. ಆಮೇಲೆ ಮತ್ತೆ ಹೇಳಿದ—ಇದು ಹೊಸದು. ಇರಲಿ, ಚೆಲೋ ಆಯಿತು; ನಿಮ್ಮ ದಯೆಯಿಂದ ಆರು ವಾರ ಚುರುಟು, ತಂಬಾಕದ ಕೊರತೆಯಾಗುವುದಿಲ್ಲ ಮಹನೀಯರೆ, ನಿಮಗೆ ಧನ್ಯವಾದಗಳು! ಮನಸ್ಸಿಗೆ ಏನೂ ಹಚ್ಚಿಕೊಳ್ಳಬೇಡಿರಿ. ನಾನಂತೂ ಮೊದಲೇ ಬಡವ. ಮಾತನಾಡುವುದಂತೂ ಮೊದಲೇ ಗೊತ್ತಿಲ್ಲ"

ಇದೇ ಹೊತ್ತಿಗೆ ಜೇಲರ ಸಾಹೇಬರು ಒಳಗೆ ಬಂದರು. ಒಬ್ಬ ಕಾವಲುಗಾರನ ಕೈಗೆ ನನ್ನನ್ನು ಕೊಟ್ಟು ಹೊರಟುಹೋದರು.

ನಾವು ಹೊರಗೆ ಬಂದೆವು. ಹೊರಗೆ ಬಂದ ಮೇಲೆ ಅವನು ಹೇಳಿದ— "ಮಹನೀಯರೆ, ನನ್ನನ್ನು ಮರೆಯಬೇಡಿರಿ. ಇದೇ ಕಡೆಯ ಭೆಟ್ಟಿ, ಮತ್ತೆ

ಆರು ವಾರಗಳಾದ ಮೇಲೆ ಕೂಡುವೆವು. ನೀವು ನನ್ನ ಹಾದಿಯನ್ನು ಅಲ್ಲಿ ನೋಡಿರಿ.

ಅವನ ಮಾತುಗಳನ್ನು ಕೇಳಿ ನಾನು 'ಜಂ' ಎಂದಿದ್ದೆ. ಇವನು ಹೇಳುತ್ತಿರುವುದೇನು? ಇವನೇನು ಹುಚ್ಚನೋ ಏನು ದಡ್ಡನೋ?

## ೧೪

ಅವನು ರಸಿಕ, ನನ್ನ ಕೋಟು ತೆಗೆದುಕೊಂಡು ಹೋಗಿಯೇ ಬಿಟ್ಟ.

ಅವನಿಗೆ ನಾನೇನು ದಾನ ಮಾಡಿದೆನೆ?—ಇಲ್ಲ. ದಾನವಾಗಿಯಂತೂ ಕೊಟ್ಟಿಲ್ಲ. ಅವನು ಚೇಷ್ಟೆ ಮಾಡುತ್ತಿರಬಹುದೆಂದು ನಾನು ತಿಳಿದಿದ್ದೆ. ದಾಕ್ಷಿಣ್ಯದಿಂದ ತಿರುಗಿ ಬೇಡಲಿಲ್ಲ.

ಅವನು ಮೊದಲನೆಯ ನಂಬರ ಕಳ್ಳ! ಇಂಥವರನ್ನು ನಾನು ಕಾಲಿನಿಂದ ತುಳಿದು ಒರೆಸುತ್ತಿದ್ದೆ. ಆದರೆ ಇವನು ನನಗೆ 'ಗೆಳೆಯ' ಎಂದು ಸಂಬೋಧಿಸಿ ಹೊರಟು ಹೋದನಲ್ಲ?

ನನ್ನ ಹೃದಯವು ಸಿಟ್ಟಿನಿಂದ ಬೇಗುದಿಗೊಂಡಿತು! ಸಾವು ನನ್ನ ತಲೆಯ ಮೇಲೆ ಸುಳಿಯುತ್ತಿದೆ. ಈಗ ಅದು ನನ್ನನ್ನು ಕನಿಕರವಿಲ್ಲದೆ ಮುರಿಯುವುದು. ಇನ್ನೂ ನನ್ನ ಎಲುವುಗಳಲ್ಲಿ ನಾನು ದೊಡ್ಡ ಮನೆತನದವನೆಂಬ ಅಹಂಕಾರವು ತುಂಬಿ ತುಳುಕುತ್ತಿದೆ! ಅಯ್ಯೋ, ನಾನು ಮೂರ್ಖ! ದಡ್ಡ!

ಕೊಲ್ಗಂಬದ ಹಗ್ಗವು ಬಡವ-ಬಲ್ಲಿದರನ್ನು ಗಣಿಸದು. ನಾನು ಹೋಗುವ ರಾಜ್ಯದೊಳಗೆ ಬಡವ-ಬಲ್ಲಿದರೆಂಬ ಭೇದವಿಲ್ಲ.

ಅವನ ಶಿರವನ್ನು ಅರಿಯುವ ಹಗ್ಗವೇ ನನ್ನ ಶಿರವನ್ನೂ ಅರಿಯುವುದು. ಅದು ಮುಕ್ತಿ ಕೊಡುವುದು! ನನ್ನನ್ನು ಒಯ್ದು ಅಲ್ಲಿಗೆ ಮುಟಿಸುವುದು! ಹಾಂ, ಅವನು ನನ್ನ ಗೆಳೆಯನಲ್ಲವೆ? ಅವನು ನನ್ನ ಪರಮ ಮಿತ್ರ!

## ೧೫

ಈಗ ಮತ್ತೆ ನಾನು ಗಾಳಿ-ಬೆಳಕಿಲ್ಲದ—ಒಂದು ಕೋಣೆಯೊಳಗೆ ಬಂದಿಯಾಗಿದ್ದೇನೆ ನಾನು ಬಂದಿಯಾದರೇನಾಯಿತು, ಗಾಳಿ-ಬೆಳಕು ನನಗೆ

ಬೇಡವೆ? ವಿಚಾರಣೆಮಾಡುವ ನೆವದಿಂದ ಒಬ್ಬ ಮನುಷ್ಯನು ಇನ್ನೊಬ್ಬನ ಮೇಲೆ ಇಷ್ಟೇಕೆ ಅತ್ಯಾಚಾರ, ಅನ್ಯಾಯಗಳನ್ನು ಮಾಡುತ್ತಾನೆ? ಒಂದು ವೇಳೆ ಶಿಕ್ಷೆ ವಿಧಿಸುವುದೇ ಅವನ ಉದ್ದೇಶವಾಗಿದ್ದರೆ, ಇದಕ್ಕಿಂತಲೂ ಕಡಮೆ ಖರ್ಚಿನಲ್ಲಿ ಬೇರೆ ಯಾವುದಾದರೂ ಒಂದು ಸರಳ ಉಪಾಯವನ್ನು ಹುಡುಕಬೇಕಾಗಿತ್ತು. ಹಿಂದಿನ ಕಾಲದಲ್ಲಿ ಚೀಲದೊಳಗೆ ಮನುಷ್ಯನನ್ನು ಹಾಕಿ ಬಾಯಿ ಬಂದು ಮಾಡಿ ನದಿಯೊಳಗೆ ಹಾಕುತ್ತಿದ್ದರು. ಹಾಗೆ ಮಾಡುವುದರಿಂದ ಕೆಲಸವು ಬೇಗ ಮುಗಿಯುವುದು. ಇಷ್ಟು ಸಿದ್ಧತೆ, ಇಷ್ಟು ತೀಕ್ಷ್ಣ ಕಾವಲು, ಇಷ್ಟು ಪರಿಶ್ರಮ ಇವೆಲ್ಲ ಏಕೆ?

ಕೋಣೆಯೊಳಗೆ ಹಾಸುಗೆ ಇದ್ದಿಲ್ಲ. ನಾನು ಪಹರೆಯವನಿಗೆ ಹಾಸುಗೆ ತರಲು ಹೇಳಿದೆ. ನಿರುತ್ತರನಾಗಿ ಅವನು ನನ್ನನ್ನು ನಿರೀಕ್ಷಿಸುತ್ತ ನಿಂತ— ಆಕಾಶದಿಂದ ಭೂಮಿಗೆ ಬಿದ್ದವನಂತಾಗಿದ್ದ. ಬಹುಶಃ ಅವನಿಗೆ ಆಶ್ಚರ್ಯವಾಗಿರಬೇಕು— ಇವನು ಇನ್ನು ಆರು ತಾಸಾಗುತ್ತಲೇ ಕೊಲ್ಲಂಬಕ್ಕೆ ಗುರಿಯಾಗುವನು, ಇಂಥವನಿಗೆ ಇನ್ನೂ ಹಾಸುಗೆ ಬೇಕೆ?

ಏನೇ ಆಗಲಿ, ಆಗಲೇ ಜೇಲರರು ಹಾಸುಗೆ ತರಿಸಿ ಇಡಿಸಿದರು. ಅವರು ಬಹಳ ದೊಡ್ಡ ಮನಸ್ಸಿನವರು. ಸಾಯುವಾಗ ನಾನು ಅವರ ಹೆಸರನ್ನು ಸ್ಮರಿಸುತ್ತ ಸಾಯುವೆ. ಹಾಸುಗೆಯೊಳಗಿದ್ದ ಚಾದರಿನಿಂದ ನಾನು ಉರುಲು ಹಾಕಿಕೊಂಡೇನಲ್ಲ, ಈ ಅಂಜಿಕೆಯಿಂದ ಬಾಗಿಲಿನ ಹತ್ತಿರ ಒಬ್ಬ ಪಹರೆಯವನು ನನ್ನನ್ನು ನೋಡುತ್ತ ನಿಂತಿದ್ದ—ಸರಕಾರಿ ಚಾಂಡಾಲನಿಗೆ ನಾನು ಮೋಸಮಾಡಬಾರದಲ್ಲ! ನನ್ನ ಪ್ರಾಣವು ಅವನ ಕೈಯೊಳಗಿದ್ದಿತು.

## ೧೬

ಹತ್ತು ಹೊಡೆದಿದೆ!

ನನಗೆ ಮೇರಿಯ ನೆನಪಾಗುತ್ತಿದೆ. ದುರ್ದೈವಿ ಮಗು ನನ್ನ ಮೇರಿ! ಇನ್ನು ಆರು ತಾಸು ಕಳೆದರೆ ತೀರಿತು, ನನ್ನ ಈ ಭೂಮಿಯ ಋಣ, ಆಮೇಲೆ ನಾನೆಲ್ಲಿ, ಈ ಭೂಮಿಯೆಲ್ಲಿ? ಔಷಧಾಲಯದಲ್ಲಿ ಮೇಜಿನ ಮೇಲೆ ನನ್ನ ಹೆಣವು ಮಾತ್ರ ಬಿದ್ದಿರುವುದು. ನನ್ನ ದೇಹವನ್ನು ಕೊಯ್ದು-ಸೀಳಿ ಆಮೇಲೆ

ಅವರು ವಿಶ್ರಮಿಸುವರು. ನನ್ನನ್ನು ಕೊಯ್ದು ಚೂರು-ಚೂರು ಮಾಡುವರು. ಅಯ್ಯೋ ದೇವರೆ, ನನ್ನ ಮೇರಿ, ನನಗಾಗುವ ಅವಸ್ಥೆಯನ್ನು ಅರಿತಿರುವಳೇ?

ಇವರು ನನ್ನ ಕೂಡ ಹೇಗೆ ನಡೆದುಕೊಳ್ಳುತ್ತಿರುವರಲ್ಲ? ಇದರಿಂದ ಇವರಿಗೆ ಕಟುಕರೆನ್ನುವುದು ಸರಿಯಲ್ಲ, ನನ್ನನ್ನು ಕಂಡರೆ ಎಲ್ಲರ ಮನಸ್ಸೂ ಕರಗುತ್ತದೆ. ನನಗ ಏತಕ್ಕೂ ಕೊರತೆಯನ್ನು ಮಾಡಿಲ್ಲ ಆದರೂ ಇವರು ನನ್ನನ್ನು ಬದುಕಗೊಡುವುದಿಲ್ಲ. ಇರಗೊಡುವುದಿಲ್ಲ! ಅಂತಃಕರುಣ—ಆದರೆ ಇದೆಂಥ ಅಂತಃಕರುಣವಪ್ಪ! ಇವರು ನನ್ನನ್ನು ಖಂಡಿತವಾಗಿಯೂ ಕೊಲ್ಲುವರು, ಏನು ಮಾಡಿದರೂ ನನ್ನನ್ನು ಬಿಡುವುದಿಲ್ಲ.

ಬಡಪಾಯಿ ನನ್ನ ಮೇರಿ! ದುರ್ದೈವಿ ಮೇರಿ! ತಂದೆಯ ಮಮತೆ ನಿನಗೆ ನೆರಳಾಗಿತ್ತು. ತಂದೆಯ ಒಂದು ಚುಂಬನಕ್ಕೆ ನೀನು ಆನಂದಪಡುತ್ತಿದ್ದೆ. ನಾನು ನಿನ್ನ ಹೆಳಲನ್ನು ಪ್ರೀತಿಯಿಂದ ಹಿಡಿದು ಅದನ್ನು ತಿರುಹುತ್ತಿದ್ದೆ. ಆಗ ನಿನ್ನ ಮಿದುವಾದ ಕೆಂದುಟಿಗಳೊಳಗಿಂದ ನಗೆಯ ಬುಗ್ಗೆ ಬಿರಿಯುತ್ತಿತ್ತು. ನಿನ್ನ ಆ ನಗೆಯ ಪ್ರತಿಧ್ವನಿಯಿಂದ ಮನೆಯೆಲ್ಲ ರಾಗಮಯವಾಗಿ ಹೋಗುತ್ತಿತ್ತು. ಆಗ ರಾತ್ರಿ ನೀನು ಮಲಗುವ ಮೊದಲು ನಿನ್ನ ತಂದೆಯ ಹತ್ತಿರ ಕೈಕಟ್ಟಿಕೊಂಡು ಕುಳಿತುಕೊಳ್ಳುತ್ತಿದ್ದೆ. ನಿನ್ನ ಹಾಡು, ನಮಸ್ಕಾರಗಳು ನನ್ನ ದಿನದ ದಣಿವನ್ನು ದೂರ ಮಾಡುತ್ತಿದ್ದುವು ಅಯ್ಯೋ, ನಿನ್ನ ಆ ಪೂಜೆ ಎಷ್ಟು ಅವಸರದ್ದಿದ್ದಿತಲ್ಲ! ನನ್ನ ಇಂಥ ಸುಖದ ಸಾಮ್ರಾಜ್ಯವು ಸೂರೆಯಾಯಿತು! ಅಯ್ಯೋ, ಅದೆಲ್ಲ ಕನಸಾಗಿ ಪರಿಣಮಿಸಿತಲ್ಲ! ಅಯ್ಯೋ ಮೇರಿ, ನನ್ನ ಮುದ್ದು ಮಗು ಮೇರಿ! ನನ್ನಂತೆ ಇನ್ನು ನಿನ್ನ ಗಲ್ಲಗಳಿಗೆ ಯಾರು ಮೇಲಿಂದ ಮೇಲೆ ಮುದ್ದಿಡುವರು—ನನ್ನಂತೆ ಇನ್ನು ನಿನ್ನನ್ನಾರು ಕಾಣುವರು? ಮುಂದಿಯ ಸಣ್ಣ-ಮಕ್ಕಳು ತಮ್ಮ-ತಮ್ಮ ತಂದೆಯ ಬಗಲಲ್ಲಿ ಕುಳಿತುಕೊಂಡು ಜಾತ್ರೆಗೊ ಆಟವನ್ನು ನೋಡಲಿಕ್ಕೊ ಹೋಗುವರು. ಆಗ ನಿನ್ನ ನೇತ್ರಗಳಲ್ಲಿ ವೇದನೆಯ ಕಣ್ಣೀರು ಸುರಿಯದೆ! — ಹೃದಯವನ್ನಿರಿಯುವ ವೇದನೆ ನಿನ್ನ ಸುಂದರ ಮುಖವನ್ನು ಮ್ಲಾನಮಾಡುವುದು, ನೊಂದ ನೇತ್ರಗಳು ಅತ್ತಿತ್ತ ವ್ಯರ್ಥವಾಗಿ ನೋಡುವುವು! ನೀನು ಒಂದು ವರ್ಷದವಳಾದಾಗ, ನಿನ್ನ ಹುಟ್ಟಿದ ಹಬ್ಬದ ದಿನ ನೀನು ಉಪಹಾರವನ್ನು ಕಾಣೆ. ಯಾರೂ ನಿನ್ನನ್ನು ಆದರಿಸರು. ಅಯ್ಯೋ, ನನ್ನ ದಿಕ್ಕಿಲ್ಲದ, ಪರದೇಶಿಯಾದ ಮಗು, ಹೂವಿನಂತೆ ಕೋಮಲವಾದ ನಿನ್ನ ಪ್ರಾಣವನ್ನು ಯಾರೂ ತೃಪ್ತಪಡಿಸಲಾರರೆ? ಪಿತೃಹೀನ, ಅನಾಥ ಮೇರಿ!

ಆ ಜೂರಿಗಳು ಒಮ್ಮೆಯಾದರೂ ನನ್ನ ಮೇರಿಯನ್ನು ನೋಡಿದ್ದರೆ. ನನಗೆ ಕೊಲ್ಗಂಬದ ಶಿಕ್ಷೆಯನ್ನು ವಿಧಿಸುವ ಮುನ್ನ ಅವಳ ನೆನಪು ಅವರಿಗಾಗುತ್ತಿತ್ತು. ಅವಳ ಮಲಿನ ಮುಖವನ್ನು ನೋಡಿ ಅವರ ಕಠೋರ ಹೃದಯವು ಖಂಡಿತ ವಾಗಿಯೂ ಕರಗುತ್ತಿತ್ತು. ಇದಕ್ಕೆ ಬೇರೆ ಸಂದೇಹವೇ ಬೇಡ—ಇಲ್ಲ, ಇದಕ್ಕೆ ಸಂಶಯವೇ ಬೇಡ. ಮೇರಿಯ ಸಲುವಾಗಿ ನಾನಾದರೂ ಉಳಿಯು ತ್ತಿದ್ದೆನಲ್ಲ!

ಮೇರಿ! ಅವಳು ದೊಡ್ಡವಳಾದರೆ, ಓಡಾಡುವುದನ್ನು ಕಲಿತರೆ, ಅವಳಿಗೆ ಆಡಿದ ಎಲ್ಲ ಮಾತುಗಳೂ ಗೊತ್ತಾಗುವುವು. ಆಗ ನಾನೆಲ್ಲಿರುವೆ? ಅಷ್ಟು ಹೊತ್ತಿಗೆ ನನ್ನ ಹೆಸರನ್ನು ಪ್ಯಾರೀಸಿನ ಕಲಂಕ-ಸ್ಮೃತಿಯಲ್ಲಿ ನೋಡಬಹುದು. ನನ್ನ ಹೆಸರನ್ನು ಕೇಳಿ ಅವಳು ನಡುಗಲಿಕ್ಕಿಲ್ಲವೆ? ನನ್ನ ಹೆಸರನ್ನು ಕೇಳಿದ ಳೆಂದರೆ ಕೂಡಲೇ ಅವಳ ಅಂತಃಕರಣವು ನಾಚಿಕೆಯಿಂದ ಚೂರು ಚೂರಾಗದೆ ಇರದು. ಜನರ ತಿರಸ್ಕಾರವು ಅವಳನ್ನು ಸತತವಾಗಿ ಸುಡುವುದು. ಮೇರಿ! ಮೇರಿ! ನನ್ನ ಮುದ್ದು ಮಗು ಮೇರಿ! ತಂದೆಯನ್ನು ನೆನಿಸಿಕೊಂಡು ಎರಡು ಹನಿ ಕಣ್ಣೀರನ್ನೂ ಹಾಕಲಾರೆಯಾ-ಅಥವಾ ತಿರಸ್ಕಾರದ ಬೇಗೆಯನ್ನು ನನಗೆ ಹಚ್ಚುನೆಯಾ? ಇಲ್ಲ-ಇಲ್ಲ, ಮೇರಿ, ನೀನು ಎರಡು ಹನಿ ಕಣ್ಣೀರಿನಿಂದ ನನಗೆ ತರ್ಪಣ ಕೊಡು. ನಾನು ಅದರಿಂದಲೇ ತೃಪ್ತನಾಗುವೆ - ಕೇವಲ ಎರಡು ಹನಿ ಕಣ್ಣೀರು! ಅಯ್ಯೋ, ದೇವರೆ, ನಾನು ಅಂಥ ಅಪರಾಧವನ್ನೇನು ಮಾಡಿದ್ದೇನೆ, ಅಂಥ ಮಹಾ ಪಾಪವನ್ನೇನು ಮಾಡಿದ್ದೇನೆ? ಸಮಾಜವು ಇಷ್ಟು ಕಠೋರತನ ದಿಂದ, ಈ ರೀತಿಯಾಗಿ ನಿಷ್ಠುರತನದಿಂದೇಕೆ ನನ್ನನ್ನು ಹಿಂಸಿಸುತ್ತಿರುವುದು!

ಇಂದಿನ ಸೂರ್ಯನು ಈಗ ಅಸ್ತನಾಗುವನು ಆಗ ನಾನೆಲ್ಲಿರುವೆನೋ, ಏನೋ? ಈ ಪೃಥ್ವಿಯ ಅಸ್ತಿತ್ವವೇ ನನ್ನ ಪಾಲಿಗೆ ಅಳಿದು ಹೋಗುವುದು. ಈ ದಿನವೇ ನನಗೆ ಕೊನೆಯ ದಿನ. ಏನಿದು ಸಟೆಯೊ, ದಿಟವೊ, ಏನು ಕನಸೊ!

ಹೊರಗೆ ಈ ಕೋಲಾಹಲವೇಕೆ ನಡೆದಿದೆ! ಅದೊ, ನನ್ನ ಸಾವನ್ನು ನೋಡಲು ಜನರು ಸಾಲುಗಟ್ಟಿ ಬರುತ್ತಿದ್ದಾರೆ ಕುತೂಹಲವುಳ್ಳ ಪ್ರೇಕ್ಷಕರು, ಸ್ಪರ್ಶಿಸುವ ಪ್ರಹರಿಗಳು, ಅಣಿಯಾದ ಆಚಾರ್ಯರು—ನನ್ನನ್ನು ನೋಡಲು ಎಲ್ಲರ ಮನಸ್ಸೂ ಹಾತೊರೆಯುತ್ತಿದೆ. ಮೃತ್ಯು! ನೀನು ನಿಜವಾಗಿಯೂ ಇಂದು ನನ್ನನ್ನು ಗ್ರಹಣ ಮಾಡುವೆಯಾ? ನನ್ನನ್ನು?—ನೋಡು, ನಾನೀಗ

ಕಟ್ಟಿಕೊಂಡಿದ್ದೇನೆ. ಉಸಿರಾಡಿಸುತ್ತಿದ್ದೇನೆ. ಮಾತುಗಳನ್ನು ಆಲಿಸುತ್ತಿದ್ದೇನೆ. ಅವನೇ ನಾನು! ನಾನು ಸಾಯುವೆನೆ?

## ೧೭

ಇದು ನನಗೇನು ಗೊತ್ತಿಲ್ಲವೆ? ಹಾಂ, ಗೊತ್ತಿದೆ. ಪ್ಲೇದೀಗ್ರೀವ್ನದ ಹತ್ತರ ಹಾಯ್ದು ಹೋಗುತ್ತಿದ್ದೆ-ಅದು ಹಳೆಯ ಮಾತು. ಅಂದು ಮಧ್ಯಾಹ್ನ ಹನ್ನೆರಡು ಹೊಡೆದಿತ್ತು. ಒಮ್ಮೆಲೇ ನನ್ನ ಬಂಡಿ ನಿಂತಿತು.

ಹಾದಿಯುದ್ದಕ್ಕೂ ಸಾವಿರಾರು ಜನರು ನೆರೆದಿದ್ದರು! ಬಂಡಿಯೊಳಗಿಂದಲೇ ನಾನು ಹಣಿಕಿ ಹಾಕಿ ನೋಡಿದೆ. ಹರಯದವರು, ಮುದುಕರು, ದಾರಿ ತುಂಬ ಇರುವೆನುಸಿಯಲೂ ಬಾರದಂತೆ ಒತ್ತಾಗಿ ನೆರೆದಿದ್ದಾರೆ! ನಾಲ್ಕು ನಿಟ್ಟಿಗೂ ತಲೆಗಳೇ ತಲೆಗಳು ಕಾಣಿಸುತ್ತಿದ್ದುವು. ಗೋಡೆಗಳ ಮೇಲೆ, ಮಾಳಿಗೆಯ ಮೇಲೆ, ಮರಗಳ ಹರಿಗಳ ಮೇಲೆ—ಎಲ್ಲಿ ನೋಡಿದಲ್ಲಿ ಜನರೇ ಜನರು. ದೂರದಿಂದಲೇ ಕೊಲ್ಗಂಬದ ಎಲ್ಲ ಸಾಮಗ್ರಿಗಳೂ ಸಿದ್ಧವಾಗಿದ್ದುವು ಕಂಡುವು.

ಇಂದೂ ಅದೇ ದಿನ! ಆದರೆ ನಾನಿಂದು ಪ್ರೇಕ್ಷಕನಲ್ಲ. ನನ್ನನ್ನೇ ನೋಡಲು ಇಂದು ಜನರು ಕೂಡಿದ್ದಾರೆ! ಎಂದಿನಂತೆಯೇ ಇಂದೂ ಜನರು ಸೇರುವರು.

ನಾನು ಕೇವಲ ಒಂದು ದಾರವನ್ನಾಶ್ರಯಿಸುವೆ—ಎವೆ ತೆರೆದಿಕ್ಕುವ ಮೊದಲೇ ಅಂಧಕಾರಮಯವಾದ ಲೋಕವನ್ನು ಪ್ರವೇಶಿಸುವೆ. ವಿರಾಟವಾದ ಅಂಧಕಾರ; ಆಮೇಲೆ?—ನನಗೆ ಒಂದು ಕಲ್ಲಾದರೂ ದೊರೆತಿದ್ದರೆ ನನ್ನ ತಲೆಯನ್ನು ಒಡೆದುಕೊಳ್ಳುತ್ತಿದ್ದೆ!

ಕ್ಷಮೆಯು! ಎಲೊ, ಒಂದು ಸಾರೆ ನನ್ನನ್ನು ಕ್ಷಮಿಸಿ ಬಿಟ್ಟು ಬಿಡಿರಿ. ಕ್ಷಮಿಸಿರಿ! ರಾಜನಿಗೆ ದಯೆ ಹುಟ್ಟಿದರೆ, ಕ್ಷಮಿಸಿ ಬಿಟ್ಟರೆ—ಕ್ಷಮಿಸಿದರು—ಓಹೊ—ಕ್ಷಮಿಸಿಬಿಟ್ಟರು! ಅದೋ ಒಬ್ಬ ದೂತನು ಆ ಸುದ್ದಿಯನ್ನು ತರುತ್ತಿದ್ದಾನೆ! ಬಾ, ಎಲೋ ಸೇವಕ! ಬೇಗ ಬಾ! ಈ ಕತ್ತಲೆ ಒಮ್ಮೆಲೇ ಹರಿದು ಹೋಗುವುದು ಒಂದು ಪ್ರಖರವಾದ ಪ್ರಕಾಶಮಯವಾದ ದೇಶದೊಳಗೆ ಪ್ರವೇಶಿಸುವೆ! ಜಯಧ್ವನಿಯಿಂದ ನನ್ನ ಮನಸ್ಸು ಪ್ರಫುಲ್ಲಿತವಾಗುವುದು.

ನನಗೆ ಜೀವದಾನ ಕೊಡಿ! ಸ್ನೇಹ-ಮಮತೆಗಳಿಂದ ಕೂಡಿದ ಈ ಸುಂದರ ಪೃಥ್ವಿ, ಇದನ್ನು ಬಿಡಲು ನನಗೆ ಮನಸ್ಸಾಗಲೊಲ್ಲದು. ನನ್ನನ್ನುಳಿಸಿರಿ. ಕಾಸಿದ ಕಬ್ಬಿಣದಿಂದ ನನ್ನ ದೇಹದ ಮೇಲೆ ಮುದ್ರೆಯೊತ್ತಿರಿ ನನ್ನನ್ನು ಹೊರಗೆಲ್ಲಿಯೂ ಬಿಡಬೇಡಿರಿ—ಇಪ್ಪತ್ತು ವರುಷ, ಇಪ್ಪತ್ತೈದು ವರುಷಗಳ ವರೆಗೆ ನನ್ನನ್ನು ಬಂಧಿಸಿ ಜೇಲಿನಲ್ಲಿಡಿರಿ. ಆದರೆ ಈ ಗಾಳಿ, ಬೆಳಕು, ಆಕಾಶ ಇವು ನನಗೆ ಎರವಾಗುವಂತೆ ಮಾತ್ರ ಮಾಡಬೇಡಿರಿ. ಕೈದಿ—ಅವನೂ ಓಡಾಡುತ್ತಾನೆ ವಿಚಾರ ಮಾಡುತ್ತಾನೆ ಮಾತನಾಡುತ್ತಾನೆ ಅವನೂ ಸುಖದಿಂದಿದ್ದಾನೆ. ಆದರೆ ಈ ಪ್ರಾಣವನ್ನಷ್ಟೇ ಬಿಟ್ಟುಬಿಡಿರಿ ಪ್ರಾಣದಾನ ಮಾಡಿರಿ ಸಾಕು, ನನಗೆ ಮತ್ತೇನೂ ಬೇಡ

## ೧೮

ಕೆಲ ಹೊತ್ತಿನ ಮೇಲೆ ಆಚಾರ್ಯರು ಹೊರಳಿ ಬಂದರು ಮೈತುಂಬ ನೆರೆಗೂದಲು, ಕೋಮಲ ಸ್ವಭಾವ, ಮಿದುವು ಮಾತು! ಅವರನ್ನು ನೋಡಿದರೆ ಕೈ ತಾವಾಗಿಯೇ ಕೂಡುತ್ತಿದ್ದುವು.

ಇಂದು ಮುಂಜಾನೆಯೇ ಅವರನ್ನು ನಾನು ನೋಡಿದೆ ಆಗ ಅವರು ಕೈದಿಗಳಿಗೆ ಜ್ಞಾನೋಪದೇಶ ಮಾಡುತ್ತಿದ್ದರು. ಆದರೆ ಅವರಿಂದ ನನಗೇನು ಲಾಭ? ಅವರ ಮಾತುಗಳನ್ನು ಕೇಳಲು ನನಗೆ ಮನಸ್ಸಿಲ್ಲ ಕಾಜಿನ ಮೇಲೆ ಬಿದ್ದ ನೀರು ಜಾರಿ ಹೋಗುವಂತೆ ನನ್ನ ಮನಸ್ಸು ಅವರ ಮಾತನ್ನು ಗ್ರಹಣ ಮಾಡದೇ ಹೋಗಿದೆ

ಆದರೂ ಅವರನ್ನು ನೋಡಿದಂದಿನಿಂದ ಮನಸ್ಸಿಗೆ ಒಂದು ಬಗೆಯ ಧೈರ್ಯ ಬಂದಂತಾಗಿದೆ. ಸುತ್ತಲೂ ಎಲ್ಲಿ ನೋಡಿದರೂ ಬೀಭತ್ಸ ದೃಶ್ಯವೆ! ಆದರೆ ಇಂಥ ಪರಿಸ್ಥಿತಿಯಲ್ಲಿಯೂ ಇವರಲ್ಲಿ ಕೋಮಲತನವು ಇದ್ದಿತಲ್ಲ!

ನಾವಿಬ್ಬರೂ ಕುಳಿತುಕೊಂಡೆವು—ಅವರ ಕುರ್ಚಿಯ ಮೇಲೆ, ನಾನು ನನ್ನ ಹರಕು ಹಾಸಿಗೆಯ ಮೇಲೆ!

“ಸಹೋದರ!” ಅವರೆಂದರು.

ಅವರ ಶಬ್ದವು ನನ್ನ ಹೊಯ್ದಾಡುವ ಮನಸ್ಸನ್ನು ತಣ್ಣಗೆಮಾಡಿತು!

"ದೇವರನ್ನು ನೀನು ನಂಬುತ್ತೀಯಾ?" ಆವರು ಕೇಳಿದರು.

"ಹೂಂ, ನಂಬುತ್ತೇನೆ." ನಾನೆಂದೆ.

"ಈ ಉದಾರವಾದ ಕೆಥೋಲಿಕ ಧರ್ಮವಿದೆಯಲ್ಲ—ಇದನ್ನು ನೀನು ನಂಬುತ್ತೀಯಾ? ಇದರ ಮೇಲೆ ನಿನಗೆ ಶ್ರದ್ಧೆಯಿದೆಯೇ?"

"ಹೂ," ನಾನು ಉತ್ತರವಿತ್ತೆ.

"ಹಾಗಾದರೆ ಕೇಳು." ಆಚಾರ್ಯರು ಹೇಳಲಾರಂಭಿಸಿದರು. ಅವರೇನು ಹೇಳುತ್ತಿದ್ದರೋ ಏನೋ, ನನಗೆ ನೆನಪಿಲ್ಲ; ಎಷ್ಟು ಹೊತ್ತು ಹೇಳಿದರೊ, ಇದೂ ನನಗೆ ಗೊತ್ತಿಲ್ಲ. ಒಮ್ಮೆಲೇ ಅವರು ಹೇಳಿದರು. "ಏನು?" ಆಗ ನಾನು ಬೇರೆಲ್ಲಿಯೋ ನೋಡುತ್ತಿದ್ದೆ—ಬೆಚ್ಚಿ ಬಿದ್ದೆ. ಎದ್ದು ನಿಂತುಕೊಂಡೆ, ಹೇಳಿದೆ, "ದಯಮಾಡಿ ಸ್ವಲ್ಪ ಹೊತ್ತು ನನ್ನೊಬ್ಬನನ್ನೇ ಬಿಟ್ಟು ಬಿಡಿರಿ ನನಗೇಕೋ ಹೇಗೋ ಆಗುತ್ತಿದೆ."

"ಹಾಗಾದರೆ ನಾನೀಗ ಹೋಗಲೊ, ಹೇಳು-ಹೇಳು?"

"ಮತ್ತೇನು, ನಿಮಗೆ ಹೇಳಿಕಳಿಸುವೆ."

ಅವರು ಎದ್ದು ನಿಂತರು. ಮಿದುವಾದ ಮಾತುಗಳಲ್ಲಿ "ನಾಸ್ತಿಕ" ಎಂದರು.

ನಾಸ್ತಿಕನೆ! ಅಲ್ಲ, ನಾನೆಷ್ಟೇ ನೀಚನಿರಲಿ, ದುಷ್ಟನಿರಲಿ, ಆದರೆ ನಾನು ನಾಸ್ತಿಕನಲ್ಲ ಆದು ದೇವರಿಗೊಂದು ಗೊತ್ತು, ನಾನು ಅವನನ್ನು ನಂಬುತ್ತೇನೆ. ಅವನ ಮೇಲೆ ಶ್ರದ್ಧೆಯಿದೆ; ಆದರೆ ಈ ಆಚಾರ್ಯರು ಹೊಸ ಮಾತನ್ನೇನು ಹೇಳುವರು! ನನ್ನ ಜೆಂದ ಹೃದಯವನ್ನು ಹಾಯಾಗಿಡುವ ಸತ್ವವು ಇವರಲ್ಲೆಲ್ಲಿದೆ? ಇವರ ಯೋಗ್ಯತೆಯಾದರೂ ಎಷ್ಟು? ಸಂಬಳ ತೆಗೆದುಕೊಂಡು ಪಾಠಮಾಡಿಕೊಂಡ ಒಂದೆರಡು ಶಬ್ದಗಳನ್ನುಚ್ಚರಿಸಿದರೆ ತೀರಿತೆ! ಇದರಿಂದ ಯಾರಿಗೆ ಶಾಂತಿ ಸಿಗುವುದು?

ಕೊಲೆಗಡಕರು, ಕಳ್ಳ-ಕಾಕರು ಇವರ ಮುಂದೆ ಪಾಠ ಮಾಡಿಟ್ಟುಕೊಂಡ ಒಂದೆರಡು ಶಬ್ದಗಳನ್ನು ಹೇಳುವುದು ಇವರ ಕರ್ತವ್ಯ. ಆದರೆ ಕ್ಷುಬ್ಧ ಆತ್ಮವನ್ನು ಸಂತುಷ್ಟಗೊಳಿಸುವುದು ಇವರ ಶಕ್ತಿಗೆ ಮೀರಿದ ಮಾತು. ಇದು ಕೇವಲ ಉದ್ಧಟತನವಲ್ಲದೆ ಮತ್ತೇನು? ದೇವರ ಹೆಸರಿನಿಂದ ಮೋಸಗಾರಿಕೆಯೇಕೆ? ವಿಧಾತನ ಹೆಸರಿನಿಂದ ಈ ಹುಡುಗಾಟಿಕೆಯೇಕೆ? ಆದರೂ ರಾಜ-

ಧರ್ಮವೆಂದು ಇದಕ್ಕೆ ಹೆಸರು. ಇದು ಎಷ್ಟೋ ತಲೆಮಾರುಗಳಿಂದ ನಡೆದು ಬಂದಿದೆಯಲ್ಲ! ಅಯ್ಯೋ, ಇದು ವಿಷಾದದ ಸಂಗತಿ!!

ಆದರೆ ಈ ಮುದುಕ ಆಚಾರ್ಯರು! ಪಾಪ ಇವರದೇನು ತಪ್ಪು? ಇವರು ಪಡೆದ ಶಿಕ್ಷಣವಾದರೂ ಎಷ್ಟು— ಬುದ್ಧಿಯಿರುವುದಾದರೂ ಎಷ್ಟು? ಅದೇ ಕ್ಷುಲ್ಲಕವಾದ ಹಣದಾಸೆಗಾಗಿ ಕೆಲಸ ಮಾಡುತ್ತಿದ್ದಾರೆ! ಇದೇ ಇವರ ಬಾಳಿಗೆ ಊರುಗೋಲು! ಇಲ್ಲವಾದರೆ ಇವರ ಹೊಟ್ಟೆಗೆ ಹಿಟ್ಟೆಲ್ಲಿ? ನನಗೆ ಈ ಶ್ರದ್ಧೆಯಿಂದ ಫಲವೇನು! ಆದರೆ ಇದಕ್ಕೆ ಉಪಾಯವಾದರೂ ಏನು? ನನ್ನ ನಿಟ್ಟುಸಿರಿನಿಂದ ನಾಲ್ಕು ದಿಕ್ಕುಗಳೂ ಉರಿಯುತ್ತಿವೆ. ಬಾಯೊಳಗಿಂದ ವಿಷವು ಹೊರಹೊಮ್ಮುತ್ತಿದೆ. ನಾನೇನು ಮಾಡಲಿ, ಭವಿಷ್ಯವು ಮಹಾ ಕಠಿನವಿದೆ.

ಕಾವಲುಗಾರನು ನನಗೆ ಬಗೆ-ಬಗೆಯ ಊಟದೊಡವೆಗಳನ್ನು ತಂದ. ಇದೇ ನನ್ನ ಕೊನೆಯ ಊಟ!

ಹೊಟ್ಟೆ ಉರಿಯುವ ಹಾಗೆ ಹೊಡೆದೆ. ನನಗೆ ಇಷ್ಟು ತಿರಸ್ಕಾರ, ನಾನು ಇಷ್ಟು ಗೀಳು! ಇಲ್ಲ, ಇದು ನನ್ನ ಕಂಠದೊಳಗೇನೂ ಇಳಿಯುವುದಿಲ್ಲವಲ್ಲ.

## ೧೯

ತಲೆಯ ಮೇಲೆ ಟೊಪ್ಪಿಗೆಯನ್ನು ಹಾಕಿಕೊಂಡ ಒಬ್ಬ ಮನುಷ್ಯನು ಒಮ್ಮೆಲೇ ನನ್ನೆದುರಿಗೆ ಬಂದು ನಿಂತ. ಏನೋ ಯೋಚಿಸುತ್ತಿದ್ದ, ಎಲ್ಲಿಯೂ ನೋಡುತ್ತಿದ್ದಿಲ್ಲ! ಕೈಯಲ್ಲೊಂದು ಗಜದಳತೆಯ ಕಟ್ಟಿಗೆ, ಒಗಲೊಳಗೆ ಕಾಗದ-ಪತ್ರಗಳ ಬಂಡಲು ಇತ್ತು! ಬಂದವನೇ ಅವನು ಗೋಡೆಯನ್ನು ಅಳೆಯಹತ್ತಿದ. "ಒಳ್ಳೇದು, ಅಯ್ದಾರು ಫೂಟು ಬದಲಿಸಬೇಕು," ಮುಂತಾಗಿ ಒಬ್ಬ ಕಾವಲುಗಾರನ ಕೂಡ ಮಾತನಾಡಹತ್ತಿದ. ಇನ್ನೂ ಮತ್ತೆ ಏನೇನೊ ಹೇಳಹತ್ತಿದ!

ಕಾವಲುಗಾರನಿಂದ ಗೊತ್ತಾಯಿತು ಅವನೊಬ್ಬ ಕಂತ್ರಾಟದಾರ, ಸೆರೆಮನೆಯನ್ನು ರಿಪೇರಿ ಮಾಡುವರು. ಅದರಿಂದ ಅವನು ಅಳತೆ ಮಾಡುತ್ತಿದ್ದ.

ತನ್ನ ಕೆಲಸ ಮುಗಿಸಿಕೊಂಡು ಅವನು ನನಗೆ ಕೇಳಿದ—"ನಿಮಗೆ ಇಂದು ಕೊಲ್ಗಂಬದ ಶಿಕ್ಷೆಯೊ?"

ನಾನವನಿಗೆ ಉತ್ತರ ಕೊಡಲಿಲ್ಲ ಅವನು ಎವೆಯಿಕ್ಕದೆ ನನ್ನನು ನೋಡುತ್ತ ನಿಂತ!

ಅವನು ಮತ್ತೆ ಮಾತನಾಡಿದ—"ಆರು ತಿಂಗಳ ಮೇಲೆ ಈ ಸೆರೆಮನೆಯನ್ನು ಗುರುತಿಸುವುದು ಕಠಿನವಾಗುವುದು. ನೋಡಲು ಅಂದವಾಗಿ ಕಾಣಿಸುವುದು."

ಎಂದರೆ ಅವನು ಹೇಳುವ ಉದ್ದೇಶವಿಷ್ಟೆ—ನಾನು ಬಹಳ ದುರ್ದೈವಿ, ಹೊಸ ಸೆರೆಮನೆಯನ್ನು ನೋಡುವುದು ನನ್ನ ಹಣೆಬರೆಹದಲ್ಲಿಲ್ಲ!

ಅವನ ಮೋರೆಯ ಮೇಲೆ ಒಂದು ವ್ಯಂಗದ ನಗೆ ಕಾಣಿಸಿತು. ಕಾವಲುಗಾರನು ಅವನಿಗೆ ಹೇಳಿದ—"ಯಾರಿಗೂ ಇಲ್ಲಿ ನಿಲ್ಲಲು ಅಧಿಕಾರವಿಲ್ಲ! ನಿಮ್ಮ ಕೆಲಸವಾಗಿದ್ದರೆ ಹೊರಗೆ ನಡೆಯಿರಿ!"

ಅವನು ಹೋಗಿಬಿಟ್ಟ. ಮತ್ತೆ ನಾನು—ಅವನು ಅಳಿಯುತ್ತಿದ್ದ ಕಲ್ಲಿನ ಗೋಡೆಯಂತೆ ಮೌನವಾಗಿ ಕುಳಿತುಕೊಂಡಿದ್ದೆ.

ಇದೇ ಹೊತ್ತಿಗೆ ಮತ್ತೊಂದು ಮೋಜಿನ ಸಂಗತಿ ನಡೆಯಿತು.

ಕಾವಲು ಬದಲಾಯಿತು. ಹೊಸ ಕಾವಲುಗಾರನೊಬ್ಬನು ಬಂದ. ಅವನನ್ನು ನೋಡಿದರೆ ಹೆದರಿಕೆ ಬರುತ್ತಿತ್ತು. ಸ್ವರವು ಕರ್ಕಶವಾಗಿತ್ತು. ಒಟ್ಟಾರೆ ಅವನು ಯಮದೂತನೇ ಆಗಿದ್ದ!

"ಏನರೀ, ನಿಮ್ಮಲ್ಲಿ ತುಸುವಾದರೂ ಕನಿಕರವಿಲ್ಲವೆ?" ಕಾವಲುಗಾರನೆಂದ.

"ಇಲ್ಲ!" ನಾನು ಹೇಳಿದೆ.

ನನ್ನ ಸ್ವರದಲ್ಲಿ ಒಂದು ಬಗೆಯ ಕಾಠಿನ್ಯವಿತ್ತು! ಆದರೂ ಅವನು ಹಿಂದೆ ಸರಿಯುವವನಲ್ಲ! "ಒಂದು ಮಾತು ಹೇಳುತ್ತೇನೆ, ಕೇಳಿರಿ." ಎಂದ.

"ನನಗೆ ರಸಿಕತನವು ಹೆಚ್ಚು ಸೇರುವುದಿಲ್ಲ!" ನಾನೆಂದೆ.

"ಸಹೋದರರೆ, ನಾನು ಬಹಳ ಕಷ್ಟದಲ್ಲಿದ್ದೇನೆ! ನಾನು ಬಹಳ ದುರ್ದೈವಿ. ನೀವು ತುಸು ಕನಿಕರ ತೋರಿಸಿದರೆ ಕೊನೆಯ ವರೆಗೂ ನಿಮ್ಮ ಉಪಕಾರವನ್ನು ನೆನೆಸಿಕೊಳ್ಳುವೆ" ಅವನೆಂದ.

ಕೊನೆಯ ವರೆಗೂ! ನನ್ನ 'ಕೊನೆ' ಯಂತೂ ಸೂರ್ಯಾಸ್ತದೊಳಗೇ ಆಗುವುದು. ನಾನು ಹೇಳಿದೆ —"ನಿನಗೇನು ಹುಚ್ಚು ಹಿಡಿದಿದೆಯೆ? ಕಾಣಿಸು

ವುದಿಲ್ಲವೆ, ನಾನು ಯಾರಿಗೆ ಔತಣವಾಗಿ ಹೊರಟಿರುವೆ? ಇಂಥ ಹೊತ್ತಿನಲ್ಲಿ ಯಾರಿಗೇನು ಉಪಕಾರಮಾಡಬಲ್ಲೆ?"

ಆದರೂ ಅವನು ಬಿಡುವವನಲ್ಲ–ಹೇಳಿದ, "ಕೇಳಿಯಾದರೂ ಕೇಳಿರಿ!" ಆಮೇಲೆ ಸುತ್ತಲೂ ನೋಡಿ ಮೆಲ್ಲಮೆಲ್ಲಗೆ ಹೇಳಿದ, "ನನ್ನನ್ನು ಉಳಿಸುವುದು, ಅಳಿಸುವುದು ನಿಮ್ಮ ಕೈಯೊಳಗಿದೆ ನನ್ನ ಆಗು-ಹೋಗುಗಳು ನಿಮ್ಮನ್ನೇ ಅವಲಂಬಿಸಿವೆ. ಬಹಳ ಬಡವನಿದ್ದೇನೆ ನನ್ನ ಈ ಕೆಲಸವು ಬಹಳ ಕಷ್ಟವಾದುದೇನೋ ಇದೆ, ಆದರೆ ಸಂಬಳವೂ ಕಡಿಮೆ—ಇಷ್ಟೇ ಅಲ್ಲ, ನಾನು ಒಂದು ಕುದುರೆಯನ್ನು ಇಡಬೇಕಾಗುತ್ತದೆ! ನೌಕರಿಯ ಸುಖವು ಹೀಗೆಯೆ, ಸಹೋದರರೆ, ಅದಕ್ಕಾಗಿಯೆ ನಾನು ಆಗಾಗ ಲಾಟರಿ ಟಿಕೀಟು ಕೊಳ್ಳುತ್ತೇನೆ! ಬದುಕಲಿಕ್ಕೆ ಏನಾದರೂ ಮಾಡಬೇಕಲ್ಲ! ಆದರೆ ನೋಡಬಾರದೆ, ಏಳೆಂಟು ವರುಷಗಳಿಂದ ಒಂದೇ ಸವನೆ ಟಿಕೀಟಿಗೆ ದುಡ್ಡು ಹಾಕಿದೆ. ಆದರೆ ಒಂದು ಕಾಸಾದರೂ ಕೈಗೆ ಹತ್ತಬಾರದೆ! ನಾನು ೭೬ನೆಯ ನಂಬರಿನ ಟಿಕೀಟ ಕೊಂಡರೆ ೭೭ನೆಯ ನಂಬರಿನವನ ದೈವ ತೆರೆಯುತ್ತದೆ. ೭೭ನೆಯ ನಂಬರ ಕೊಂಡರೆ ೭೬ ಅಥವಾ ೭೮ನೆಯವರಿಗೆ ಹತ್ತುತ್ತದೆ! ಇರಲಿ, ಈಗ ನಾನೇನು ಆಲೋಚನೆ ಹಾಕಿಕೊಂಡಿದ್ದೇನೆ, ಗೊತ್ತೆ?" ಎನ್ನುತ್ತ ಅವನು ನನ್ನ ಕಡೆಗೆ ನೋಡಿದ.

"ನೀನೇನು ವಿಚಾರ ಮಾಡಿರುವೆ?" ನಾನು ಕೇಳಿದೆ

"ನಿಮ್ಮಿಂದ ನನಗೆ ಹೆಚ್ಚು ಅನುಕೂಲವಾಗಬಹುದು!" ಆವನೆಂದ.

ನಾನು ಸೋಜಿಗದಿಂದ ಅವನ ಕಡೆಗೆ ನೋಡಿ ಕೇಳಿದೆ—"ನನ್ನಿಂದ ನಿನಗೆ ಅನುಕೂಲವೆ!"

ಅವನು ಮಾತನಾಡಿದ—"ಹೂಂ, ಎಲ್ಲವೂ ನಿಮ್ಮ ಕೈಯೊಳಗಿದೆ! ಮನುಷ್ಯನು ತೀರಿಕೊಂಡ ಮೇಲೆ ಭೂತ, ಭವಿಷ್ಯ, ವರ್ತಮಾನ ಕಾಲಗಳನ್ನು ಕಾಣಬಲ್ಲ! ನೀವಾದರೂ ತುಸು ಹೊತ್ತಿನಲ್ಲಿ ಸತ್ತೇ ಸಾಯುವಿರಿ, ಆದುದರಿಂದಲೇ ನಾನು ನಿಮಗೆ ಹೇಳುತ್ತಿರುವುದು. ಈಗಲಾದರೂ ತಿಳಿಯಿತೆ? ನೀವು ಆಮೇಲೆ ಟಿಕೀಟಿನ ಸರಿಯಾದ ನಂಬರನ್ನು ಹೇಳಿದರೆ ಅದೇ ನಂಬರಿನ ಟಿಕೀಟನ್ನು ಕೊಳ್ಳುವೆ! ಸಾಕು, ಆಮೇಲೆ ನಾನೂ ದೊಡ್ಡ ಮನುಷ್ಯನಾಗುವೆ, ನೌಕರಿ ಬಿಡುವೆ, ಸುಖದಿಂದ ಕಾಲಹರಣ ಮಾಡುವೆ! ಭೂತವೆಂದರೆ ಹೆದರಿಕೆ ನನಗೆ ತಿಳಿಯಿತೆ? ಏನೂ ಅಡ್ಡಿಯಿಲ್ಲ, ನನ್ನ ಹೆಸರು ಕಾಸೀಂ ಪಾಯಿಕರು

'ಬಿ'ನಂಬರ ಬಾರಕ, ೨೬ನೆಯ ನಂಬರಿನ ಪಲ್ಲಂಗ—ನೆನಪು ಉಳಿಯುವುದ-ಲ್ಲವೆ? ಹಾಗಾದರೆ ಈ ದಿನ ರಾತ್ರಿಯೇ ಬಂದು ಹೇಳಿ ಹೋಗಬೇಕು ಹಾಂ, ಸಹೋದರರೆ, ಇಷ್ಟು ಉಪಕಾರವನ್ನಂತೂ ನೀವು ಮಾಡಲೇಬೇಕು!"

ನಾನವನ ಮಾತಿಗೆ ಉತ್ತರಕೊಡುತ್ತಿದ್ದಿಲ್ಲ, ಮನಸ್ಸೂ ಇದ್ದಿಲ್ಲ. ಆದರೆ ಒಂದು ಉನ್ಮತ್ತವಾದ ಆಶೆ ನನ್ನ ಮನಸ್ಸಿನೊಳಗೆ ಉದ್ಭವಿಸಿತು—ನಾನು ಇದೇ ಕೊನೆಯದೊಂದು ಪ್ರಯತ್ನಮಾಡಿದರೆ!

"ನೋಡು, ನಿನಗೆ ಬೇಕಾದುದು ಹಣವಲ್ಲವೆ?" ನಾನು ಕೇಳಿದೆ.

"ಹೂಂ, ಹೂ, ನಾನು ಹೇಳುತ್ತಿರುವುದೂ ಅದೆ."

"ಒಳ್ಳೇದು, ನಾನು ನಿನಗೆ ಬೇಕಾದಷ್ಟು ಹಣ ಕೊಡುವೆ. ಆದರೆ ಒಂದು ಕೆಲಸವನ್ನು ಮಾಡಬಲ್ಲೆಯಾ?" ನಾನು ಹೇಳಿದೆ.

ಅವನ ಕಣ್ಣುಗಳು ಆಶೆಯಿಂದ ಹೊಳೆಯತೊಡಗಿದವು. "ಹೇಳಿರಿ, ಈಗಲೇ ಮಾಡುವೆ ಬೇಕಾದಷ್ಟು ತೆಗವಿನ ಕೆಲಸವಿರಲಿ, ಹೆಜ್ಜೆಯನ್ನು ಹಿಂದೆ ಇಡುವುದಿಲ್ಲ," ಅವನೆಂದ.

"ಹೆಚ್ಚಿಗೆ ಏನೂ ಬೇಡ ನಾವಿಬ್ಬರೂ ನಮ್ಮ-ನಿಮ್ಮ ಉಡುಪುಗಳನ್ನು ಬದಲಿಸಿಕೊಳ್ಳುವಾ— ಸಾಕು ಮತ್ತೇನೂ ಬೇಡ." ನಾನೆಂದೆ

"ಸಾಕು; ಇದೇ ಕೆಲಸವೇನು! ಅಯ್ಯೋ, ಇದನ್ನು ಈಗಲೇ ಮಾಡುವೆ." ಎಂದು ಅವನು ತನ್ನ ಕೋಟಿನ ಬಟನ್ನುಗಳನ್ನು ಬಿಚ್ಚಹತ್ತಿದ.

ನಾನು ಎದ್ದು ನಿಂತೆ, ಎದೆ ಬಡೆದುಕೊಳ್ಳುತ್ತಿತ್ತು. ಒಂದು ಮಿನಿಟೂ ತಡಮಾಡಬಾರದು—ಇಲ್ಲದಿದ್ದರೆ ಎಲ್ಲವೂ ಹಾನಿಯಾಗುವುದು. ಅಯ್ಯೋ, ದೇವರೆ—ನೀನೇ ಧನ್ಯ! ಈಗ ಕ್ಷಣಹೊತ್ತಿನ ಹಿಂದೆ ನಾನು ಕಲ್ಪನಾ-ಸಾಮ್ರಾಜ್ಯದಲ್ಲಿ ನೋಡಿದೆ, ನನ್ನೆದುರಿಗೆ ಎಲ್ಲ ಬಾಗಿಲುಗಳು ತೆರೆದಿವೆ. ಎಲ್ಲಿಯೂ ಅಡ್ಡಿ-ಆತಂಕಗಳಿಲ್ಲ—ತೆರೆದ ವಿಶಾಲವಾದ ಮುಗಿಲಿನ ಕೆಳಗೆ ನಾನೊಬ್ಬನೇ ನಿಂತಿದ್ದೇನೆ-ನನ್ನ ತಲೆಯ ಮೇಲೆ ಹಕ್ಕಿಗಳ ಹಿಂಡು ಹಾಡುತ್ತ ಹಾರಿಹೋಗುತ್ತಿವೆ. ಆಗ ಸ್ನಿಗ್ಧಮಯವಾದ ವಾಯುವನ್ನು ಸೇವಿಸಿದೆ. ಆ ಜೀವನವೇ ಒಂದು ಹೊಸ ಬಗೆಯದಾಗಿದ್ದಿತು!

ಒಮ್ಮೆಲೇ ಹೋಗುತ್ತಿದ್ದ ಕಾವಲುಗಾರನು ನಿಂತು ಹೇಳಿದ—"ಅಯ್ಯೋ, ನಿಮ್ಮ ಅಭಿಪ್ರಾಯವನ್ನು ತಿಳಿದೆ. ಓಡಿಹೋಗಬೇಕೆನ್ನುತ್ತೀರಾ?"

ಗಂಟಲನ್ನು ಸರಿಪಡಿಸಿಕೊಳ್ಳುತ್ತ ನಾನು ಹೇಳಿದೆ–"ಇಲ್ಲವಾದರೆ ನಿನಗೆ ರುಪಾಯಿ ಹೇಗೆ ಕೊಡಲಿ?"

ಅವನು ಮತ್ತೆ ಕೋಟಿನ ಬಟನುಗಳನ್ನು ಹಾಕಿಕೊಳ್ಳಹತ್ತಿದ ನನ್ನ ಮೈಯಲ್ಲೆಲ್ಲ ಒಂದು ಮಿಂಚು ಮಿಂಚಿಹೋಯಿತು —ತಲೆ ಕಾಯಿತು.

ಅವನು ಹೇಳಿದ, "ಇಲ್ಲ, ಇದು ಹೇಗೆ ಸಾಧ್ಯ? ನಾನೀ ಕೆಲಸವನ್ನು ಮಾಡಲಾರೆ. ಇದು ತೊಡಕಿನದಿದೆ—ಇರಲಿ, ನೀವು ಸತ್ತ ಮೇಲೆಯೇ ನಂಬರನ್ನು ಹೇಳಿರಿ. ಆದರೆ ಈ ಪ್ರಕಾರ ಓಡಿ ಹೋಗಿ—ಅಯ್ಯೋ, ರಾವ - ರಾಮ!"

ನಾನು ಕುಳಿತುಕೊಂಡೆ, ಕಾಲು ನಡುಗುತ್ತಿದ್ದುವು ಇನ್ನು ಆಶೆಯಿಲ್ಲ. ಯಾವ ಆಶೆಯೂ ಇಲ್ಲ! ನಿರಾಶೆಯ ಗಂಭೀರವಾದ ವೇದನೆಯಿಂದ ಉಸಿರು ಗಟ್ಟಹತ್ತಿತು.

## ೨೦

ಎರಡೂ ಕೈಗಳಿಂದ ಮೋರೆಮುಚ್ಚಿಕೊಂಡು ನಾನು ಕುಳಿತುಕೊಂಡಿದ್ದೆ. ಕಳೆದು ಹೋದ ಸಂಗತಿಗಳೆಲ್ಲವೂ ನೆನಪಾಗುತ್ತಿದ್ದುವು ಕನಸಿನಂತೆ ವಿಚಿತ್ರವೂ, ಮಧುರವೂ ಆದ ಬಾಲ್ಯದ ಸಂಗತಿಗಳು! ದುರ್ಭಾವನೆ, ದುಶ್ಚಿಂತೆಗಳ ಭಯಂಕರವಾದ ಅಡೆ-ತಡೆ, ಇವಲ್ಲದೆ ಹಿಂದಿನ ನೆನಹುಗಳು — ಶುಭ್ರ-ಸುಂದರ ಹೂವಿನ ರಾಶಿಯಂತೆ ಇದ್ದುವು!

ಅರಳಿದ ಮೋರೆ, ನಿಶ್ಚಿಂತವಾದ ಹೃದಯ, ಉತ್ಸಾಹದಿಂದ ಕೂಡಿದ ಜೀವನ—ಆ ದಿನಗಳೆಷ್ಟು ಒಳ್ಳೆಯವಿದ್ದುವಲ್ಲ! ತೋಟಗಳೊಳಗೆ ತಿರುಗಾಟ, ಗೆಳೆಯರ ನಿರ್ಮಲವಾದ ಪ್ರೇಮ, ಅದೊಂದು ಸುಖದ ಸಾಮ್ರಾಜ್ಯವೇ ಆಗಿತ್ತು! ಅದಾದ ಮೇಲೆ ಬಾಲ್ಯದ ಸ್ವಪ್ನಮಯವಾದ ರಾಜ್ಯದೊಳಗೆ ನವೀನ ಪ್ರಕಾಶದ ಜನ್ಮ! ಹೊಸ ಉದ್ಯಾನದಲ್ಲಿ ನನ್ನ ಆ ಎಳೆಯ ಬಾಲಿಕೆ, ಮೇರಿ!

ಬೊಗಸೆಗಣ್ಣು, ಉದ್ದವಾದ ಕೇಶಗಳು, ಕೆಂಪು ಬಣ್ಣ, ಗುಲಾಬಿ ಬಣ್ಣದ ತುಟಿಗಳು–ಅಪೂರ್ವ ರೂಪವತಿಯಾದ ಪೇಯಾ! ನಾವಿಬ್ಬರೂ ತೋಟದೊಳಗೆ ಆಡುತ್ತಿದ್ದೆವು—ನಗೆ, ಹಾಡು, ಹರಟೆ!

ಕಾದಾಟಕ್ಕೂ ಸೀಮೆಯಿದ್ದಿಲ್ಲ ಅವಳ ಸ್ವಭಾವವೇನೋ ಶಾಂತವಿತ್ತು. ಮಧುರವಾಗಿತ್ತು ಆಗ ಅವಳ ಮಾಸಿದ ಕಣ್ಣುಗಳು ನನ್ನನ್ನು ನಿಟ್ಟಿಸುತ್ತಲೇ ಇರುತ್ತಿದ್ದುವು ಆ ದಿವಸ ಅವಳು ದೈನ್ಯದಿಂದ ಹೇಳಿದ್ದಳು– "ನೀವು ಗೂಡು ಗಳೊಳಗಿಂದ ಏಕೆ ಸಣ್ಣ-ಸಣ್ಣ ಮರಿಗಳನ್ನು ಕಳವು ಮಾಡುತ್ತೀರಿ? ಅಯ್ಯೋ! ನೀವು ಬಹಳ ಕಟುಕರು!"

ನಾನು ಇಷ್ಟು ಶೂರತನದ ಕೆಲಸ ಮಾಡಿದೆ! ಇವಳು ನನ್ನನ್ನು ಪ್ರಶಂಸಿಸಬೇಕಲ್ಲ ಇದನ್ನು ಬಿಟ್ಟು ನನ್ನನ್ನು ತಿರಸ್ಕರಿಸುತ್ತಿದ್ದಾಳೆ! ನಾನು ಸಿಟ್ಟಾಗಿ ಆ ಪಕ್ಷಿಯನ್ನು ತೆಗೆದುಕೊಂಡು ಅವಳ ಮೋರೆಗೆ ಹೊಡೆದೆ ಇಬ್ಬರೂ ಮನೆಗೆ ಬಂದೆವು ಅವಳ ಮೋರೆಯ ಮೇಲಿನ ಗಾಯವನ್ನು ನೋಡಿ ಅವಳ ತಾಯಿ ಕೇಳಿದಳು-"ನಿನ್ನ ಮೋರೆಯ ಮೇಲಿನ ಈ ಗಾಯವೇನು?" ಅವಳು ಕೂಡಲೇ ಉತ್ತರವಿತ್ತಳು, "ಬಿದ್ದಿದ್ದೆ!"

ಆಮೇಲೆ ಎಷ್ಟೋ ದಿನ ಅವಳು ನನ್ನ ಕೂಡ ನದಿಯ ದಂಡೆಯ ಮೇಲೆ ಆಡ್ಡಾಡುತ್ತಿದ್ದಳು. ಅವಳ ಗತಿ ಒಮ್ಮೆ ವೇಗವಾಗುತ್ತಿತ್ತು, ಒಮ್ಮೆ ಕಡಮೆಯಾಗುತ್ತಿತ್ತು! ದಂಡೆಯ ಮೇಲೆ ನಾವಿಬ್ಬರೂ ನಿಂತುಕೊಂಡು ಬೀಳುವ—ಏಳುವ ತೆರೆಗಳನ್ನು ನೋಡುತ್ತಿದ್ದೆವು–ಸಂಜೆಯಾಗುತ್ತಿತ್ತು, ಸುತ್ತಲೂ ಕತ್ತಲೆ ಕವಿದು ಏನೂ ಕಾಣದಂತಾಗುತ್ತಿತ್ತು: ಕೋಮಲವಾದ ಸಂಗೀತ ಸ್ವರದಂತೆ ನದಿಯ ನೀರು ದಂಡೆಗೆ ಅಪ್ಪಳಿಸಿ ಬೀಳುತ್ತಿತ್ತು, ಏಳುತ್ತಿತ್ತು. ಆಗ ನಮ್ಮ ಕಂಠಸ್ವರವೂ ಕೋಮಲವಾಗುತ್ತಿತ್ತು. ಎಷ್ಟೋ ಮಾತುಗಳು ಮನದೊಳಗಿದ್ದುವು—ದೇಶ-ವಿದೇಶದ, ಪ್ರೇಮ-ಪ್ರಣಯದ ಇನ್ನೂ ಏನೇನೊ........! ಒಮ್ಮೊಮ್ಮೆ ಅವಳ ಮೋರೆ ನಾಚಿಕೆಯಿಂದ ಕೆಂಪಾಗುತ್ತಿತ್ತು – ಅಲ್ಲ-ಅಲ್ಲ—ಕೆಂಪಗೆ ಅಲ್ಲ. ಬಹುಶಃ ಗುಲಾಬಿ?

ಬೇಸಿಗೆ ಕಾಲದ ಒಂದು ದಿನ. ಸಂಜೆಯ ಸಮಯ ಬಾದಾಮಗಿಡದಡಿಯಲ್ಲಿ ನಾವು ಕುಳಿತುಕೊಂಡಿದ್ದೆವು

ಅಕಸ್ಮಾತ್ತಾಗಿ ಪೇಯುಳ ಕೈಯೊಳಗಿಂದ ವಸ್ತ್ರವು ಕೆಳಗೆ ಬಿದ್ದಿತು. ನಾನು ಅದನ್ನು ಅವಳಿಗೆ ಕೊಟ್ಟೆ. ಆಗ ನನ್ನ ಕೈ ಅವಳ ಕೈಗೆ ತಾಕಿತು – ಸ್ಪರ್ಶದಿಂದ ಕೈಕಂಪಿಸಿತು!

ಪೇಯಾ ಹೇಳಿದಳು—"ಬನ್ನಿರಿ ಸ್ವಲ್ಪ ದೂರ ಇಬ್ಬರೂ ಓಡುವಾ,"

ಕೂದಲುಗಳನ್ನು ಬಿಗಿದ ಹೆಳಲು ಝುಲಾಲರಿಗಳಂತೆ ತೂಗಾಡುತ್ತಿದ್ದುವು, ನರ್ತಿಸುತ್ತಿದ್ದುವು. ಅವಳ ಕುತ್ತಿಗೆಯ ಮೇಲೆ ಒಂದು ವಿಚಿತ್ರವಾದ ಕೆಂಪು ಛಾಯೆ ಇತ್ತು! ಅದು ಕೆಂಪು ಮೋಡಗಳ ಮೇಲೆ ವಿದ್ಯುತ್ತಿನ ಒಂದು ರೇಖೆಯಂತೆ ಕಾಣುತ್ತಿತ್ತು.

ಇಬ್ಬರೂ ಹತ್ತಿರ-ಹತ್ತಿರ ಕುಳಿತುಕೊಂಡಿದ್ದೆವು. ಅವಳ ಮೋರೆಯ ಮೇಲೆ ಮುತ್ತಿನಂತೆ ಬೆವರಿನ ಹನಿಗಳು ಕಾಣುತ್ತಿದ್ದುವು. ನಾನು ಅವಳ ಹತ್ತಿರ ಹೋಗಿ ಕುಳಿತುಕೊಂಡೆ ಅವಳು ಆಗ ತೇಕುತ್ತಿದ್ದಳು. ಮಾತನಾಡಲು ಬರುತ್ತಿದ್ದಿಲ್ಲ. ಉಸಿರುಗಟ್ಟುತ್ತಿತ್ತು. ನಾನು ಅವಳ ಕಡೆಗೆ ನೋಡಿದೆ.

ಪೇಯಾ ಹೇಳಿದಳು, "ಸ್ವಲ್ಪ ಓದಿರಿ! ಇನ್ನೂ ಬೆಳಕು ಇದೆ—ನಿಮ್ಮ ಹತ್ತಿರ ಪುಸ್ತಕವಿದ್ದರೆ ತೆಗೆಯಿರಿ, ಬೊಕ್ಕಣದೊಳಗೆ ಇರಬಹುದಲ್ಲವೆ?"

ನನ್ನ ಬೊಕ್ಕಣದೊಳಗೊಂದು ಕಾದಂಬರಿ ಇತ್ತು. ನಾನದನ್ನು ಹೊರಗೆ ತೆಗೆದೆ. ನನ್ನ ಹೆಗಲ ಮೇಲೆ ಅವಳು ತಲೆಯನ್ನಿಟ್ಟು ಓದತೊಡಗಿದಳು. ಓದು-ಬರೆಹದಲ್ಲಿ ಅವಳು ಬಲು ಮುಂದೆ, ಅವಳ ಬುದ್ಧಿಯಾದರೂ ಸೂಜಿಯ ಮೊನೆಯಂತೆ ಇತ್ತು

ತುಸು ಹೊತ್ತು ಓದಿದ ಮೇಲೆ ಅವಳು ನನ್ನ ಕಡೆಗೆ ನೋಡಿ ಕೇಳಿದಳು—"ನೀವು ಕೇಳುತ್ತಿದ್ದೀರೋ ಇಲ್ಲೋ?" ನಾನು ನಿಜವಾಗಿ ... ಅವಳ ಕಡೆಗೆ ಸುಮ್ಮನೆ ನೋಡುತ್ತಿದ್ದೆ—ಆದರೆ ಕೇಳಲು ನನಗೆ ಬಿಡುವೆಲ್ಲಿ!

ಅವಳು ಕಣ್ಣನ್ನು ಮೇಲಕ್ಕೆತ್ತಿದಳು ಆದರೆ ನಮ್ಮಿಬ್ಬರ ... ಕೂಡಿಕೊಂಡಿತ್ತು. ಅವಳ ಉಸಿರಿನ ಸ್ಪರ್ಶವನ್ನು ನಾನು ನನ್ನ ಗಲ್ಲಗಳ ಮುಖಾಂತರ ಮಾಡಿದೆ. ಒಮ್ಮೆಲೇ ನಮ್ಮಿಬ್ಬರ ಅಧರಗಳೂ ಒಂದಾದುವ.

ಇಷ್ಟಾದ ಮೇಲೆ ನಾನು ಪುಸ್ತಕವನ್ನು ಮತ್ತೆ ತೆರೆದೆ. ಆಗ ಮುಗಿಲಲ್ಲಿ ತಾರೆಗಳು ಮಿನುಗುತ್ತಿದ್ದುವು ಅವು ನಮ್ಮಿಬ್ಬರನ್ನು ನೋಡಿ ನಗುತ್ತಿದ್ದುವು

ಅವಳು ತಿರುಗಿ ಮನೆಗೆ ಹೋದಳು ಅಲ್ಲಿ ತನ್ನ ತಾಯಿಗೆ ಹೇಳಿದಳು "ಅವ್ವಾ, ಇಂದು ನಾವಿಬ್ಬರೂ ಬಹಳ ಓದಿದೆವು." ನನಗೆ ನಸುನಗೆ [illegible] ಅವರು ಕೇಳಿದರು—"ನೀನೇಕೆ ಸುಮ್ಮನಿದ್ದೀ?"

ಸುಮ್ಮನೇ ಏಕೆ ಇದ್ದೇನೆಯೆ? ನನ್ನ ಹೃದಯದೊಳಗೆ [illegible] [illegible] ಹರುಷದ ಹೊನಲು ಹರಿಯುತ್ತಿತ್ತು. ಆಹಾ! ಆ ಸ್ನಿಗ್ಧವೂ, [illegible]

ಆದ ಸಂಜೆಯ ಸಂಗತಿಯನ್ನು ಈ ಜೀವನದಲ್ಲಿ ನಾನು ಎಂದಿಗೂ ಮರೆಯಲಾರೆ

ಈ ಜೀವನ—ಅಯ್ಯೋ, ಇನ್ನು ಎಷ್ಟು ಹೊತ್ತು ಇಲ್ಲಿರುವುದು? ಸ್ವಲ್ಪ ಸಮಯದಲ್ಲಿಯೇ ವಿಲೀನವಾಗಿ ಹೋಗುವುದಲ್ಲ!

## ೨೧

ಎಷ್ಟು ಹೊಡೆದಿದೆಯೊ ಏನೊ, ಗೊತ್ತಿಲ್ಲ. ತಲೆಯೊಳಗೆ ರಾಶಿಗಟ್ಟಲೆ ವಿಚಾರಗಳ ತಾಕಲಾಟವು ನಡೆದಿತ್ತು.

ನನ್ನ ತಪ್ಪಿನ ಮಾತನ್ನು ನೆನೆದ ಕೂಡಲೇ ನಾನು ಗದಗದ ನಡುಗುತ್ತೇನೆ—ಆದರೆ ಈ ಅನುತಾಪದಿಂದ ಫಲವೇನು?

ನನಗೆ ಶಿಕ್ಷೆಯಾಗುವ ಮುನ್ನ ಪಶ್ಚಾತ್ತಾಪದಿಂದ ಹೃದಯವು ಭಾರವಾಗಿ ಹೋಗಿತ್ತು, ಆದರೆ ಅದ ಈಗೆಲ್ಲಿ? ಈಗ ನನ್ನೆದುರಿಗೆ ಸಾವಿನ ಪ್ರಶ್ನೆಯೊಂದೇ, ಇದನ್ನು ಬಿಟ್ಟು ಬೇರೆ ವಿಷಯವನ್ನು ಕುರಿತು ವಿಚಾರ ಮಾಡಲು ಅವಕಾಶ ವಾದರೂ ಎಲ್ಲಿ? ಭೂತಕಾಲವನ್ನು ಕುರಿತು ಯೋಚಿಸಿದರೂ ಕೊಲ್ಲಂಬದ ಹಗ್ಗವು ಕಣ್ಣೆದುರಿಗೆ ಕುಣಿಯುತ್ತಿದೆ. ಆ ಸುಂದರವಾದ ಹುಡುಗತನ, ಆ ಮಧುರವಾದ ಬಾಲ್ಯಾವಸ್ಥೆ, ಅಯ್ಯೋ, ಅವೆಲ್ಲವೂ ಇಂದು ಕೊಲ್ಲಂಬದ ಹಲಗೆಯ ಮೇಲೆ ಹೋಳಾಡುವುವೆ? ಭೂತಕಾಲ, ವರ್ತಮಾನಕಾಲಗಳ ನಡುವೆ ಒಂದು ರಕ್ತಸಾಗರದ ಸೃಷ್ಟಿಯಾಗಿದೆ. ನನ್ನ ಜೀವನ ಚರಿತ್ರೆಯನ್ನು ಓದಿದವರು ಮೂಗಿಗೆ ಮುರಿಯುದಿರರು. ಏನು, ನಾನು ನಿಜವಾಗಿಯೂ ಕೆಟ್ಟ ಮನುಷ್ಯನೆ? ಅಲ್ಲ, ಎಂದೂ ಅಲ್ಲ.

ಇನ್ನು ಸ್ವಲ್ಪೇ ಹೊತ್ತಿನೊಳಗೆ ನನ್ನ ಎಲ್ಲ ಭಾವನೆಗಳೂ ಬಯಲಾಗುವುವು. ಆದರೆ ಸ್ವಲ್ಪ ದಿನಗಳ ಹಿಂದೆಯೇ ನಾನು ನದಿಯ ದಂಡೆಯ ಮೇಲೆ, ಗಿಡಗಳ ನೆರಳಿನಲ್ಲಿ, ಬಿದ್ದ ಮರದೆಲೆಗಳನ್ನು ತುಳಿದಾಡುತ್ತ ಸ್ವಚ್ಛಂದವಾಗಿ ತಿರುಗಾಡುತ್ತಿದ್ದೆ.

ನನ್ನ ಈ ಇಕ್ಕಟ್ಟಾದ ಕೋಣೆಯ ಹಿಂದೆಯೇ ಎಷ್ಟೋ ಮನೆಗಳಿವೆ. ಅಲ್ಲಿ ಈಗಲೂ ತರುಣ-ತರುಣಿಯರು ಒಬ್ಬರನ್ನೊಬ್ಬರು ಮುದ್ದಿಸುತ್ತಿರಬಹುದು.

ಶಿಶುಗಳು ಉಲ್ಲಾಸದಿಂದ ಆಡುತ್ತಿರಬಹುದು. ಆಶೆ-ನಿರಾಶೆ, ಸುಖ-ದುಃಖ ಗಳ ಹೊರೆಯನ್ನು ಹೊತ್ತುಕೊಂಡು ಈಗಲೂ ನರ-ನಾರಿಯರು ತಿರುಗಾಡು ತ್ತಿರಬಹುದು. ಕಾವಲುಗಾರನು ಒದರುತ್ತ ಕಾವಲು ಮಾಡುತ್ತಿರಬಹುದು. ಯಾವುದಾದರೊಂದು ಉದ್ಯಾನದಲ್ಲಿ ಯುವಕರು ತಮ್ಮ ಪ್ರಿಯತಮೆಯರನ್ನು ಬಾಹುಪಾಶದಿಂದ ಬಿಗಿದು ಹೆಚ್ಚಾದ ಪ್ರೇಮದಿಂದ ಚುಂಬಿಸುತ್ತಿರಬಹುದು. ಅವರ ಜೀವನದ ಕಾರಂಜಿ ಪುಟಿ-ಪುಟಿದು ಹರಿಯುತ್ತಿರಬಹುದು. ಆದರೆ ಮತ್ತೆ ನಾನು, ನನ್ನ ಗತಿ?—

ಹಿಂದಿನ ಮಾತುಗಳೇ ನೆನಪಾಗುತ್ತಿವೆ. ಹಿಂದೊಮ್ಮೆ ನೋಟರ್ಡ್ಯಾಮ್ಗೆ ಗಂಟೆಯನ್ನು ನೋಡಲು ಬಂದಿದ್ದೆವು. ಆಗ ನಾನು ಇನ್ನೂ ಸಣ್ಣವನಿದ್ದೆ. ಕತ್ತಲೆಯೊಳಗೆ ಅಂಕು-ಡೊಂಕಾದ ಪಾವಟಿಗೆಗಳನ್ನು ಹತ್ತಿದೆವು ಅದರಿಂದ ನನ್ನ ತಲೆ ತಿರುಗಹತ್ತಿತು. ಮೇಲೇರಿ ನೋಡಿದೆ, ಅಲ್ಲಿಗೆ ಪಟ್ಟಣವು ಸಂಪೂರ್ಣ ವಾಗಿ ಕಾಣಿಸುತ್ತಿತ್ತು. ಅದು ಕಾಲಕೆಳಗೆ ಓಡಾಡಲು ಹಾಸಿದ ರತ್ನಗಂಬಳಿ ಯಂತಿತ್ತು!

ಆಮೇಲೆ ಗಂಟೆಯನ್ನು ನೋಡಿದೆ. ಆ ಗಂಟೆ ಬಹಳ ಭಾರವಿತ್ತು! ನಾನು ಪಟ್ಟಣ ನೋಡುವುದರಲ್ಲಿ ಮಗ್ನನಾಗಿದ್ದೆ. ಆ ಎತ್ತರವಾದ ಗೋಪು ರದ ಮೇಲೆ ನಿಂತು ನೋಡಿದರೆ ಕೆಳಗೆ ಓಡಾಡುವವರು ಸಣ್ಣ-ಸಣ್ಣ ಗೊಂಬೆ ಯಂತೆ ಕಾಣಿಸುತ್ತಿದ್ದರು. ಅದೆಲ್ಲವನ್ನು ನಾನು ನೋಡುತ್ತಲಿದ್ದೆ. ಅಷ್ಟು ಹೊತ್ತಿಗೆ ಆ ಗಂಟೆ ಬಾರಿಸಿದುದರಿಂದ ಒಂದು ದೊಡ್ಡ ಸಪ್ಪಳವಾಯಿತು. ಆ ಗೋಪುರಕ್ಕೆ ಗೋಪುರವೇ ಕಂಪಿಸಿತು; ನನ್ನ ಕೈ-ಕಾಲುಗಳೂ ಕಂಪಿಸಿದುವು. ನಾನು ನೆಲದ ಮೇಲೆ ಕುಳಿತುಕೊಂಡೆ. ಗಂಟೆಯ ಧ್ವನಿ ನಿಂತಿತಾದರೂ ಅದರ ಪ್ರತಿಧ್ವನಿ ಮಾತ್ರ ಹಾಗೆಯೇ ಇತ್ತು. ಇಂದೂ ಅಂದಿನ ನೆನಪಾಗು- ತ್ತಿರುವಾಗಲೆಲ್ಲ ಹಾಗೇ ಎನಿಸುತ್ತದೆ. ಗಂಟೆಯ ಸಪ್ಪಳವೇನೂ ಇಲ್ಲ. ಆದರೆ ನಾಲ್ಕೂ ಸಿಟ್ಟಿಗೂ ಕೋಲಾಹಲವು ಮಾತ್ರ ಇದೆ. ಒಂದು ಅಸ್ಪಷ್ಟವಾದ ಸ್ವರದಿಂದ ಕಿವಿಗಳು ಗಡಚಿಕ್ಕುತ್ತಿವೆ. ಹಣೆಯ ಮೇಲಿನ ನರವು ಟಣ್ ಟಣ್ ಹಾರುತ್ತಿವೆ. ನೆರಳಿನಂತೆ ನನ್ನ ಸುತ್ತಲೂ ನೋಡು ತ್ತೇನೆ. ಎಷ್ಟೋ ಮಂದಿ ಗಂಡಸರು-ಹೆಂಗುಸರು ಹರುಷದಿಂದ ಗದ್ದಲ ಮಾಡುತ್ತ ಅತ್ತಿಂದಿತ್ತ ಇತ್ತಿಂದತ್ತ ಓಡಾಡುತ್ತಿದ್ದಾರೆ ಅಲ್ಲಿ ಆಗುತ್ತಿರುವ ಧ್ವನಿ ಅವರ ಉಲ್ಲಾಸಧ್ವನಿಯುಳ್ಳವೆ?

ಮೇಲೂ ಹೋಟಲಿನ ಎತ್ತರವಾದ ಕಟ್ಟಡದ ಮೇಲಿರುವ ಗಡಿಯಾರವೂ ಕಾಣಿಸುತ್ತದೆ. ಪ್ಲೇದೀಗ್ರೀವ್ಹ ನಗರದ ಕಲ್ಲಿನ ಕಠೋರವಾದ ಗೋಡೆಗಳಂತೆಯೇ ಆ ಗಡಿಯಾರವು ಕಾಣಿಸುತ್ತದೆ. ಬಹಳ ಹಳೆಯವಾದ ಗೋಡೆ, ಗಡಿಯಾರ ಇವು ಇದಕ್ಕೆ ಗೆಳೆಯರಂತೆ ಇವೆ.

ಯಾವನಾದರೊಬ್ಬನ ಕುತ್ತಿಗೆ ಕೊಲ್ಗಂಬಕ್ಕೆ ಆಹುತಿಯಾದಾಗ, ಅಜ್ಞಾತ ಲೋಕದ ವಿರಾಟವಾದ ಅಂಧಕಾರದೊಳಗೆ ತೂಗಾಡುವಾಗ ಪ್ಲೇದೀಗ್ರೀವ್ಹದ ಅಸಂಖ್ಯರಾದ ಕಾವಲುಗಾರರು ಬಾಗಿಲಲ್ಲಿ ನಿಂತುಕೊಂಡು ಕುತೂಹಲದಿಂದ ನೋಡುವರು. ಸಾವಿನ ಬಾಯಿಗೆ ತುತ್ತಾಗುವ ಬಡಪಾಯಿಗಳು ಆ ದೃಷ್ಟಿಯ ಬೆಂಕಿಯಲ್ಲಿ ತಮ್ಮ ಕಥೆಯನ್ನು ಮುಗಿಸಿಕೊಳ್ಳುತ್ತಾರೆ—ಮತ್ತೆ ಸಂಜೆಯ ವೇಳೆಯಲ್ಲಿ ಹೋಟಲಿನ ಆ ಜಾಜ್ವಲ್ಯಮಾನವಾದ ಗಡಿಯಾರವು ಚಂದ್ರನಂತೆ ನಗುತ್ತಿರುತ್ತದೆ.

ಒಂದು ಹೊಡೆದು ಹದಿನಯ್ದು ಮಿನಿಟಾಗಿದೆ!

ನಾನು ಈಗ ಹೇಗಿದ್ದೇನೆ? ತಡೆಯಲಾಗದಂಥ ತಲೆಶೂಲೆ! ಯಾರೋ ತಲೆಯೊಳಗೆ ಕೊಳ್ಳಿ ಇಟ್ಟಂತಾಗಿದೆ! ನಾನು ಕುಳಿತುಕೊಳ್ಳಲಿ, ಮಲಗಿಕೊಳ್ಳಲಿ ಅಥವಾ ಅಡ್ಡಾಗಲಿ ತಲೆಯೊಳಗೆ ನದಿಯ ನೀರು ಕಲ-ಕಲ ಸಪ್ಪಳ ಮಾಡುತ್ತ ಹರಿದಂತಾಗುತ್ತದೆ. ತಲೆ ಬುರುಡೆಯ ಕಟ್ಟನ್ನು ಒಡೆದು ಈಗ ಹೊರ ಬೀಳುವುದೋ, ಏನೋ ಎನ್ನುವಂತೆ ಎನಿಸುತ್ತದೆ.

ಒಂದು ವೇದನೆಯಿಂದ ಅಂಗ–ಪ್ರತ್ಯಂಗಗಳಲ್ಲಿ ರೋಮಾಂಚವಾಗುತ್ತಿದೆ. ಹಿಡಿದ ಟಾಕು ಬೀಳುವುದರಲ್ಲಿದೆ, ಕೈಯೊಳಗೆ ವಿದ್ಯುತ್ಸಂಚಾರವಾಗುತ್ತಿದೆ.

ಕಣ್ಣುಗಳಿಂದ ಕಣ್ಣೀರು ಭೋರ್ಗರೆಯುತ್ತಿದೆ, ಹೊಗೆ ತುಂಬಿದ ಕೋಣೆಯೊಳಗೆ ಕುಳಿತವರಂತೆ ನನ್ನ ಹಾಡಾಗಿದೆ ಮೈಯ ಸಂದು ಸಂದುಗಳು ಕೊಚ್ಚಿದಂತಾಗುತ್ತಿವೆ! ಇನ್ನು ಕೇವಲ ಎರಡೂ ಮುಕ್ಕಾಲುತಾಸು ಮಾತ್ರ ಉಳಿದಿದೆ—ಆಮೇಲೇನು, ಕೊನೆಯ ವರೆಗೂ ಶಾಂತಿ, ಸುಖವೇ ಸುಖ. ಅದು ಒಂದು ದೊಡ್ಡ ಸುಖ!

ಜನರು ಹೇಳುತ್ತಾರೆ—"ಕಷ್ಟ! ಹಿಂಸೆ! ಅವೇನು ಅಷ್ಟು ದೊಡ್ಡವಲ್ಲ!" ಏನಿದು ನಿಜವಿರಬಹುದೆ?

ಈ ಕಷ್ಟ ಆರು ತಾಸಿನದು! ಇದಕ್ಕಿಂತ ಮೃತ್ಯುವಿನ ಕಷ್ಟವು ಹೆಚ್ಚು

ಆಗಬಹುದೆ? ಹೆಜ್ಜೆ ಹೆಜ್ಜೆಗೆ ನನಗಾಗುವ ಕಷ್ಟವನ್ನು ನೋಡಿದರೆ ನಾನು ಅಸಂಖ್ಯ ವೇದನೆಗಳ ಪಾವಟಿಗೆಗಳನ್ನೇರುತ್ತ ಮೃತ್ಯುವಿನ ಬಾಯಿಗೆ ಹೊರಟಂತೆ ಇದ್ದೇನೆ. ಈ ವೇದನೆ - ಈ ಕಷ್ಟ—ಇವನ್ನು ಹೇಗೆ ಸಹಿಸಲಿ!

ಆದರೂ, ಇದೇನೂ ಅಲ್ಲವೆ?

ನರ-ನರಗಳಲ್ಲಿ ರಕ್ತವು ವೇಗವಾಗಿ ಸಂಚರಿಸುತ್ತದೆ. ಎದೆಯ ಮೇಲೆ ಭಾರವಾದ ಕಲ್ಲನ್ನಿಟ್ಟಂತಾಗಿದೆ—ಅಯ್ಯೊ, ಉಸಿರುಗಟ್ಟುತ್ತಿದೆ!

ಎಂಥ ಯಮಯಾತನೆಯಿದು? ಯಾರು ನೋಡುವರು—ಮತ್ತೆ ಇದನ್ನು ಕುರಿತು ವಿಚಾರವನ್ನಾದರೂ ಯಾರು ಮಾಡುವರು? ಕೊಲ್ಗಂಬವಾದ ಮೇಲೆ ಆ ತಲೆ ಬಂದು ಆ ವೇದನೆಯನ್ನು ತಿಳಿಹೇಳುತ್ತಿದ್ದರೆ ವಿಜ್ಞಾನದ ಎಲ್ಲ ಶೋಧವು ಮೂಲೆಗುಂಪಾಗುತ್ತಿತ್ತು.

ಎವೆ ತೆರೆದಿಕ್ಕುವುದೊಂದೇ ತಡ—ಎಲ್ಲವೂ ಮುಗಿದು ಹೋಗುವುದು! ಕ್ಷಣ ಹೊತ್ತಿನೊಳಗೆ ಇಷ್ಟು ದೊಡ್ಡ ಜೀವ! ಆ ಲವಲವಿಕೆಯುಳ್ಳ ಪ್ರೇಕ್ಷಕರು, ಈ ಅಸಂಖ್ಯಾತ ರಾಜನ ದಂಡಾಳುಗಳು, ಅಯ್ಯೊ, ಇವರಿಗೆ ಈ ಯಾತನೆಯೇನು ಗೊತ್ತಾಗಬೇಕು? ಆ ಭಯಂಕರವಾದ ದಾರವು ಒಂದು ಮಿನಿಟಿನೊಳಗೇ ಕೊರಳನ್ನು ಕತ್ತರಿಸಿ ಬಿಡುವುದು—ದೇಹದ ರಕ್ತವೆಲ್ಲವೂ ಹೊರಹೊಮ್ಮುವುದು! ಸಮುದ್ರದ ಗತಿಯನ್ನು ಒಡ್ಡು ತಡೆದಾಗ ಅದು ಗೋಷದಿಂದ ಒಡ್ಡನ್ನು ಒಡೆಯಲು ಭಯಂಕರವಾದ ರೂಪವನ್ನು ಧಾರಣ ಮಾಡುವುದು. ಅಯ್ಯೊ, ದುರ್ದೈವವೆ! ಆ ಭಯಂಕರವಾದ ದ್ವಂದ್ವದಲ್ಲಿಯೇ ಎಲ್ಲ ಆಟವೂ ಮುಗಿದು ಹೋಗುವುದು. ಒಳಗಿನ ಶಕ್ತಿಗಳಿಗೂ, ಹೊರಗಿನ ಶಕ್ತಿಗಳಿಗೂ ಭಯಂಕರವಾದ ಹೋರಾಟ - ಅಯ್ಯೊ, ಅದು ಎಷ್ಟು ಭಯಂಕರವಾಗಬಹುದಲ್ಲ!

ಅರಸನ ಮಾತೂ ಆಗಾಗ ನೆನಪಿಗೆ ಬರುತ್ತಿದೆ. ಮನಸ್ಸಿನೊಳಗಿನ ಚಿಂತೆ ಏನು ಮಾಡಿದರೂ ದೂರಾಗಲೊಲ್ಲದು! ಎರಡೂ ಕಿವಿಗಳಲ್ಲಿ ಯಾರೋ ಹೇಳಿದಂತಾಗುತ್ತಿದೆ. "ಅರಸನೆ? ಈಗ ಅವನು ಈ ಪಟ್ಟಣದಲ್ಲಿಯೇ ಒಂದು ದೊಡ್ಡ ಅರಮನೆಯೊಳಗಿನ ಅಲಂಕರಿಸಿದ ಕೋಣೆಯಲ್ಲಿ ಕುಳಿತಿದ್ದಾನೆ. ಇಲ್ಲಿ ಇದ್ದಂತೆಯೇ ಅವನ ಮನೆಯ ಮುಂದೆಯೂ ಎಷ್ಟೋ ಮಂದಿ ಕಾವಲುಗಾರರು ಕಾವಲು ಮಾಡುತ್ತಿರಬಹುದು." ಇದರೊಳಗೆ ಅಂತರವೇನು? ಅವನು

ಪ್ರತಿಷ್ಠೆಯ ಉಚ್ಚ ಆಸನದ ಮೇಲಿದ್ದಾನೆ, ನಾನು ಕೆಳಗಿದ್ದೇನೆ. ಸರಿ, ಇದೇ ಅಂತರ. ಅವನ ಜೀವನವು ಪ್ರತಿ ಕ್ಷಣವೂ ಮಹತ್ವವುಳ್ಳದೂ, ಮಹಿಮಾ ಪೂರ್ಣವೂ, ಯಶ-ಆನಂದದಿಂದ ಕೂಡಿದ ದೂ ಆಗದೆ. ಸುತ್ತಲೂ ಪ್ರೇಮ, ಭಕ್ತಿ, ಶ್ರದ್ಧೆಗಳ ಪ್ರವಾಹವು ಹರಿಯುತ್ತಿದೆ ಅವನ ಮುಂದೆ ಕರ್ಕಶ ಸ್ವರವೂ ಶಾಂತವಾಗುತ್ತದೆ ದರ್ಪದ ರಾಜದಂಡವು ತಲೆಬಾಗುತ್ತದೆ. ಅವನ ಮುಂದೆ ಬೆಳ್ಳಿ-ಬಂಗಾರವು ಕಣ್ಣು ಕುಕ್ಕಿಸುತ್ತದೆ. ಸಭಾಸದರ ಎದುರಿನಲ್ಲಿ ಸಿಂಹಾಸನದ ಮೇಲೆ ಕುಳಿತುಕೊಂಡು ಆಜ್ಞಾಪಿಸುತ್ತಿದ್ದಾನೆ–ಜನರು ಅವನ ಅಪ್ಪಣೆಯನ್ನು ಆನಂದದಿಂದ ಪಾಲಿಸುತ್ತಿದ್ದಾರೆ ಒಮ್ಮೆ ಬೇಟೆಯಾಡುತ್ತಾನೆ. ಒಮ್ಮೆ ಪ್ರಜರನ್ನು ಕುರಿತು ಚಿಂತಿಸುತ್ತಾನೆ ಮತ್ತೊಮ್ಮೆ ನೃತ್ಯ-ಸಂಗೀತ ದೊಳಗೆ ಮಗ್ನನಾಗಿರುತ್ತಾನೆ! ಅವನ ಬಾಯೊಳಗಿಂದ ಮಾತು ಹೊರಬೀಳು ವುದೊಂದೇ ತಡ, ಎಷ್ಟೋ ಜನರು ವಿಲಾಸದ ಸಾಮಾನುಗಳನ್ನು ಸಂಗ್ರಹ ಮಾಡಲು ಮಗ್ನರಾಗುವರು!

ಅರಸನೇನು! ಅವನಿಗೂ ನನ್ನಂತೆ ರಕ್ತ-ಮಾಂಸವಿದೆ— ಕ್ಷುದ್ರ ಮನುಷ್ಯ ಈ ಅರಸನು! ಆದರೂ ಇವನ ಟಾಕಿನ ಒಂದು ಗೆರೆ ನನ್ನ ಕೊಲ್ಗಂಬವನ್ನು ತಡೆಯಬಲ್ಲುದು! ಜೀವ, ಸ್ವಾತಂತ್ರ್ಯ, ಐಶ್ವರ್ಯಗಳೆಲ್ಲವನ್ನೂ ಕ್ಷಣದೊಳಗೆ ಸಂಪಾದಿಸಿಕೊಳ್ಳಬಲ್ಲೆ— ಮತ್ತೆ ಇದನ್ನೂ ಕೇಳಿದ್ದೇನೆ— "ನಮ್ಮ ದೊರೆ ಬಹಳ ದಯಾಳುವಿದ್ದಾನೆ." ಆದರೆ ನನ್ನನ್ನು ಳಿಸುವುದೆಂದರೆ ದಯೆಯ ದುರುಪ ಯೋಗವಾದಂತಾಗುವುದು! ಅಯ್ಯೊ, ದಯೆಯ ಪರಿಭಾಷೆಯು!!

## ೨೨

ಸಾಹಸವೇ ಈಗ ಬಾ! ಸಾವಿನ ಅಂಜಿಕೆಯನ್ನೋಡಿಸು. ನೀನೂ ಹೆದರುವೆಯಾ? ನಿನಗೇತರ ಹೆದರಿಕೆ? ನಿನಗೆ ಪ್ರತಿಬಂಧವೆಲ್ಲಿಯದು? ಮೃತ್ಯುವೇ ಬಾ, ನಾನು ನಗು-ನಗುತ್ತ ನಿನ್ನನ್ನು ಸ್ವಾಗತಿಸುವೆ— ಆನಂದ ದಿಂದ— ನಿನ್ನನ್ನು ಆಲಂಗಿಸುವೆ ಬಾ, ನೀನು ಮಿತ್ರನೇ ಇರಲಿ, ಶತ್ರುವೇ ಆಗಿರಲಿ, ಸಾಕು ಬಾ!

ಕಣ್ಣುಗಳನ್ನು ಮುಚ್ಚಿನೋಡಿದೆ. ಉಜ್ವಲವಾದ ಪ್ರಕಾಶವು ನಾಲ್ಕೂ ನಿಟ್ಟಿಗೂ ಹಬ್ಬುತ್ತಿದೆ. ನನ್ನ ಆತ್ಮವು ಆ ಪ್ರಕಾಶದಿಂದ ತುಂಬಿದ

ಹೌದಿನೊಳಗೆ ಸ್ನಾನಮಾಡಲು ಹಾತೊರೆಯುತ್ತಿದೆ! ನನ್ನ ತಲೆಯ ಮೇಲೆ ಅನಂತ ಆಕಾಶವು ಉಲ್ಲಾಸದಿಂದ ಮೆರೆಯುತ್ತಿದೆ. ಆದರ ಶುಭ್ರ ಪ್ರಕಾಶಕ್ಕೆ ಯಾರೋ ಕಾಡಿಗೆಯನ್ನು ಬಡಿದಿದ್ದಾರೆ! ಮಖಮಲಿನಂತೆ ಕೋಮಲವಾದ ಆಕಾಶದಲ್ಲಿ ವಜ್ರದ ತುಂಡುಗಳು ಹರಡಿವೆ. ಆಗ ಇವು ಈಗಿನಂತೆ ಇರುವುದಿಲ್ಲ!

ಅಥವಾ ಬಹುಶಃ ಆ ಭಯಂಕರವಾದ ಅಂಧಕಾರದಲ್ಲಿ ನನ್ನ ಶಿರವು ದಡದಿಂದ ಕಳಚಿಬಿದ್ದುದನ್ನು, ನನ್ನ ಸಮಾಧಿಯ ಸುತ್ತಲೂ ಭೂತ–ಪ್ರೇತಗಳ ಕೋಲಾಹಲವನ್ನು ಕಾಣಬಹುದು. ಅಲ್ಲದೆ, ಆ ಮೃತ್ಯುವಿನ ಹವೆಯಿಂದ ಜಗತ್ತಿನೊಳಗಿನ ಒಂದು ಭಾಗದ ಪರದೆ ಸರಿದಿರುವುದು. ದಾನವರ ತಂಡವು ವಿಜೃಂಭಣೆಯಿಂದ ಆ ಮಾರ್ಗವಾಗಿ ನುಗ್ಗುತ್ತಿದೆ ನಾಲ್ಕು ನಿಟ್ಟಿಗೂ ದರಿದ್ರರು ನೆರೆದಿದ್ದಾರೆ. ಕೆಳಗೆ ರಕ್ತದ ನದಿ ಹರಿಯುತ್ತಿದೆ. ನನ್ನ ತಲೆಯ ಮೇಲಿರುವ ಆಕಾಶದಲ್ಲಿಯೂ ಕತ್ತಲೆ ಮುತ್ತಿದೆ. ನಕ್ಷತ್ರಗಳು ಬೆಂಕಿಯ ಹಕ್ಕಿಗಳಾಗಿ ಅತ್ತಿತ್ತ ಹಾರಾಡುತ್ತಿವೆ, ನನಗಿಂತ ಮೊದಲು ಕೊಲ್ಗಂಬದ ಹಲಗೆಯ ಮೇಲೆ ಜೀವ ಬಿಟ್ಟವರು ನನ್ನನ್ನು ಈಗ ನಿರೀಕ್ಷಿಸುತ್ತಿದ್ದಾರೆ. ಅವರ ನೆರಳನ್ನು ನಾನು ಇಲ್ಲಿಂದಲೇ ಕಾಣುತ್ತಿದ್ದೇನೆ. ರಕ್ತ–ಮಾಂಸವಿಲ್ಲದ ಬಡಕಾಟಿ ಮೈ, ಗುದ್ದು ಸೇರಿದ ಕಣ್ಣು, ಬಾಡಿದ ಮೋರೆ–ಎಂಥ ಭಯಾನಕ ರೂಪವಿದು! ಬೆಳಕು-ಕತ್ತಲೆಯ ಸಂಧಿಪ್ರಕಾಶದಲ್ಲಿ ನಿಂತುಕೊಂಡು ಪಿಸಿ-ಪಿಸಿ ಏನೋ ಹೇಳುತ್ತಿದ್ದಾರೆ. ಅವರ ಮೋರೆಯ ಮೇಲೆ ನಗೆ ಹೆಸರಿಗೂ ಉಳಿದಿಲ್ಲ. ಆದರೆ ಭಯದ ಚಿಹ್ನವು ಮಾತ್ರ ಇದೆ—ಒಂದು ಅಧೈರ್ಯದ ಆವೇಶವಿದೆ! ಆದರೆ ಉಳಿದ ಶಕ್ತಿಗಳ ಅಸ್ತಿತ್ವವೇ ಉಳಿದಿಲ್ಲ ಮೀಲಾ ಹೋಟಲಿನ ಆ ಕಠೋರವಾದ ಗಡಿಯಾರವು ನನ್ನನ್ನು ನೋಡಿ ಗಹಗಹಿಸಿ ಹಾಸ್ಯಮಾಡುತ್ತಿದೆ ನನಗೆ ಕೊನೆಯ ಕಾಲದ ನೆನಪನ್ನು ಮಾಡಿ ಕೊಡುತ್ತಿದೆ, ಈ ಜಗತ್ತಿನಲ್ಲಿ ಏನೂ ಇಲ್ಲ—ತುಸುವಾದರೂ ಅಂತಃಕರಣವಿಲ್ಲ!

ಇದೇ ತರದ ಹೋರಾಟವು ಹೃದಯದೊಳಗೂ ನಡೆದಿದೆ. ಒಂದು ನಿಮಿಷವೂ ಶಾಂತಿಯಿಲ್ಲ.

ಅಯ್ಯೊ, ಕೊನೆಗೆ ಈ ಮೃತ್ಯುವಾದರೂ ಏನು? ಇದರ ಅಸ್ತಿತ್ವವಾದರೂ ಏನು? ಆತ್ಮದ ಕೂಡ ಇದು ಹೀಗೇಕೆ ವಿರೋಧ ಮಾಡುತ್ತಿರು

ವುದು? ಒಂದೇ ಒಂದು ಆಘಾತದಿಂದ ದೇಹವನ್ನು ಮಣ್ಣುಪಾಲು ಮಾಡಿ ಬಿಡುವುದು—ಆಗ ಮನಸ್ಸಿನೊಳಗಿನ ಈ ಚೈತನ್ಯ, ಈ ಸಹಾನುಭೂತಿ, ಈ ಪ್ರೇಮ, ಈ ಗೆಳೆತನ, ಈ ದಯೆ, ಈ ವಿಶ್ವವ್ಯಾಪಿ ಚಿತ್ರಗಳನ್ನೆಲ್ಲ ಹೇಗೆ ತೋರಿಸುವುದು? ಕಠೋರವಾದ ಪೃಥ್ವಿಗೆ ಇಷ್ಟು ಅಂತಃಕರಣವಿಲ್ಲವೆ? ಈ ಪೃಥ್ವಿಯಲ್ಲಿ ಮೃತ್ಯುವನ್ನು ಸೋಲಿಸಿ, ತನ್ನ ಕೈಯಿಂದಲೇ ನಿರ್ಮಿಸಿದ ಜೀವಿಗಳ ರಕ್ಷಣೆಯನ್ನು ಮಾಡುವ ಶಕ್ತಿ ಇಲ್ಲವೆ? ಅಯ್ಯೋ, ನನ್ನ ದೇವರೆ, ನಿನ್ನ ಈ ಸೃಷ್ಟಿಯ ಲೀಲೆ ಎಷ್ಟು ವಿಚಿತ್ರವಾಗಿದೆಯಲ್ಲ! ನಿನ್ನೀ ಆಟವು ಎಷ್ಟು ಮಮತ್ವ ಹೀನವಾಗಿದೆಯಲ್ಲ, ಇದು! ಇದು! ನಿನ್ನ ಈ ಆಟ....!

## ೨೩

ಒಂದು ಸಾರೆಯಾದರೂ ನಿದ್ರಾದೇವಿಯನ್ನು ಪೂಜಿಸುವಾ ಎಂದು ಹಾಸುಗೆಯ ಮೇಲೆ ಅಡ್ಡಾಗಿದ್ದೆ.

ಮೈಯೊಳಗಿನ ರಕ್ತವೆಲ್ಲ ತಲೆಯೊಳಗೆ ಬಂದು ಹೆಪ್ಪುಗಟ್ಟಿದಂತಾಗಿದೆ. ನನ್ನ ಆಯುಷ್ಯದಲ್ಲಿ ಇದೇ ಕೊನೆಯ ನಿದ್ದೆಯಾಗಬಹುದು!

ಆಗೊಂದು ಕನಸು ಕಂಡೆ.

ಸ್ತಬ್ಧವೂ, ಗಂಭೀರವೂ ಆದ ರಾತ್ರಿ! ಇಬ್ಬರು ಗೆಳೆಯರೊಂದಿಗೆ ಪಡಸಾಲೆಯೊಳಗೆ ಕುಳಿತುಕೊಂಡಿದ್ದೆ ಹೊಂದಿಯೇ ಇದ್ದ ಕೋಣೆಯೊಳಗೆ ಅವಳು ಮಲಗಿದ್ದಾಳೆ—ಮೇರಿ ಅವಳನ್ನು ಎದೆಗೆ ಅಪಚಿಕೊಂಡು ಮಲಗಿದ್ದಾಳೆ!

ನಾನು ಬಹಳ ಮೆಲ್ಲ-ಮೆಲ್ಲಗೆ ಮಾತನಾಡುತ್ತಿದ್ದೆ—ಯಾರೂ ನಿದ್ದೆಗೆಡಬಾರದು, ಹೆದರಬಾರದೆಂದು! ಒಮ್ಮೆಲೇ ಒಂದು ಸಪ್ಪಳವಾಯಿತು ನಾನು ಬೆಚ್ಚಿಬಿದ್ದೆ! ಅದನ್ನು ನೋಡಲು ಎದ್ದೆ, ಕಳ್ಳರು ಬಂದಿದ್ದಾರೆ!

ಸುತ್ತಲೂ ಹುಡುಕಿದೆ, ಆದರೆ ಯಾರೂ ಇದ್ದಿಲ್ಲ—ಯಾರ ಸುಳಿವೂ ಇಲ್ಲ!

ಅಲ್ಲಿ ಚಿಮಣಿಯ ಹಿಂದೆ ಅದೇನು, ಯಾರವರು?

ಒಬ್ಬ ಹೆಂಗುಸು—ಮಾಸಿದ ಕೂದಲು ಮೋರೆಯ ತುಂಬ ಹರಡಿವೆ.

ಮೋರೆಯ ಮೇಲೊಂದು ಕಠೋರದ ಭಾವವು ಹೊರಹೊಮ್ಮುತ್ತಿದೆ! ಕಣ್ಣು ಮುಚ್ಚಿದ್ದುವು. ನಾನು ಕೇಳಿದೆ, "ನೀನಾರು?"

ಅವಳು ಉತ್ತರವನ್ನೇ ಕೊಡಲಿಲ್ಲ, ನಾವು ಕೇಳಿದೆವು—"ಬೇಗ ಹೇಳು, ನೀನು ಯಾರು?" ಆದರೂ ಅವಳು ಮೌನವಾಗಿಯೇ ಇದ್ದಳು. ಕಣ್ಣುಗಳೂ ಮೊದಲಿನಂತೆಯೇ ಮುಚ್ಚಿವೆ! ನನ್ನ ಗೆಳೆಯನು ಹೇಳಿದ, "ಅವಳ ಮೋರೆಯನ್ನು ದೀಪ ಹಿಡಿದು ನೋಡು." ದೀಪವನ್ನು ಅವಳ ಮೋರೆಗೆ ಹಿಡಿದೆ. ಆದರೂ ಅವಳು ಸುಮ್ಮನೇ ಇದ್ದಳು! "ಮಾತನೇಕೆ ಆಡುವುದಿಲ್ಲ?" ನಾನೆಂದೆ. ಆದರೂ ಅವಳು ಮಿಸುಗಲಿಲ್ಲ ನಾವು ದಂಗುಬಡಿದೆವು! ಅಯ್ಯೋ ದೇವರ, ಎಂಥ ಸಂಕಟ ಬಂದಿತಪ್ಪ ಇದು!

ಗೆಳೆಯನು ಹೇಳಿದ, "ಬೆಳಕನ್ನು ಇನ್ನಿಷ್ಟು ಹತ್ತಿರ ತೆಗೆದುಕೊಂಡು ಬಾ," ನಾನು ದೀಪವನ್ನು ತೀರ ಕಣ್ಣಿನ ಹತ್ತಿರ ಹಿಡಿದೆ. ಆಗ ಅವಳು ಕಣ್ಣು ತೆರೆದಳು. ಅಯ್ಯೋ, ಅವಳ ಆ ದೃಷ್ಟಿ ಎಷ್ಟು ತೀಕ್ಷ್ಣವಾಗಿದ್ದಿತಲ್ಲ! ನಾನು ಒಮ್ಮೆಲೇ ಕಣ್ಣು ಮುಚ್ಚಿಕೊಂಡೆ. ಆಗಲೇ ನನ್ನ ಕಣ್ಣು ಉರಿಯುತೊಡಗಿದುವು. ಆಮೇಲೆ ಕಣ್ಣು ತೆರೆದು ನೋಡಿದೆ—ಮತ್ತೆ ಅದೇ ಸೆರೆಮನೆ. ನನ್ನ ಹಾಸುಗೆಯ ಹತ್ತರ ಆಚಾರ್ಯರು ನಿಂತಿದ್ದಾರೆ!

ನಾನು ಅವರನ್ನು ಕೇಳಿದೆ. "ನಾನು ಮಲಗಿ ಬಹಳ ಹೊತ್ತಾಯಿತೇ?" ಅವರು ಹೇಳಿದರು, "ಹೂಂ, ಒಂದು ತಾಸಾಯಿತು ಮಲಗಿ, ನಿಮ್ಮ ಮಗಳನ್ನೂ ಕರೆದುಕೊಂಡು ಬಂದಿದ್ದೇನೆ, ಮೋರಿಯನ್ನು ನೋಡುವುದಿಲ್ಲವೆ? ನಿಮ್ಮನ್ನೆಬ್ಬಿಸಲು ಅವರು ಪ್ರಯತ್ನಪಟ್ಟರು, ಆದರೆ ನೀವು ಏಳಲಿಲ್ಲ, ಆಮೇಲೆ ನನ್ನನ್ನು ಕರೆದರು. ನಿಮ್ಮ ಮಗಳು ಮೋರಿ—"

ನಾನು ಒದರಿದೆ "ಮೋರಿ! ನನ್ನ ಮಗಳೇ ಮೋರಿ! ಎಲ್ಲಿದ್ದಾಳೆ ಅವಳು? ಬೇಗ ಹೇಳಿರಿ! ಕರೆದುಕೊಂಡು ಬನ್ನಿರಿ, ಅವಳನ್ನು ಕೂಡಲೆ ಕರೆತನ್ನಿರಿ. ಎದೆಗೆ ಅವಚಿಕೊಂಡು ಮುದ್ದಾಡುವೆ!"

## ೨೪

ಮೋರಿ! ಅವಳ ಮೈಬಣ್ಣ ಗುಲಾಬಿ ಹೂವಿನಂತಿದೆ, ಅವಳ ತುಟಿ ದ್ರಾಕ್ಷೆಯ ಹಣ್ಣಿನಂತಿವೆ—ಅಯ್ಯೋ, ಪ್ರೀತಿಯ ಮಗು ಮೋರಿ!

ಕರಿಯ ಬಣ್ಣದ ಒಟ್ಟಿಗೆಗಳನ್ನುಟ್ಟಾಗ ಅವಳು ಎಷ್ಟು ಒಪ್ಪುತ್ತಿದ್ದಳಲ್ಲ? ನಾನವಳನ್ನು ಎತ್ತಿಕೊಂಡೆ, ಸಾವಿರಾರು ಸಾರೆ ಅವಳ ಗಲ್ಲಕ್ಕೆ ಮುದ್ದಿಟ್ಟೆ.

ಸೋಜಿಗದಿಂದ ಅವಳು ನನ್ನನ್ನು ನಿಟ್ಟಿಸುತ್ತಿದ್ದಳು. ದಾಯಿ ಅಳುತ್ತಿದ್ದಳು.

ವ್ಯಿದಡವಿ ನಾನವಳನ್ನು ಎದೆಗೆ ಅವಚಿಕೊಂಡೆ. ಬಿಗಿದ ಕಂಠದಿಂದ ನಾನು ಮಾತಾಡಿದೆ. "ಮೇರಿ, ನನ್ನ ಪ್ರೀತಿಯ ಮಗು ಮೇರಿ!"

ಅತ್ಯಂತ ಮೃದುಭಾವದಿಂದ ಒಂದು ಸಾರೆ ದೂಡಿ ತನ್ನ ಮೋರೆಯನ್ನು ಸರಿಸಿಕೊಂಡಳು. ನನ್ನ ಕೂಡ ಮಾತನಾಡಿದಳು—"ಅಯ್ಯೋ! ನೀವಾರು? ಬಿಡಿರಿ ನನ್ನನ್ನು!"

"ನೀವಾರು?"

ಸುಮಾರು ಒಂದು ವರುಷವಾದ ಮೇಲೆ ಈಗ ಕೂಡಿದೆವು! ಇದೊಂದೇ ವರುಷದೊಳಗೆ ಮೇರಿ ನನ್ನನ್ನು ಮರೆತುಬಿಟ್ಟಳು. ನನ್ನ ಮಾತು, ನನ್ನ ಸುಖ, ನನ್ನ ಮರ್ಯಾದೆಗಳೆಲ್ಲವನ್ನೂ ಮರೆತುಬಿಟ್ಟಳೆ! ಆದರೆ ಇದರೊಳಗೆ ಆವಳ ಅಪರಾಧವಾದರೂ ಏನು?

ನನ್ನ ಗಡ್ಡ-ಮೀಸೆ, ತಲೆ ಜಟೆ ಬಿಟ್ಟವರಂತೆ ಬೆಳೆದಿವೆ, ಗಲ್ಲಗಳು ಒಳ ಸೇರಿವೆ. ಕೈದಿಯ ವೇಷದಲ್ಲಿ ನಾನಿದ್ದೇನೆ, ಬಿಗಿದ ಕಂಠ—ಇರಲಿ, ನಾನು ಹೀಗಿರುವಾಗ ಅವಳು ನನ್ನನ್ನು ಹೇಗೆ ಗುರ್ತಿಸಬಲ್ಲಳು?

ಮೇರಿ ನನ್ನನ್ನು ಮರೆತಿಲ್ಲ, ನನ್ನನ್ನು ನೆನೆಸುತ್ತಿರುವಳು ಮುಂತಾದ ವಿಚಾರಗಳಿಂದ ನನ್ನ ಮನಸ್ಸು ಶಾಂತವಾಗುತ್ತಿತ್ತು. ಆದರೆ ಅವಳೂ ಇಂದು ನನ್ನನ್ನು ಮರೆತುಬಿಟ್ಟಿರುವಳಲ್ಲ! ಅಯ್ಯೋ, ನನ್ನ ಅದೃಷ್ಟವೆ!!

ಇಂದು ನಾನು ಅವಳ 'ಬಾಬೂ' ಅಲ್ಲ, ನಾನಿಂದು ನನ್ನ ಮಗುವಿನ ಬಾಯಿಂದ ಹೊರಡುವ ಮಧುರ ಸಂಬೋಧನದಿಂದ, ಹೂವಿನ ಎಸಳಿನಂತೆ ಇದ್ದ ಅವಳ ಬಾಯಿಂದ ಬರುವ 'ಬಾಬೂ' ಎಂಬ ಕಕ್ಕುಲತೆಯ ಮಾತಿನಿಂದ ವಂಚಿತನಾಗಿದ್ದೇನೆ—ಅಯ್ಯೋ, ನನಗಿನ್ನಾರು ಗತಿ!

ಎಂಥ ಭಯಂಕರವಾದ ಶಾಪವಿದು!

ಈ ಜೀವನದ ಇಂಥ ವಿಷ ವೇಳೆಯಲ್ಲಿ ಒಮ್ಮೆಯಾದರೂ, ಕೇವಲ ಒಂದೇ ಸಾರೆ, ಆ ಸಂಬೋಧನಕ್ಕೆ ಪ್ರತಿಯಾಗ, ನನ್ನ ಮಗುವಿನ ಬಾಯಿಂದ

ಒಂದು ಆವ್ಹಾನವನ್ನು ಒಂದು ಕ್ಷಣವಾದರೂ ಕೇಳಿದರೆ ಸಾಕು, ನಾಲ್ವತ್ತು ವರುಷ ಬದುಕಿ ಬಾಳಿದ ಈ ದೀರ್ಘ ಜೀವನವನ್ನು ನಗು-ನಗುತ್ತ ತೊರೆವೆ.

"ಮೇರಿ!" ಅವಳ ಎರಡೂ ಕೈಗಳನ್ನು ಅಮುಕಿ ಹಿಡಿದುಕೊಂಡು ಮಾತನಾಡಿದೆ. "ಮೇರಿ ನನ್ನ ಪ್ರೀತಿಯ ಮಗಳೆ, ನನ್ನ ಗುರುತು ಹತ್ತುವು ದಿಲ್ಲವೆ?"

ತನ್ನ ಹೊಳೆಯುವ ನೇತ್ರಗಳನ್ನು ಹೊರಳಿಸಿ, ತುಸು ಸಿಟ್ಟಿನಲ್ಲಿಯೇ ಹೇಳಿದಳು, "ಇಲ್ಲ!"

"ನೋಡು, ಚೆನ್ನಾಗಿ ನೋಡು, ನಾನು ಯಾರು!" ನಾನೆಂದೆ.

"ನೀವು ಯಾರೋ ಏನೊ ನನಗೇನು ಗೊತ್ತು? ಯಾರಾದರೂ ಸಜ್ಜನ ರಿರಬಹುದು!" ಅವಳೆಂದಳು. ಅಯ್ಯೊ, ಅವಳ ಕಂಠವು ಸುರಮ್ಯವಾಗಿದ್ದಿತಲ್ಲ!

ಅಯ್ಯೊ, ಅವಳ ನಸುನಗೆಯನ್ನು ನೋಡಲು ಈ ಜಗತ್ತಿನೊಳಗೆ ನಾನು ಏನು ಬೇಕಾದರೂ ಮಾಡಲು ಸಿದ್ಧನಿದ್ದೇನೆ. ಆದರೆ ಅವಳ ಬಾಯಿಂದಲೇ ಇದೆಂಥ ಮಾತು? ಅವಳ ಆ ನೋಟವೆಂಥದು?

"ಮೇರಿ, ನಿಮ್ಮ ತಂದೆ ಇದ್ದಾನೆಯೆ?" ನಾನು ಕೇಳಿದೆ.

"ಇದ್ದಾನೆ! ಏಕೆ?" ಅವಳೆಂದಳು

"ಎಲ್ಲಿದ್ದಾನೆ?" ನಾನು ಕೇಳಿದೆ.

"ಅವನೇ; ನೀವೇ ಹೇಳಿರಿ!" ನನ್ನ ಕಡೆಗೆ ನೋಡುತ್ತ ಅವಳೆಂದಳು.

ಅಯ್ಯೊ, ನನ್ನ ಪ್ರೀತಿಯ ಮಗು! ಅಯ್ಯೊ, ಕಂದಿ ಕುಂದಿದ ತಂದೆಯ ಹೃದಯದ ವೇದನೆಯೆ! ನಾನು ಮತ್ತೆ ಕೇಳಿದೆ, "ಎಲ್ಲಿದ್ದಾನೆ ಅವನು?"

ಮೇರಿಯ ಕಣ್ಣುಗಳಲ್ಲಿ ನೀರೂರಿತು, ಅವಳು ಬಿಗಿದ ಕಂಠದಿಂದ ಹೇಳಿದಳು – "ಸ್ವರ್ಗದಲ್ಲಿದ್ದಾನೆ!"

ನಾನು ಕೇಳಿದೆ, "ಸ್ವರ್ಗದಲ್ಲಿಯೆ! ಮೇರಿ ನಿನಗೆ ಗೊತ್ತಿದೆಯೆ, ಆ ಸ್ವರ್ಗವೆಲ್ಲಿದೆ? ಸ್ವರ್ಗವೆಂದರೇನು ಗೊತ್ತಿದೆಯೆ?"

ಮೇರಿಯ ಕಣ್ಣುಗಳಿಂದ ಕಣ್ಣೀರಿನ ಹೊನಲು ಹರಿಯಹತ್ತಿತು. ಮೈದಡವಿದೆ.

"ಮೇರಿ, ಒಮ್ಮೆ ದೇವರನ್ನು ನೆನೆ." ನಾನೆಂದೆ.

"ಇಲ್ಲ, ಮಹನೀಯರೆ, ಕಂಡಕಂಡಾಗಲೆಲ್ಲ ಅವನಿಗೆ ತೊಂದರೆ ಕೊಡುವುದು ಬೇಡ. ನಾನು ಸಾಯಂಕಾಲದಲ್ಲಿ ಪ್ರಾರ್ಥನೆ ಮಾಡುವೆ." ಅವಳು ಹೇಳಿದಳು.

ನನ್ನ ಮನಸ್ಸು ಹೊಯ್ದಾಡುತ್ತಿದ್ದಿತು! ಈ ಹುಡುಗಿ- ಈ ಮೇರಿ ಇವಳು ನನ್ನ ಮಗಳು! ಅಯ್ಯೋ, ಇಂದು ಇವಳು ನನ್ನ ಮಗಳಲ್ಲ—ಇಂದು ನಾನು ಇವಳ ಹತ್ತುಗಡೆಯುವನಲ್ಲ. ಅಲ್ಲ-ಅಲ್ಲ – ನಾನು ಇವಳ "ಜನ್ಮದಾತ" ಖಂಡಿತವಾಗಿಯೂ ಹೌದು, ಹೇಗಾದರೂ ಮಾಡಿ ನಾನಿವಳಿಗೆ ತಿಳಿಸಿ ಹೇಳುವೆ ನಾನು ಸ್ವರ್ಗದಲ್ಲಿ ಇಲ್ಲ ನರಕದಲ್ಲಿಯೂ ಇಲ್ಲ ಇದೇ ಸೆರೆಮನೆಯೊಳಗೆ, ಕೊಲ್ಗಂಬಕ್ಕೆ ಆಹುತಿಯಾಗಲು ಕುಳಿತಿದ್ದೇನೆ

"ಮೇರಿ, ನೀನು ನನ್ನನ್ನು ಗುರ್ತಿಸದೆ ಹೋದೆಯಾ, ನಾನು ನಿನ್ನ ತಂದೆ." ನಾನು ಹೇಳಿದೆ.

"ಅಲ್ಲ..." ಅವಳು ಸಿಟ್ಟಿನಿಂದ ನುಡಿದಳು.

"ನನ್ನ ಪ್ರೀತಿಯ ಮಗು, ನನ್ನನ್ನು ಹೇಗೆ ಮರೆತೆ? ನೋಡು, ಸರಿಯಾಗಿ ನೋಡ, ಮನೆಯಲ್ಲಿ ಗುಲಾಬಿ ಹೂವಿನ ತೋಟದಲ್ಲಿ ಕುಳಿತುಕೊಂಡು ನಿನಗೆ ಕತೆ ಹೇಳುತ್ತಿದ್ದೆ—ಚೆಲುವೆಯರ ಕಥೆ—ನಾಯಿ ನರಿಗಳ ಕಥೆ –" ನಾನೆಂದೆ.

ಮೇರಿಯನ್ನು ಮುದ್ದಾಡಿದೆ. ಮತ್ತೆ ಎದೆಗೆ ಅವಚಿಕೊಂಡೆ.

"ಅಯ್ಯೋ! ಬಿಡಿರಿ. ತಲೆಗೆ ಒತ್ತುತ್ತದೆ." ಮೇರಿ ಎಂದಳು.

ನಾನವಳನ್ನು ನನ್ನ ಮೊಳಕಾಲ ಮೇಲೆ ಕುಳ್ಳಿರಿಸಿಕೊಂಡು ಕೇಳಿದೆ. "ನೀನು ಓದಬಲ್ಲೆಯಾ?"

"ಹೂಂ!"

ಒಂದು ವರ್ತಮಾನಪತ್ರವನ್ನು ತೆರೆದು ನಾನು ಅವಳ ಮುಂದೆ ಇಟ್ಟೆ. ಅವಳು ಓದಲಾರಂಭಿಸಿದಳು. "ಪ್ರಾಣದಂಡನೆಗೆ ಗುರಿಯಾದ ಅಪರಾಧಿ—"

ಕೂಡಲೇ ನಾನು ಕಾಗದವನ್ನು ಕಸಿದುಕೊಂಡೆ ಅದನ್ನು ಅವಳು ತನ್ನ ಜೊತೆಯಲ್ಲೇ ತಂದಿದ್ದಳು! ವರ್ತಮಾನಪತ್ರಕಾರರು ನನ್ನ ಕೊಲ್ಗಂಬದ ಸುದ್ದಿಯನ್ನು ದೊಡ್ಡ-ದೊಡ್ಡ ಅಕ್ಷರಗಳಲ್ಲಿ ಕೊಟ್ಟಿದ್ದರು ಎಲ್ಲರ ದೃಷ್ಟಿಯೂ ಅದರ ಮೇಲೆ ಬೀಳಲಿ, ಇಷ್ಟು ದೊಡ್ಡ ಸಮಾರಂಭ

ವನ್ನು ನೋಡಲು ಜನರು ಪರಸೆಯುಂತೆ ನೆರೆಯಲಿ ಎಂಬುದೇ ಅವರ ಉದ್ದೇಶವಿರಬಹುದು.

ನನ್ನ ಮನೋಭಾವಗಳನ್ನು ಬರೆದು ತೋರಿಸಲು ನಾನು ಸಮರ್ಥನಿಲ್ಲ. ನನ್ನ ವಿಕರಾಳ ಸ್ವರೂಪವನ್ನು ನೋಡಿ ಮೇರಿ ಅಳಲಾರಂಭಿಸಿದಳು. ಅವಳು ಹೇಳಿದಳು, "ತನ್ನಿರಿ, ನನ್ನ ಕಾಗದವನ್ನು ಕೊಡಿರಿ ನಾನು ಹಡಗ ಮಾಡುವೆ "

ದಾದಿಯ ಕೈಗೆ ಪತ್ರವನ್ನು ಕೊಡುತ್ತ ನಾನು ಹೇಳಿದೆ, "ಇವಳನ್ನು ಕರೆದುಕೊಂಡು ಹೋಗು, ಮನೆಯೊಳಗೆ ಹೇಳು........" ಮುಂದೆ ಮಾತೇ ಹೊರಡಲಿಲ್ಲ. ಏನೆಂದು ಸಂದೇಶವನ್ನು ಕಳುಹಲಿ! ಕಿಡಿಕಿಯ ಹತ್ತಿರ ಒಂದು ಕುರ್ಚಿಯ ಮೇಲೆ ಕುಳಿತುಕೊಂಡೆ!—ನೆತ್ತಿಗೇರಿದ ರಕ್ತವು ತಾಂಡವವಾಡುತ್ತಿದ್ದಿತು!

ಆ ಯಮಲೋಕದ ಭಯಂಕರಾಕಾರದ ಯಮದೂತರೆಲ್ಲಿದ್ದಾರೆ? ಬರಲಿ ಬಿಡು. ಇನ್ನೇನು ಉಳಿದಿದೆ! ಜಗತ್ತಿನೊಳಗೆ ಈಗ ನನ್ನವರು ಯಾರೂ ಇಲ್ಲ—ಇನ್ನು ನನಗೆ ಬದುಕಿ ಬಾಳುವ ಬಯಕೆಯೂ ಇಲ್ಲ ನನ್ನನ್ನು ಬಂಧಿಸಿದ ಜಗತ್ತಿನ ಬಂಧನವೂ ಬಿರಿಯಿತು. ಆದರೆ ಮತ್ತೆ ಈಗ ಈ ಮಾಯೆ—ಮಮತೆಗಳೇಕೆ?

## ೨೫

ಆಚಾರ್ಯರೂ ದೊಡ್ಡ ಮನಸ್ಸಿನವರು. ಜೇಲರರಾದರೂ ಕಲ್ಲೆದೆಯವರಲ್ಲ. ದಾದಿಯು ಮೇರಿಯನ್ನು ಕರೆದೊಯ್ಯುವಾಗ ಅವರಿಬ್ಬರ ಕಣ್ಣುಗಳಲ್ಲಿಯೂ ನೀರು ಸುರಿಯುತ್ತಿತ್ತು.

ಮುಗಿಯಿತು-ಎಲ್ಲವೂ ಮುಗಿಯಿತು! ಕೇವಲ ಸಾಹಸ, ಬಲ! ದಾರಿಯ ಮೇಲೆ ನಿಂತ ಜನ - ಕೊಲ್ಗಂಬದ ಹಲಗೆಯ ಹತ್ತಿರ ಸಾಗುವುದು-ಆಮೇಲೆ ಈ ಜಗತ್ತೆಲ್ಲೊ — ಮತ್ತೆ ನಾನೆಲ್ಲೊ?

ಯಾರೋ ನಗುವರು, ಯಾರೋ ಚಪ್ಪಾಳೆ ಹೊಡೆಯುವರು, ಹಲವರು ಒದರಾಡುವರು! ಆದರೂ ಇವರಿಗೆ ಗೊತ್ತಿಲ್ಲ ಒಂದಿಲ್ಲೊಂದು ದಿನ ಇವರಾದರೂ ನನ್ನನ್ನೇ ಹಿಂಬಾಲಿಸುವರು! ಇಂದು ನನ್ನ ಆಟವನ್ನು

"ಇಲ್ಲ, ಮಹನೀಯರೆ, ಕಂಡಕಂಡಾಗಲೆಲ್ಲ ಆವನಿಗೆ ತೊಂದರೆ ಕೊಡುವಾಗ ಬೇಡ. ನಾನು ಸಾಯಂಕಾಲದಲ್ಲಿ ಪ್ರಾರ್ಥನೆ ಮಾಡುವೆ." ಅವಳು ಹೇಳಿದಳು.

ನನ್ನ ಮನಸ್ಸು ನೊಯ್ದಾಡುತ್ತಿದ್ದಿತು! ಈ ಹುಡುಗಿ- ಈ ಮೇರಿ ಇವಳು ನನ್ನ ಮಗಳು! ಅಯ್ಯೊ, ಇಂದು ಇವಳು ನನ್ನ ಮಗಳಲ್ಲ— ಇಂದು ನಾನು ಇವಳ ಹೆತ್ತುಗಡೆಯುವನಲ್ಲ. ಅಲ್ಲ- ಅಲ್ಲ – ನಾನು ಇವಳ "ಜನ್ಮದಾತ" ಖಂಡಿತವಾಗಿಯೂ ಹೌದು, ಹೇಗಾದರೂ ಮಾಡಿ ನಾನಿವಳಿಗೆ ತಿಳಿಸಿ ಹೇಳುವೆ ನಾನು ಸ್ವರ್ಗದಲ್ಲಿ ಇಲ್ಲ ನರಕದಲ್ಲಿಯೂ ಇಲ್ಲ ಇದೇ ಸೆರೆಮನೆ ಯೊಳಗೆ, ಕೊಲ್ಗಂಬಕ್ಕೆ ಆಹುತಿಯಾಗಲು ಕುಳಿತಿದ್ದೇನೆ

"ಮೇರಿ, ನೀನು ನನ್ನನ್ನು ಗುರ್ತಿಸದೆ ಹೋದೆಯಾ, ನಾನು ನಿನ್ನ ತಂದೆ." ನಾನು ಹೇಳಿದೆ.

"ಅಲ್ಲ." ಅವಳು ಸಿಟ್ಟಿನಿಂದ ನುಡಿದಳು.

"ನನ್ನ ಪ್ರೀತಿಯ ಮಗು, ನನ್ನನ್ನು ಹೇಗೆ ಮರೆತೆ? ನೋಡು, ಸರಿ ಯಾಗಿ ನೋಡ, ಮನೆಯಲ್ಲಿ ಗುಲಾಬಿ ಹೂವಿನ ತೋಟದಲ್ಲಿ ಕುಳಿತು ಕೊಂಡು ನಿನಗೆ ಕತೆ ಹೇಳುತ್ತಿದ್ದೆ— ಚೆಲುವೆಯರ ಕಥೆ— ನಾಯಿ ನರಿಗಳ ಕಥೆ —" ನಾನೆಂದೆ.

ಮೇರಿಯನ್ನು ಮುದ್ದಾಡಿದೆ. ಮತ್ತೆ ಎದೆಗೆ ಅವಚಿಕೊಂಡೆ.

"ಅಯ್ಯೊ! ಬಿಡಿರಿ. ತಲೆಗೆ ಒತ್ತುತ್ತದೆ." ಮೇರಿ ಎಂದಳು.

ನಾನವಳನ್ನು ನನ್ನ ಮೊಳಕಾಲ ಮೇಲೆ ಕುಳ್ಳಿರಿಸಿಕೊಂಡು ಕೇಳಿದೆ. "ನೀನು ಓದಬಲ್ಲೆಯಾ?"

"ಹೂಂ!"

ಒಂದು ವರ್ತಮಾನಪತ್ರವನ್ನು ತೆರೆದು ನಾನು ಅವಳ ಮುಂದೆ ಇಟ್ಟೆ. ಅವಳು ಓದಲಾರಂಭಿಸಿದಳು. "ಪ್ರಾಣದಂಡನೆಗೆ ಗುರಿಯಾದ ಅಪರಾಧಿ—"

ಕೂಡಲೇ ನಾನು ಕಾಗದವನ್ನು ಕಸಿದುಕೊಂಡೆ ಅದನ್ನು ಅವಳು ತನ್ನ ಜೊತೆಯಲ್ಲೇ ತಂದಿದ್ದಳು! ವರ್ತಮಾನಪತ್ರಕಾರರು ನನ್ನ ಕೊಲ್ಗಂ-ಬದ ಸುದ್ದಿಯನ್ನು ದೊಡ್ಡ-ದೊಡ್ಡ ಅಕ್ಷರಗಳಲ್ಲಿ ಕೊಟ್ಟಿದ್ದರು ಎಲ್ಲರ ದೃಷ್ಟಿಯೂ ಅದರ ಮೇಲೆ ಬೀಳಲಿ, ಇಷ್ಟು ದೊಡ್ಡ ಸಮಾರಂಭ

ವನ್ನು ನೋಡಲು ಜನರು ಪರಸೆಯಂತೆ ನೆರೆಯಲಿ ಎಂಬುದೇ ಅವರ ಉದ್ದೇಶವಿರಬಹುದು.

ನನ್ನ ಮನೋಭಾವಗಳನ್ನು ಬರೆದು ತೋರಿಸಲು ನಾನು ಸಮರ್ಥನಿಲ್ಲ. ನನ್ನ ವಿಕರಾಳ ಸ್ವರೂಪವನ್ನು ನೋಡಿ ಮೇರಿ ಅಳಲಾರಂಭಿಸಿದಳು. ಅವಳು ಹೇಳಿದಳು, “ತನ್ನಿರಿ, ನನ್ನ ಕಾಗದವನ್ನು ಕೊಡಿರಿ ನಾನು ಹಡಗ ಮಾಡುವೆ ”

ದಾದಿಯ ಕೈಗೆ ಪತ್ರವನ್ನು ಕೊಡುತ್ತ ನಾನು ಹೇಳಿದೆ, “ಇವಳನ್ನು ಕರೆದುಕೊಂಡು ಹೋಗು, ಮನೆಯೊಳಗೆ ಹೇಳು.......” ಮುಂದೆ ಮಾತೇ ಹೊರಡಲಿಲ್ಲ. ಏನೆಂದು ಸಂದೇಶವನ್ನು ಕಳುಹಲಿ! ಕಿಡಿಕಿಯ ಹತ್ತಿರ ಒಂದು ಕುರ್ಚಿಯ ಮೇಲೆ ಕುಳಿತುಕೊಂಡೆ!—ನೆತ್ತಿಗೇರಿದ ರಕ್ತವು ತಾಂಡವವಾಡುತ್ತಿದ್ದಿತು!

ಆ ಯಮಲೋಕದ ಭಯಂಕರಾಕಾರದ ಯಮದೂತರೆಲ್ಲಿದ್ದಾರೆ? ಬರಲಿ ಬಿಡು. ಇನ್ನೇನು ಉಳಿದಿದೆ! ಜಗತ್ತಿನೊಳಗೆ ಈಗ ನನ್ನವರು ಯಾರೂ ಇಲ್ಲ—ಇನ್ನು ನನಗೆ ಬದುಕಿ ಬಾಳುವ ಬಯಕೆಯೂ ಇಲ್ಲ ನನ್ನನ್ನು ಬಂಧಿಸಿದ ಜಗತ್ತಿನ ಬಂಧನವೂ ಬಿರಿಯಿತು. ಆದರೆ ಮತ್ತೆ ಈಗ ಈ ಮಾಯೆ—ಮಮತೆಗಳೇಕೆ?

## ೨೫

ಆಚಾರ್ಯರೂ ದೊಡ್ಡ ಮನಸ್ಸಿನವರು. ಜೇಲರರಾದರೂ ಕಲ್ಲೆದೆಯವರಲ್ಲ. ದಾದಿಯು ಮೇರಿಯನ್ನು ಕರೆದೊಯ್ಯುವಾಗ ಅವರಿಬ್ಬರ ಕಣ್ಣುಗಳಲ್ಲಿಯೂ ನೀರು ಸುರಿಯುತ್ತಿತ್ತು.

ಮುಗಿಯಿತು-ಎಲ್ಲವೂ ಮುಗಿಯಿತು! ಕೇವಲ ಸಾಹಸ, ಬಲ! ದಾರಿಯ ಮೇಲೆ ನಿಂತ ಜನ - ಕೊಲ್ಗಂಬದ ಹಲಗೆಯ ಹತ್ತಿರ ಸಾಗುವುದು-ಆಮೇಲೆ ಈ ಜಗತ್ತೆಲ್ಲೋ — ಮತ್ತೆ ನಾನೆಲ್ಲೋ ?

ಯಾರೋ ನಗುವರು, ಯಾರೋ ಚಪ್ಪಾಳೆ ಹೊಡೆಯುವರು, ಹಲವರು ಒದರಾಡುವರು! ಆದರೂ ಇವರಿಗೆ ಗೊತ್ತಿಲ್ಲ ಒಂದಿಲ್ಲೊಂದು ದಿನ ಇವರಾದರೂ ನನ್ನನ್ನೇ ಹಿಂಬಾಲಿಸುವರು! ಇಂದು ನನ್ನ ಆಟವನ್ನು

ನೋಡಲು ಬಂದಿದ್ದಾರೆ. ಅವರಾದರೂ ನನ್ನಂತೆಯೇ ಒಂದು ದಿವಸ ತಮ್ಮ ಆಟವನ್ನು ಬೇರೆಯವರಿಗೆ ತೋರಿಸಿ ಹೋಗತಕ್ಕವರೇ!

"ಮೇರಿ, ನನ್ನ ಪ್ರೀತಿಯ ಮಗು ಮೇರಿ!"

ಇಲ್ಲ, ಅವಳು ಆಗಲೇ ದಾದಿಯ ಕೂಡ ಹೋಗಿಬಿಟ್ಟಳು! ಬಂಡಿಯೊಳಗೆ ಕುಳಿತುಕೊಂಡು ಬಾಗಿಲೊಳಗಿಂದ ಅವಳು ಈ ಜನರನ್ನು ಖಂಡಿತವಾಗಿ ನೋಡುವಳು, ಯಾವುದೋ ಆಟವು ನಡೆದಿರಬೇಕೆಂದು ತಿಳಿಯುವಳು. ಈ 'ಸಜ್ಜನ'ನ ನೆನಪೇ ಅವಳಿಗೆ ಉಳಿಯಲಿಕ್ಕಿಲ್ಲ ಅವಳು ಈ 'ಸಜ್ಜನ'ನನ್ನು ನೋಡಲಿಕ್ಕೆಂದೇ ಈ ಗುಂಪು ನೆರೆದಿರುವುದನ್ನು ಏನು ಬಲ್ಲಳು? ಆ 'ಸಜ್ಜನ'ನು ಮತ್ತೆ ಯಾರೂ ಅಲ್ಲ, ಅವನದೇ ಇದು "ಸ್ವರ್ಗದ ಮೋಡಿ."

ಅವಳಿಗಾಗಿ ಬರೆದಿಟ್ಟು ಸಾಯುವೆ, ಎಂದಾದರೂ ಒಂದು ದಿನ ಅವಳು ಓದಿ ಅರಿತುಕೊಳ್ಳುವಳು. ಹದಿನಯ್ದು ವರುಷಗಳಾದ ಮೇಲೆ ಅವಳು ಇಂದಿನ ಈ ವೇಳೆಯ ಸಂಗತಿಯನ್ನು ನೆನೆದು ಅಳುವಳು.

ಹೂಂ, ನನ್ನ ಎಲ್ಲ ಹಾಡನ್ನು ಮುಗಿಸಿ ಬಿಡುವೆ ಎಲ್ಲ ಸಂಗತಿಯನ್ನು ಬರೆಯುವೆ– ನನ್ನ ಚರಿತ್ರೆ-ನನ್ನ ಹೆಸರನ್ನು ಇಂದು ರಕ್ತಾಕ್ಷರದಿಂದ ದೇಶದ ಎದೆಯ ಮೇಲೆ ಏಕೆ ಬರೆಯುತ್ತಿದ್ದಾರೆ—ಇದೆಲ್ಲವನ್ನೂ ಅದರಲ್ಲಿ ಬರೆಯುವೆ!

## ೨೬

ಮೀಲಾ ಹೋಟಲಿನ ಕೋಣೆಯಿಂದ—

ಮೀಲಾ ಹೋಟಲ!........ಈಗ ನಾನು ಇಲ್ಲಿಗೆ ಬಂದಿದ್ದೇನೆ, ಆ ಸ್ಥಳ ಅದು ನನ್ನ ಈ ಕಿಡಿಕಿಯ ಕೆಳಗಿದೆ. ಬಹಳ ಜನರು ಗುಂಪಾಗಿ ನೆರೆದಿದ್ದಾರೆ. ಹಲವರು ಕೇಕೆ ಹಾಕುತ್ತಾರೆ, ಕೆಲವರು ಸಿಳ್ಳು ಹೊಡೆಯುತ್ತಾರೆ, ಇನ್ನು ಕೆಲವರು ನಗುತ್ತಾರೆ. ಆ ಭಯಾನಕವಾದ ಆ ಕಂಬವನ್ನು ನೋಡಿದರೆ ಎದೆ ನಡುಗುತ್ತದೆ.

ಅದೋ ಅಲ್ಲಿ ಹೋಗುತ್ತಿರುವವರು ಯಾರು? ಬಹುಶಃ ನನ್ನ ಗಳಿಗೆ ಬಟ್ಟಲ ತುಂಬಿದಂತೆ ತೋರುತ್ತದೆ. ಇನ್ನು ವೇಳೆಯಿಲ್ಲ, ನನ್ನ ಮೈಯೆಲ್ಲವೂ

ನಡುಗುತ್ತಿದೆ. ಆರು ತಾಸಿನಿಂದ—ಆರು ತಿಂಗಳಿಂದ ನಾನು ಹಗಲಿರುಳು ಯೋಚಿಸುತ್ತಿದ್ದ ಪ್ರಸಂಗವೇ ಬಂದಿತು. ಆ ಸಮಯವು ತೀರ ಹತ್ತಿರ ಬಂದಿತು. ಆದರೆ ಅದು ಎಷ್ಟು ಬೇಗ ಬಂದಿತಲ್ಲ!

ಸಣ್ಣದೊಂದು ಕೋಣೆಯೊಳಗೆ ತಂದು ನನ್ನನ್ನು ನಿಲ್ಲಿಸಿದರು. ಕಿಡಿಕಿಯೊಳಗೆ ನಿಂತು ನೋಡಿದರೆ ಆಕಾಶವು ಕಾಣಿಸುತ್ತಿತ್ತು—ನಾಲ್ಕು ನಿಟ್ಟಿಗೂ ಬಾವಿಯುಂತಿದೆ. ನಾನು ಕುರ್ಚಿಯ ಮೇಲೆ ಕುಳಿತುಕೊಂಡೆ. ಕೋಣೆಯೊಳಗೆ ಇನ್ನೂ ಮೂರು-ನಾಲ್ಕು ಮಂದಿಯಿದ್ದರು. ಆಚಾರ್ಯರೂ ಇದ್ದರು. ಒಮ್ಮೆಲೇ ನನ್ನ ಕೂದಲುಗಳಲ್ಲಿ ಕಬ್ಬಿಣದ ತುಂಡೊಂದು ತಣ್ಣಗೆ ಹತ್ತಿತು! ಅದೇನು, ಅದು ಕತ್ತರಿಯ ಕರ-ಕರ ಸಪ್ಪಳ! ನನ್ನ ತಲೆಯ ಮೇಲಿನ ಕೂದಲು ನನ್ನ ಕಾಲ ಮೇಲೆ ಬಿದ್ದುವು! ನನ್ನ ಸುತ್ತಲೂ ಎಲ್ಲರೂ ಕಿವಿಮಾತನಾಡುತ್ತಿದ್ದರು! ನನ್ನ ಗಡ್ಡವನ್ನೂ ಕೆರೆದರು.

ಕತ್ತೆತ್ತಿ ನೋಡಿದೆ, ಒಬ್ಬನು ಕೈಯೊಳಗೆ ಕಾಗದ, ಪೆನ್ಸಿಲುಗಳನ್ನು ಹಿಡಿದುಕೊಂಡು ನನ್ನನ್ನು ಪ್ರಶ್ನೆ ಕೇಳುತ್ತಿದ್ದಾನೆ. ಬಹುಶಃ ಅವನು ವರ್ತಮಾನಪತ್ರದ ಪತಿನಿಧಿಯಿರಬೇಕೆಂದು ತಿಳಿದೆ! ನಾಳಿನ ಪತ್ರಿಕ್ಕಾಗಿ"ಮ್ಯಾಟರ್" ಸಂಗ್ರಹಿಸುತ್ತಿದ್ದಾನೆ. ವರ್ತಮಾನಪತ್ರದವರಿಗೆ ಇದೊಂದು ಸುಗ್ಗಿ-ಸುದ್ದಿಯಾದರೂ ಓದುವಂಥದಿದೆ.

ಇಬ್ಬರು ಕಾವಲುಗಾರರು ಬಂದು ನನ್ನ ಕೈ ಹಿಡಿದರು. ನಾನು ಆಚಾರ್ಯರ ಹಿಂದೆ-ಹಿಂದೆ ಸಾಗಿದೆ

ಹಿತ್ತಿಲಬಾಗಿಲು ತೆರೆಯಿತು.

ಜನಜಾತ್ರೆ ನೆರೆದಿತ್ತು, ನಾಲ್ಕೂ ನಿಟ್ಟಿಗೂ ದನಿಯಾಯಿತು! "ಅವನೆ, ಅವನೆ!" ಸಿಪಾಯಿಗಳು ನನ್ನ ಸುತ್ತಲೂ ನಡೆದಿದ್ದರು. ರಾಜಬೀದಿಯಿಂದ ನನ್ನನ್ನು ಕರೆದುಕೊಂಡು ಹೊರಟಿದ್ದಾರೆ!—ಭಲೆ—ಭಲೆ, ಬಹಳ ಒಳ್ಳೆಯದಾಯಿತು!

ಯಾರೋ ಹೇಳಿದರು, "ಮಹನೀಯರೆ, ನಮಸ್ಕಾರ!"

ಮತ್ತೆ ಯಾರೋ "ರಾಯರೇ, ನಮಸ್ಕಾರ." ಎಂದರು.

"ಅಯ್ಯೊ, ಪಾಪ!" ಒಬ್ಬ ಹೆಣ್ಣುಮಗಳೆಂದಳು.

"ಟೊಪ್ಪಿಗೆಯನ್ನು ತೆಗೆ, ಗೌರವವನ್ನು ಸಲ್ಲಿಸು." ಒಬ್ಬನೆಂದ.

ನನಗೆ ನಗೆ ಬಂದಿತು ಅಯ್ಯೋ, ಇವರು ಟೊಪ್ಪಿಗೆಯನ್ನಷ್ಟೇ ತೆಗೆಯುತ್ತಿದ್ದಾರೆ. ಆದರೆ ನಾನು ತಲೆಯನ್ನೇ ತೆಗೆಯಬೇಕಾಗಿದೆಯಲ್ಲ!

ಆಚಾರ್ಯರ ಕೈಯೊಳಗಿಂದ 'ಕ್ರಾಸ್' ಇಸಿದುಕೊಂಡು ನಾನು ಎದೆಗೆ ಹಚ್ಚಿಕೊಂಡೆ

ಹಠಾತ್ತಾಗಿ ಭಕ್ತಿಯಿಂದ ಕಂಪಿಸುವ ಸ್ವರಗದೊಳಗೆ ನಾನೆಂದೆ-ದೇವರೆ, ಕ್ಷಮಿಸು, ಪಾಪನಾಶಕನು ನೀನೇ—ನೀನು ಬಾಲೆಯರ ಗೆಳೆಯ!"

ಹೆಂಗುಸರ ಕಳವಳದ ಸ್ವರವು ನನ್ನ ಕಿವಿಗೆ ಬಿದ್ದಿತು. ತರುಣನೊಬ್ಬನು ಸಾಯುವುದನ್ನು ನೋಡಿ ಅವರು ದುಃಖಿಸುತ್ತಿದ್ದರು!

ಕೂಡಲೇ ನನ್ನ ಮೈ 'ಜುಂ' ಎಂದಿತು—ನನ್ನ ಮುಂದೆಯೇ ಕೊಲ್ಗಂಬದ ಹಲಗೆ ನಿಂತಿತ್ತು! ಢಣ್, ಢಣ್, ಢಣ್, ಢಣ್, ಎಂದು ನಾಲ್ಕು ಹೊಡೆಯುತ್ತಿದೆ.

ಮಾರಾಟಗಾರರು :

**ಸಮಾಜ ಪುಸ್ತಕಾಲಯ**
**ಧಾರವಾಡ**